ತಾವೇನಾದರೂ ಚರ್ಚೆಗೆ ತೆಗೆದುಕೊಳ್ಳಬೇಕೆಂದರೆ, ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬಹುದು. ನೀವು ಟೈಮ್ ಫಿಕ್ಸ್ ಮಾಡಬಹುದು. ಆದರೆ, 176ರಲ್ಲಿ He should address, he shall address, it is a mandatory provision. ಅದಕ್ಕೆ ತಾವು ಟೈಮ್ ಫಿಕ್ಸ್ ಮಾಡಲೇಬೇಕಾಗುತ್ತದೆ. ಅದರ ಬಗ್ಗೆ ಚರ್ಚೆ ಮಾಡಲೇಬೇಕಾಗುತ್ತದೆ. ಅದರ ಬಗ್ಗೆ ಮೋಷನ್ ಅಡಾಫ್ಟ್ ಮಾಡಿಕೊಂಡು ಪರ ಅಥವಾ ವಿರುದ್ಧ ಅಥವಾ ಸರ್ವಾನುಮತ ಅದನ್ನು ತೆಗೆದುಕೊಂಡು ಹೋಗಬೇಕಾಗುತ್ತದೆ. 175ರಲ್ಲಿ ಆ ಪ್ರಾವಿಜನ್ ಇಲ್ಲ. ಪ್ರಾವಿಷನ್ ಇಲ್ಲವೆಂದಾಗ ನಾವು ಏಕೆ ಸೇರಿದ್ದೇವೆ? ನಾವು ಗವರ್ನರ್ ಅವರಿಗೆ thanks ಕೊಡಬೇಕೆಂದು ಸೇರಿದ್ದಲ್ಲ. ಸರ್ಕಾರದ ಅನೇಕ ಕಾರ್ಯಕ್ರಮಗಳು ಏನಿದೆ ಎಂದು ತಿಳಿದುಕೊಳ್ಳತಕ್ಕಂಥ ದೃಷ್ಟಿಯಿಂದ 19ನೇ ತಾರೀಖು ನಾವು ಆ ಅಡ್ರೆಸ್ ಅನ್ನು ಈ ಸದನಕ್ಕೆ ಕೊಟ್ಟಿದ್ದು. In absence of that, no other address is available in this House except 19th Joint Address of Governor. ಇದನ್ನು ಬಿಟ್ಟು ಬೇರೆ ಯಾವುದೇ ಅಡ್ರೆಸ್ ಈ ಸದನದ ಮುಂದೆ ಇಲ್ಲ. 24ನೇ ತಾರೀಖು ಇದ್ದುದ್ದು ಕೇವಲ ಮೆಸೇಜ್ ಎನ್ನತಕ್ಕಂಥಾದ್ದನ್ನು ತಾವು ಒಪ್ಪಿಕೊಳ್ಳುವುದಲ್ಲ, ಈ ಸಂವಿಧಾನದ ಪ್ರಕಾರ ಒಪ್ಪಿಕೊಳ್ಳುತ್ತೀರೆಂದು ನಾನು ಭಾವಿಸಿದ್ದೇನೆ. ಅದಕ್ಕಾಗಿ ದಯವಿಟ್ಟು ಈ ಒಂದು ಆರ್ಟಿಕಲ್ 175, 176ರ ಏನು distinction ಇದೆ, ಇದರ ಬಗ್ಗೆ ತಾವು immediately ಒಂದು ನಿರ್ಣಯ ತೆಗೆದುಕೊಳ್ಳಬೇಕಾಗುತ್ತದೆ ಮತ್ತು ಗವರ್ನರ್‌ರವರು ಇತ್ತೀಚೆಗೆ 175 ಸಬ್ ಕ್ಲಾಸ್ 1ರಲ್ಲಿ ಏನು ಭಾಷಣ, ಮೆಸೇಜ್ ಕೊಟ್ಟಿದ್ದಾರೆ, ಅದನ್ನು ಗಣನೆಗೆ ತೆಗೆದುಕೊಳ್ಳಬಾರದು. 19ನೇ ಜನವರಿಗೆ ಏನು ಈ ಸದನದಲ್ಲಿ ಒಂದು ಜಂಟಿ ಅಡ್ರೆಸ್ ಆಗಿದೆ, ಅದನ್ನು ತಾವು ತೆಗೆದುಕೊಳ್ಳಬೇಕೆಂದು ತಮಗೆ ಮತ್ತೊಮ್ಮೆ ನಾನು ಮನವಿ ಮಾಡಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೆ, ನಾನು ನನ್ನ point of order ಎತ್ತಿರುವುದರಿಂದ ನಾನು ಮಾತನಾಡುತ್ತಿದ್ದೇನೆ.

(ಈ ಮಧ್ಯೆ ಸದಸ್ಯರಾದ ಶ್ರೀ ಎಂ.ಪಿ. ಪ್ರಕಾಶ್‌ರವರು ಮಾತನಾಡಲು ಎದ್ದು ನಿಂತರು)

ಶ್ರೀ ಜೆ.ಸಿ. ಮಾಧುಸ್ವಾಮಿ: ಸರ್ It has to be heard ಅಲ್ಲವೇ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ದಯವಿಟ್ಟು ನಮ್ಮ ಮಾತನ್ನು ಕೇಳಿ ಸರ್. Point of order ಎತ್ತಿದ ಮೇಲೆ, ನಾವು ಏನು ಹೇಳುತ್ತೇವೆ ಎನ್ನುವುದನ್ನಾದರೂ ಕೇಳಿ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಪ್ರಕಾಶ್‌ರವರೆ, ನಾವು ಹೇಳುವುದಕ್ಕೆ ತಾವು ಅವಕಾಶ ಕೊಡಬೇಕು.

ಶ್ರೀ ಆರ್.ವಿ. ದೇಶಪಾಂಡೆ: . . . ನಾವುಗಳು ಬೆಳಕು ಚೆಲ್ಲುತ್ತೇವೆ. ಅದಾದ ನಂತರ ತಾವು ಹೇಳಿ. ನಾವು ಏನು ಹೇಳಿದ್ದೇವೆಂದರೆ, ಕೆಲವು ವಿಚಾರಗಳನ್ನು ನಾವೂ ಸಪೋರ್ಟ್ ಮಾಡಿದ್ದೇವೆ. ಆದ್ದರಿಂದ, ಬೆಳಕು ಚೆಲ್ಲುತ್ತೇವೆ.

ಶ್ರೀ ಎಂ.ಪಿ. ಪ್ರಕಾಶ್: ಕ್ರಿಯಾಲೋಪವನ್ನು ಎತ್ತುವಂಥ ಅಧಿಕಾರ ಅವರಿಗೆ ಇದೆ. ಅದಕ್ಕೆ ತಾವು ಒಪ್ಪಿಗೆ ಕೊಟ್ಟಿದ್ದರೆ ನಾವು ಕುಳಿತುಕೊಳ್ಳುತ್ತೇವೆ. ಅವರು ಕ್ರಿಯಾಲೋಪ ಎತ್ತಲಿ. ಕ್ರಿಯಾಲೋಪ ಎತ್ತಬಹುದು, ಕ್ರಿಯಾಲೋಪ ಏನೆಂದು ನೋಡಬೇಕಲ್ಲಾ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನಮ್ಮ Point of order ಕೇಳದೇ. . . ನಾವು ಹೇಳಿದ ಮೇಲೆ ತಾನೇ ಅವರು ಅದಕ್ಕೆ ಒಪ್ಪಿಗೆ ಕೊಡಬೇಕೇ ಬಿಡಬೇಕೆ ಎನ್ನುವುದನ್ನು ತೀರ್ಮಾನಿಸುವುದು.

ಶ್ರೀ ಜೆ.ಸಿ. ಮಾಧುಸ್ವಾಮಿ: ಕ್ರಿಯಾಲೋಪ ಏನೆಂಬುದನ್ನು ನೀವು ಕೇಳಲೇಬೇಕಲ್ಲಾ ಸರ್.

ಶ್ರೀ ಎಂ.ಪಿ. ಪ್ರಕಾಶ್: ಕ್ರಿಯಾಲೋಪವನ್ನು ತಾವು ಆಲಿಸಿದ ಮೇಲೆ ಅದು ಸರಿಯಾಗಿದೆ ಅನ್ನತಕ್ಕಂಥಾಗಿದ್ದರೆ, ಕ್ರಿಯಾಲೋಪಕ್ಕೆ ಮಾನ್ಯತೆ ಕೊಡಬಹುದು.

ಅಧ್ಯಕ್ಷರು: ಈಗ ಅವರು ಕೆಲವು ವಿಚಾರಗಳನ್ನು ಹೇಳಿದ್ದಾರೆ. ಅವರು ಏನು ಹೇಳುತ್ತಾರೆ ಎನ್ನುವುದನ್ನು ಈ ಕಡೆಯವರು ಕೇಳಬೇಕು.

ಶ್ರೀ ಜೆ.ಸಿ. ಮಾಧುಸ್ವಾಮಿ: ಅದು ಆಗುವುದಿಲ್ಲ.

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ: ಕ್ರಿಯಾಲೋಪಕ್ಕೆ ಅನುಮತಿ ಬೇಕಿಲ್ಲ.

ಶ್ರೀ ಬಸವರಾಜ ರಾಯರೆಡ್ಡಿ: ಮಾನ್ಯ ಅಧ್ಯಕ್ಷರೆ He has permitted the Leader of the Opposition. Permission ಕೊಟ್ಟುಬಿಟ್ಟಿದ್ದಾರಲ್ಲಾ.

ಅಧ್ಯಕ್ಷರು: ಈಗ ನೀವು ಏನು ಹೇಳುತ್ತೀರೆಂಬುದನ್ನು ಕೇಳೋಣ.

Sri J.C. Madhuswamy: Hon'ble Member has raised a point of order. ತಾವು hear ಮಾಡಲೇಬೇಕು. That is mandatory. ಯಾರ ಮರ್ಜಿಯಲ್ಲೂ ಕ್ರಿಯಾಲೋಪ ಎತ್ತಬೇಕಿಲ್ಲ. ಕ್ರಿಯಾಲೋಪ ಏನೆಂದು ಕೇಳಬೇಕು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಕ್ರಿಯಾಲೋಪ ಏನೆಂದು ಕೇಳಿದ ನಂತರ ಏನು ಮಾಡಬೇಕೆಂದು ಬಳಿಕ ತೀರ್ಮಾನ ಮಾಡಿ.

ಶ್ರೀ ಜೆ.ಸಿ. ಮಾಧುಸ್ವಾಮಿ: ನೀವು ಕ್ರಿಯಾಲೋಪ ಕೇಳಿ ಅನಂತರ ನೀವು ಏನು ಹೇಳುತ್ತೀರೋ ಅದನ್ನು ನಾವು ಕೇಳುತ್ತೇವೆ.

ಶ್ರೀ ಬಸವರಾಜ ರಾಯರೆಡ್ಡಿ: ದಯವಿಟ್ಟು ಅವರು ಏನು ಹೇಳುತ್ತಾರೋ, ಅದನ್ನು ಕೇಳಿ. ನಂತರ, ತೀರ್ಮಾನ ತೆಗೆದುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್: ಕ್ರಿಯಾಲೋಪವನ್ನು ನೇರವಾಗಿ ಎತ್ತುವುದಕ್ಕೆ ಪ್ರತಿಯೊಬ್ಬ ಸದಸ್ಯರಿಗೂ ಹಕ್ಕು, ಅಧಿಕಾರ ಇದೆ. ಆದ್ದರಿಂದ, ತಾವು ಇದಕ್ಕೆ ಒಪ್ಪಿಗೆ ಕೊಡಬೇಕೇ ಬಿಡಬೇಕೇ ಎಂಬುದು ತಮಗೆ ಸೇರಿದ್ದು.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಸದಸ್ಯರಾದ ಶ್ರೀರಾಮರೆಡ್ಡಿಯವರು ಎತ್ತಿರುವ ಕ್ರಿಯಾಲೋಪ ಏನಿದೆ, ಅದರ ಬಗ್ಗೆ ಅವರು ಸ್ವಲ್ಪ ವಿಚಾರವನ್ನಷ್ಟೇ ಹೇಳಿದ್ದಾರೆ. ನಾವೆಲ್ಲರೂ ಕೂಡ ಇದಕ್ಕೆ ಸಂಬಂಧಿಸಿದಂತೆ ಇನ್ನೂ ಅನೇಕ ವಿಚಾರಗಳನ್ನು ತಮ್ಮೆದುರಿಗೆ ಹೇಳಬೇಕೆಂಬ ಅಭಿಪ್ರಾಯಕ್ಕೆ ಬಂದಿದ್ದೇವೆ. ಶ್ರೀರಾಮರೆಡ್ಡಿಯವರಿಗೆ ತಾವು ಈಗ ಅವಕಾಶ ಕೊಡಿ. ಮಾನ್ಯ ಪ್ರಕಾಶ್ ಅವರಲ್ಲಿ ನಾನು ಏನು ವಿನಂತಿ ಮಾಡುತ್ತೇನೆಂದರೆ, ಕ್ರಿಯಾಲೋಪ ಎತ್ತಿರುವುದನ್ನು ಅನುಸರಿಸಿ, ಅದಕ್ಕೆ ಬೆಂಬಲ ಸೂಚಿಸಿ ಇಲ್ಲಿ ಮಾತನಾಡುವುದಾದರೆ, ಅವರು ಈಗಲೇ ಮಾತನಾಡಬಹುದು. ಅದಕ್ಕೆ ಆಕ್ಷೇಪಣೆ ಇಲ್ಲ. ಆದರೆ, ಕ್ರಿಯಾಲೋಪ it is not in order ಎಂದು ಹೇಳಿ ಅವರು ವಾದ ಮಾಡುವುದಾದರೆ, I request him to kindly have patience till all of us have our say. Finally, he can have his say.

ಶ್ರೀ ಎಂ.ಪಿ. ಪ್ರಕಾಶ್: ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಹಿರಿಯ ಸದಸ್ಯರು ತಪ್ಪಾಗಿ ಭಾವಿಸಿದ್ದಾರೆ. ಪ್ರತಿಯೊಬ್ಬ ಸದಸ್ಯರಿಗೂ ಕ್ರಿಯಾಲೋಪ ಎತ್ತುವಂಥ ಅಧಿಕಾರ ಅಂತರ್ಗತವಾಗಿ ಇದೆ. ಕ್ರಿಯಾಲೋಪ ಎತ್ತುವುದಕ್ಕೆ ಅವರಿಗೆ ಆ ಅಧಿಕಾರ ಇರುವುದರಿಂದ, ಅವರ ಕ್ರಿಯಾಲೋಪ ಏನಿದೆ ಎಂಬುದನ್ನು ಅವರು ಹೇಳಲಿ. ಅದಕ್ಕೆ ತಾವು ಒಪ್ಪಿಗೆ ಕೊಟ್ಟರೆ. . . . .

ಶ್ರೀ ಆರ್.ವಿ. ದೇಶಪಾಂಡೆ: ಕ್ರಿಯಾಲೋಪ ಎತ್ತುವ ಅಧಿಕಾರ ನಿಮಗೆ ಇದೆಯೇ ಇಲ್ಲವೇ ಎನ್ನುವ ಪ್ರಶ್ನೆಯಲ್ಲ.

(ಗೊಂದಲ)

ಶ್ರೀ ಎಂ.ಪಿ. ಪ್ರಕಾಶ್: ನಾವು ಹೇಳುವುದೂ ಕೂಡ ಅದೇ ಮಾತನ್ನೇ.

(ಗೊಂದಲ)

ಶ್ರೀ ಎಂ.ಪಿ. ಪ್ರಕಾಶ್: ಸನ್ಮಾನ್ಯ ಅಧ್ಯಕ್ಷರೆ, ಶ್ರೀರಾಮರೆಡ್ಡಿಯವರು ಕ್ರಿಯಾಲೋಪ ಎತ್ತಲಿ. ಎತ್ತಿದ ಮೇಲೆ ತಾವು ಆ ಕ್ರಿಯಾಲೋಪವನ್ನು ಎತ್ತಿ ಹಿಡಿಯಬಹುದು ಅಥವಾ ಅದನ್ನು ತಿರಸ್ಕರಿಸಬಹುದು. You have every right to raise the point of order. Let him raise the point of order. If you are convinced that there is a validity in his raising of the point of order, you may allow him to raise that and we will also raise it. ಇಲ್ಲವೆಂದರೆ, ಅವರಿಗೆ ಕ್ರಿಯಾಲೋಪ ಎತ್ತುವುದಕ್ಕೆ ಅಧಿಕಾರ ಇದೆ. ಅದಕ್ಕೆ ನಾವು ಏನು ಉತ್ತರ ಕೊಡಬೇಕೋ, ಕೊಡಬಹುದು ಅಥವಾ ತಾವು ಅದನ್ನು ಪರಾಮರ್ಶಿಸಬಹುದು, ಒಪ್ಪಿಗೆ ಕೊಡಬಹುದು, ಒಪ್ಪಿಗೆ ಕೊಡದೇ ತಿರಸ್ಕರಿಸಬಹುದು.

ಶ್ರೀ ಜೆ.ಸಿ. ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಶ್ರೀರಾಮರೆಡ್ಡಿಯವರು ಎತ್ತಿರುವ ಕ್ರಿಯಾಲೋಪವೇನೆಂದು ಸದನಕ್ಕೆ ಇದುವರೆಗೆ ಗೊತ್ತಿಲ್ಲ. ಅವರೂ ಬಾಯಿಬಿಟ್ಟು ಹೇಳಲಿಲ್ಲ. ಏನು ಕ್ರಿಯಾಲೋಪವೆಂದು. Hon'ble Leader of the Opposition ಎದ್ದಿದ್ದರಿಂದ ನಾವು ಸುಮ್ಮನೆ ಕುಳಿತುಕೊಂಡೆವು ಅವರಿಗೆ ಅಗೌರವ ಮಾಡಬಾರದು ಎಂದು. ನೀವು ಅವರ ಕ್ರಿಯಾಲೋಪ hearರನ್ನೇ ಮಾಡಿಲ್ಲವಲ್ಲಾ. ಅದರ ಪರವೇನು ವಿರೋಧವೇನು ಎಂಬ ಬಗ್ಗೆ ಮಾತನಾಡುವ ಪ್ರಶ್ನೆ ಎಲ್ಲಿದೆ ಎಂಬುದು ನಮ್ಮ ವಾದ. Let him speak as to what is the Point of Order with him.

ಅಧ್ಯಕ್ಷರು: ಈಗ Point of Order ಎತ್ತಿದರೆ ಎಲ್ಲರೂ ಎದ್ದುನಿಂತುಕೊಂಡು ಮಾತನಾಡುತ್ತಲೇ ಇದ್ದಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ನಾವು ಮಾತನಾಡಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ: ಸರಿಯಾದ ನಿರ್ಣಯ ಕೊಡಲು ಹಲವಾರು ಬಾರಿ ಪಾಯಿಂಟ್ ಆಫ್ ಆರ್ಡರ್ ಮೇಲೆ ಹತ್ತು ಇಪ್ಪತ್ತು ಜನರು ಮಾತನಾಡಬೇಕಾಗುತ್ತದೆ.

ಅಧ್ಯಕ್ಷರು: ಎಲ್ಲಾ ಸಭಾ ನಿಯಮಗಳನ್ನು ನೀವು ಎತ್ತಿ ತೋರಿಸುತ್ತೀರಿ, ಆದರೆ ಅದರ ಪ್ರಕಾರ ನಡೆದುಕೊಳ್ಳುವುದಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ: ನಡೆದುಕೊಳ್ಳುತ್ತೇವೆ ಸರ್ . . . . . .

ಅಧ್ಯಕ್ಷರು: ಈಗ ಸುಮ್ಮನೆ ಕುಳಿತುಕೊಳ್ಳಿ. ಮಾನ್ಯ ಶ್ರೀರಾಮರೆಡ್ಡಿಯವರೇ ತಾವು ಹೇಳಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ(ಬಾಗೇಪಲ್ಲಿ): ಮಾನ್ಯ ವಿರೋಧ ಪಕ್ಷದ ನಾಯಕರು ಎದ್ದಾಗ ಅವರಿಗೆ ಗೌರವ ಕೊಡಬೇಕು ಎಂದು ನಾವು ಕುಳಿತಿದ್ದೇವೆ. ಅದರ ಅರ್ಥ ಎಲ್ಲರೂ ಮಾತನಾಡಬೇಕೆಂದಲ್ಲ. ನೀವು ನಮಗೆ ಕಾರ್ಯಕಲಾಪಗಳ ಪಟ್ಟಿಯನ್ನು ಕೊಟ್ಟಿದ್ದೀರಿ. ಅದರಲ್ಲಿ ನಾಲ್ಕನೆ ಅಜೆಂಡಾ ಏನಿದೆ ಎಂದರೆ, "ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣ ಪ್ರಸ್ತಾಪ" ಎಂದು ಇದೆ. ಇದೇ ನಮ್ಮ ಸಂವಿಧಾನಕ್ಕೆ ಬಾಹಿರವಾಗಿರತಕ್ಕದ್ದು ನಮ್ಮ ರೂಲ್ಸ್‌ಗೆ ವಿರೋಧವಾಗಿರತಕ್ಕದ್ದು. ನೀವು ಅಜೆಂಡಾದಲ್ಲಿ ಈ ರೀತಿ ಕೊಟ್ಟಿರತಕ್ಕದೇ ನಮ್ಮ ರೂಲ್ಸ್‌ಗೆ ನಮ್ಮ ಸಂವಿಧಾನಕ್ಕೆ ವಿರೋಧ. ಹೇಗೆಂದರೆ 176ನಲ್ಲಿ ಏನು Governor address ಮಾಡಿದ್ದಾರೆ ಅದನ್ನು ನೀವು ಚರ್ಚೆಗೆ ತೆಗೆದುಕೊಳ್ಳುವುದಾಗಿದ್ದರೆ ಈ ಅಜೆಂಡಾ ಸರಿಯಾಗಿದೆ. ಇಲ್ಲಿ ರಾಜ್ಯಪಾಲರು ಎರಡು ಭಾಷಣವನ್ನು ಮಾಡಿದ್ದಾರೆ. ಒಂದು ನಿಯಮ 176ರಲ್ಲಿ ಮಾಡಿದ್ದಾರೆ ಇನ್ನೊಂದು 175(1)ರಲ್ಲಿ ಮಾಡಿದ್ದಾರೆ. ನೀವು ಇದರಲ್ಲಿ ಯಾವುದನ್ನು ಚರ್ಚೆಗೆ ತೆಗೆದುಕೊಳ್ಳುತ್ತೀರಿ ಎಂದು ಇದರಲ್ಲಿ ಸ್ಪಷ್ಟವಾಗಿ mention ಮಾಡಿಲ್ಲ. ನಾವು Governorಗೆ ಇರತಕ್ಕ ಪರಮೋಚ್ಛ ಅಧಿಕಾರವನ್ನು ಪ್ರಶ್ನೆ ಮಾಡುತ್ತಿಲ್ಲ. ಅವರಿಗೆ 175(1)ನಲ್ಲಿ any time address ಮಾಡಬಹುದು ಅದನ್ನು ಚರ್ಚೆಯೂ ಮಾಡಬಹುದು. ಆದರೆ It cannot be a Motion of thanks. The question of the Motion of thanks arises when the 175 address has been put for the discussion. Then only the Motion of the thanks arises. ಹಾಗಾಗಿ ನೀವು ಕಾರ್ಯಸೂಚಿಯಲ್ಲೇನು ಕೊಟ್ಟಿದ್ದೀರಿ ಇದು ಸಂವಿಧಾನ ಬಾಹಿರ. ನಿಯಮಕ್ಕೆ ಬಾಹಿರವಾಗಿದೆ. ಆದ್ದರಿಂದ ಇದನ್ನು ಈ ಅಜೆಂಡಾದಿಂದ ತೆಗೆಯಬೇಕು. ಅಥವಾ ಅಧ್ಯಕ್ಷರಾಗಿರತಕ್ಕ ನೀವು 176ನ ಒಳಗೆ ಮಾಡಿದಂಥ ಭಾಷಣವನ್ನು ಅಸಿಂಧುವೆಂದು ಏನಾದರೂ ಹಿಂದೆ ತೀರ್ಮಾನ ಮಾಡಿದ್ದರೆ, ಆಗ 175(1)ರಲ್ಲಿ address ಮಾಡಿದ ಭಾಷಣವನ್ನು ಚರ್ಚೆಗೆ ತೆಗೆದುಕೊಳ್ಳಬಹುದು, ಆದರೆ ವಂದನೆಯಾಗುವುದಿಲ್ಲ. 176ರಲ್ಲಿ ಮಾಡಿದಂಥ ಭಾಷಣ ಅಸಿಂಧು ಎಂದು ನೀವು ಹಿಂದೆ declare ಮಾಡಿದ್ದರೆ again 176 ರಲ್ಲೇ ಭಾಷಣ ಮಾಡಲು ರಾಜ್ಯಪಾಲರಿಗೆ ಅವಕಾಶ ಇದೆ ಸಂವಿಧಾನದಲ್ಲಿ; ಆದರೆ ನೀವು ಯಾವುದೇ ಸಂದರ್ಭದಲ್ಲಿ 176ಅನ್ನು ಅಸಿಂಧು ಎಂದು ಇದುವರೆಗೆ ಘೋಷಿಸಿಲ್ಲ. ಹಾಗಾಗಿ ರಾಜ್ಯಪಾಲರು 175(1)ರ ಕೆಳಗೆ ಭಾಷಣ ಮಾಡಿರತಕ್ಕದನ್ನು ಚರ್ಚೆಗೆ ತೆಗೆದುಕೊಳ್ಳಲು ಸಾಧ್ಯವಿಲ್ಲ ಅಥವಾ ಅದಕ್ಕೆ Motion of thanks ಕೊಡಲು ಸಾಧ್ಯವಿಲ್ಲ. Motion of thanks ಕೊಡಬೇಕಾದರೆ ಎರಡೇ options ಇರತಕ್ಕದ್ದು. ಒಂದು ನೀವು ಅಜೆಂಡಾದಲ್ಲಿ 176ರ ಪ್ರಕಾರ ರಾಜ್ಯಪಾಲರ ಭಾಷಣವನ್ನು ಚರ್ಚೆಗೆ ತೆಗೆದುಕೊಳ್ಳುತ್ತೇವೆಂದು ಹೇಳಬೇಕಾಗಿತ್ತು. ಅಥವಾ ನಾನು 176ರಲ್ಲಿ ರಾಜ್ಯಪಾಲರು ಮಾಡಿದಂಥ ಭಾಷಣವೇನಿದೆ ಅದು ಅಸಿಂಧು ಎಂದು ಹಿಂದೆ ಘೋಷಿಸಿದ್ದೇನೆ. ಅದು ಆದ ನಂತರ ಮತ್ತೆ ರಾಜ್ಯಪಾಲರು ಎರಡೂ ಸದನಗಳನ್ನು address ಮಾಡಿದ್ದಾರೆಂದು ಹೇಳುವುದಾದರೆ ನಮ್ಮ ಒಪ್ಪಿಗೆ ಇದೆ. ಆದರೆ ಇಲ್ಲಿ ಪ್ರಶ್ನೆ ಇರತಕ್ಕದ್ದು, ಅದು ಯಾವುದೂ ನಡೆದಿಲ್ಲ. ಹಾಗಾಗಿ ನೀವು ಈ ಅಜೆಂಡಾದಲ್ಲಿ ಏನು ಇಟ್ಟಿದ್ದೀರಿ ಅದು ಸಂವಿಧಾನ ವಿರುದ್ಧ. ಎರಡನೆಯ point, ನಾನು ಏಕೆ ಕ್ರಿಯಾಲೋಪವನ್ನು ಎತ್ತಿದೆ ಎಂದರೆ, ನೀವು ಈ ಅಜೆಂಡಾದಲ್ಲಿ ತಿಳಿಸಿರುವ ಪ್ರಕಾರ ಯಾವುದನ್ನು ನೀವು ಇವತ್ತು ಚರ್ಚೆಗೆ ತೆಗೆದುಕೊಳ್ಳುತ್ತೀರಿ ಎಂದು ಹೇಳತಕ್ಕದ್ದು ಸ್ಪಷ್ಟವಾಗಿ ಇಲ್ಲದಿರತಕ್ಕ ಸಂದರ್ಭದಲ್ಲಿ, ಇದರಲ್ಲಿ ಚರ್ಚೆಗೆ ತೆಗೆದುಕೊಳ್ಳಬೇಕಾದ್ದು ಯಾವುದು ಎಂದು ಹೇಳಿಲ್ಲ. 176 ಎಂದು ಹೇಳಲಿಲ್ಲ, 175(1) ಎಂದು ಹೇಳಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಡೇಟ್ ಹೇಳಿದ್ದಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನಾನು ಡೇಟ್ ಬಗ್ಗೆ ಹೇಳುತ್ತಿಲ್ಲ, ದಿನಾಂಕ 24.02.2006ರದ್ದು ಎಂದು ಹೇಳಿದ್ದರೆ, ರಾಜ್ಯಪಾಲರು ಭಾಷಣ ಮಾಡಿದ್ದರಲ್ಲಿ ಏನು ಹೇಳಿದ್ದಾರೆಂದರೆ, ನೀವು ಏನಾದರೂ ಇದನ್ನು ಒಪ್ಪುವುದಾದರೆ, ರಾಜ್ಯಪಾಲರು ಏನು 24ನೇ ತಾರೀಖು ಭಾಷಣ ಮಾಡಿದ್ದಾರೆ ಅವರೇ Self-contradictory ಆಗಿದ್ದಾರೆ. ಯಾವ ರೀತಿ ಎಂದರೆ, ಅವರು ಏನು ಹೇಳುತ್ತಾರೆ ಇದರಲ್ಲಿ ರಾಜ್ಯಪಾಲರು ಭಾಷಣ ಮಾಡತಕ್ಕ ಸಂದರ್ಭದಲ್ಲಿ, ಮೊದಲನೆಯ ಪ್ಯಾರಾದಲ್ಲೆಯೇ ಅವರೇ ಹೇಳಿರತಕ್ಕ ವಿಚಾರ "ಭಾರತ ಸಂವಿಧಾನ ಅನುಚ್ಛೇದ 175(1) ಹಾಗೂ ಸಂವಾದಿ ಅನುಚ್ಛೇದ 176(1)ರ ವ್ಯಾಪ್ತಿ ಮತ್ತು ಪರಿಣಾಮದ ನಡುವೆ ವ್ಯತ್ಯಾಸ ಕಲ್ಪಿಸುವಲ್ಲಿ ಇರುವ ತೊಂದರೆಗಳ ದೃಷ್ಟಿಯಿಂದ ಗೌರವಾನ್ವಿತ ಸದನ ಮತ್ತು ರಾಜ್ಯದ ಜನತೆಗೆ ಮನವರಿಕೆ ಮಾಡಿಕೊಡುವ ಉದ್ದೇಶದಿಂದ ಮಾತ್ರವೇ ಮುಂಬರುವ ದಿನಗಳಲ್ಲಿ ಸರ್ಕಾರವು ಯಾವ ಕ್ರಮ ಕೈಗೊಳ್ಳಲು ಉದ್ದೇಶಿಸಿದೆ ಎಂಬ ಬಗ್ಗೆ ನನ್ನ ಭಾಷಣದ ಮೂಲಕ ಸ್ಥೂಲ ಮಾಹಿತಿಯನ್ನು ನೀಡುತ್ತಿದ್ದೇನೆ. ನಾನು ಭಾರತ ಸಂವಿಧಾನದ ಅನುಚ್ಛೇದ 175(1)ರ ಅಡಿ ಮಾತ್ರ ಈ ಗೌರವಾನ್ವಿತ ಸದನವನ್ನು ಉದ್ದೇಶಿಸಿ ಮಾತನಾಡುತ್ತಿದ್ದೇನೆಂದು ಪುನರುಚ್ಚರಿಸುತ್ತಿದ್ದೇನೆ". What it means? ನಾನು 175(1)ರಲ್ಲಿ ಮಾತ್ರ address ಮಾಡುತ್ತಿದ್ದೇನೆಂದು ಹೇಳಿದರೆ there is no question of moving the motion of thanks. You can allow only for discussion. But no question of motion of thanks even according to the Governor himself. ಆದ್ದರಿಂದ ಈ ಅಜೆಂಡಾದಲ್ಲಿ ಏನು ತಿಳಿಸಿದ್ದೀರಿ ಅದು ಸಂವಿಧಾನ ಬಾಹಿರ, ನಿಯಮಗಳಿಗೆ ಬಾಹಿರ ಮತ್ತು ನಾವೇ ಮಾಡಿಕೊಂಡಿರುವ ರೂಲ್ಸ್ 19 ರಿಂದ 20, ನಮ್ಮ Karnataka Legislature ನಾವು ಮಾಡಿರತಕ್ಕ ರೂಲ್ಸ್‌ನಲ್ಲೇನು ಹೇಳುತ್ತಾರೆ scope of discussion 19(1) ರಿಂದ 20ರವರೆಗೆ 19(1)ರಲ್ಲಿ ಏನು ಹೇಳುತ್ತದೆ? "The Secretary shall report to the House that the Governor was pleased to address the Legislature and place a copy of it on the table of the House."

ಶ್ರೀ ಎಂ.ಪಿ. ಪ್ರಕಾಶ್: ಮಾನ್ಯ ಅಧ್ಯಕ್ಷರೆ, ಈಗ ಅವರು point of orderನ್ನು ರೈಸ್ ಮಾಡಿದ್ದರೆ. ಅದರ ಮೇಲೆ ಭಾಷಣ ಮಾಡತಕ್ಕ ಸಮಸ್ಯೆ ಉದ್ಭವವಾಗುವುದಿಲ್ಲ. ನಿಯಮಾವಳಿಯ ಪ್ರಕಾರ ನೀವು ಕೊಟ್ಟಿರತಕ್ಕ ಕಾರ್ಯಸೂಚಿಯ ಕೆಳಗೆ ಅವರು ಹೇಳಿರತಕ್ಕದ್ದು ಮೊದಲನೆಯ addressನ್ನು ತೆಗೆದುಕೊಳ್ಳಬೇಕೋ ಎನ್ನುವುದನ್ನು ಕ್ರಿಯಾಲೋಪವೆತ್ತಿ ಅವರು ಹೇಳಿದ್ದಾರೆ. ಆ ಕ್ರಿಯಾಲೋಪಕ್ಕೆ ಸಂಬಂಧಿಸಿರತಕ್ಕ ವಿಚಾರಗಳನ್ನು ಅವರು ಪ್ರಸ್ತಾಪ ಮಾಡಬೇಕಾದ್ದು ಹೌದು. ಅದನ್ನು ಬಿಟ್ಟು ಉಳಿದಿರತಕ್ಕ ವಿಷಯಗಳು ಮತ್ತೆ ಚರ್ಚೆಗೆ ಗ್ರಾಸವಾಗಿರತಕ್ಕದ್ದು ಆ ಚರ್ಚೆಯ ಸಂದರ್ಭದಲ್ಲಿ ಹೇಳಬಹುದು, ಆದರೆ ಅವರಿಗೆ ಪೂರಕವಾಗಿ ತಮಗೆ ಹೇಳಬೇಕಾಗಿರುವುದೇನೆಂದರೆ ಕ್ರಿಯಾಲೋಪವನ್ನು ಎತ್ತಲು ಕೂಡ ಇದರಲ್ಲಿ ಅವಕಾಶ ಇಲ್ಲ. ನಮ್ಮ ನಿಯಾಮಾವಳಿ 27ರ ಕೆಳಗೆ 'ರಾಜ್ಯಪಾಲರ ಭಾಷಣದ ಅವಧಿಯಲ್ಲಿ ಅನುಸರಿಸಬೇಕಾದ ಕ್ರಮ' "ಸಂವಿಧಾನದ 175 ಅಥವಾ 176ನೇ ಅನುಚ್ಛೇದದ ಮೇರೆಗೆ ವಿಧಾನ ಮಂಡಲ, ಉಭಯ ಸದನಗಳು ಸಭೆ ಸೇರುವಾಗ ಅಥವಾ 175ನೇ ಅನುಚ್ಛೇದದ ಮೇರೆಗೆ ವಿಧಾನಸಭಾ ಸದಸ್ಯರು ಮಾತ್ರ ಸಭೆ ಸೇರಿರುವಾಗ, 176ರ ಅನುಚ್ಛೇದದ

ಮೇರೆಗೆ ವಿಧಾನ ಸಭೆಯ ಸದಸ್ಯರು ಮಾತ್ರ ಸೇರಿದಾಗ, ಅಂದರೆ ಜಂಟಿ ಅಧಿವೇಶನವಾದ ನಂತರ, ವಂದನಾ ನಿರ್ಣಯವನ್ನು ಮಂಡಿಸಿದ ನಂತರ ಅಥವಾ ಅದರ ಸೂಚನೆಯಾದ ನಂತರ ಚರ್ಚೆಗೆ ತೆಗೆದುಕೊಂಡಿರತಕ್ಕ ಸಂದರ್ಭದಲ್ಲಿ ಅಂದರೆ ಇದು ಒಂದನೆಯ ರಾಜ್ಯಪಾಲರ ಭಾಷಣವೋ ಎರಡನೆಯ ರಾಜ್ಯಪಾಲರ ಭಾಷಣವೋ ತಾವು ಈಗ ಕೊಟ್ಟಿರುವುದರ ಬಗ್ಗೆ ನಾವು ಮತ್ತೆ ಮಾತನಾಡುತ್ತೇವೆ ಮತ್ತು ಬೇರೆ ಸದಸ್ಯರು ಮಾತನಾಡುವವರಿದ್ದಾರೆ. ಆದರೆ ಇಲ್ಲಿ ನಾವು ಕಲೆತಿರತಕ್ಕದ್ದು 175ನೇ ಅನುಚ್ಛೇದದ ಮೇರೆಗೆ ವಿಧಾನಸಭಾ ಸದಸ್ಯರು ಮಾತ್ರ ಸಭೆ ಸೇರಿದಾಗ ರಾಜ್ಯಪಾಲರ ಭಾಷಣದ ಅವಧಿಯಲ್ಲಿ ಯಾರೇ ಸದಸ್ಯರು ಯಾವುದೇ ಭಾಷಣ ಮಾಡುವ ಮೂಲಕ ಅಥವಾ ಯಾವುದೇ ಕ್ರಿಯಾಲೋಪವೆತ್ತಿ ರಾಜ್ಯಪಾಲರ ಭಾಷಣಕ್ಕೆ ಮುಂಚೆಯಾಗಲಿ ಅಥವಾ ತರುವಾಯವಾಗಲಿ ರಾಜ್ಯಪಾಲರ ಭಾಷಣಕ್ಕೆ ಅಡ್ಡಿಯನ್ನುಂಟುಮಾಡತಕ್ಕುದಲ್ಲ ಅಥವಾ ವಿಘ್ನವನ್ನುಂಟು ಮಾಡತಕ್ಕುದಲ್ಲ ಮತ್ತು ಅಂಥ ಅಡ್ಡಿಯನ್ನು ಅಥವಾ ವಿಘ್ನವನ್ನು ಸದನದ ಆದೇಶದ ತೀವ್ರ ಉಲ್ಲಂಘನೆಯೆಂದು ಪರಿಗಣಿಸಿ ವಿಧಾನಸಭೆಯ ಮುಂದಿನ ಉಪವೇಷನದಲ್ಲಿ ವಿಧಾನಸಭಾಧ್ಯಕ್ಷರು ಆ ಬಗ್ಗೆ ಹಾಗೆ ವ್ಯವಹರಿಸತಕ್ಕದ್ದು".

ಶ್ರೀ ಆರ್.ವಿ. ದೇಶಪಾಂಡೆ: ಇದು Governor ಇಲ್ದಿದ್ದಾಗ. Governor ಇಲ್ಲಿ ಇದ್ದಾಗ, address ನಡೆದಾಗ ಅವರು address ಮಾಡುವುದಕ್ಕಿಂತ, ಮಾಡುವಾಗ, ಮಾಡಿದ ನಂತರ I can understand this. ಅದಕ್ಕಿಂತ ಮೊದಲು ಇದು ಬರುವ ಪ್ರಶ್ನೆ ಏನು ಬಂತು?

(ಗೊಂದಲ)

SRI M.P. PRAKASH: I am not yielding . . .

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ: 27ರಂದು ಮಾನ್ಯ ರಾಜ್ಯಪಾಲರು ಭಾಷಣ ಮಾಡುವಾಗ, ಅವರ ಭಾಷಣ ನಡೆಯುವಾಗ ಅಥವಾ ಅವರು ಭಾಷಣ ಮಾಡಿ ಹೋಗುವಾಗ ಇದನ್ನು ಒಪ್ಪಿಕೊಳ್ಳುತ್ತೇನೆ. ಆದರೆ ಇವತ್ತು ಡಿಬೇಟ್ ಮಾಡುವ ಸಮಯದಲ್ಲಿ ಇದು ಸಂಬಂಧವಿಲ್ಲ. ದಯಮಾಡಿ ಮಾನ್ಯ ಪ್ರಕಾಶ್‌ರಂಥ ಹಿರಿಯರು, ಪಾರ್ಲಿಮೆಂಟರಿ ಅಫೇರ್ಸ್ ಮಂತ್ರಿಯಾಗಿದ್ದವರಿಗೇಕೆ ಈ ಸ್ಥಿತಿ ಬಂತು ಎಂಬುದು ಗೊತ್ತಾಗುತ್ತಿಲ್ಲ.

(ಗೊಂದಲ)

SRI M.P. PRAKASH: I am not yielding.

ಶ್ರೀ ಸಿ. ಚೆನ್ನಿಗಪ್ಪ: ಅವರು ಈಲ್ಡ್ ಆಗಿಲ್ಲದೆ ನೀವೇಕೆ ಮಾತನಾಡುತ್ತೀರಿ. What is this?

(ಗೊಂದಲ)

ಶ್ರೀ ಎಂ.ಪಿ. ಪ್ರಕಾಶ್: ಮಾನ್ಯ ಅಧ್ಯಕ್ಷರೆ, I am not yielding. Sir I seek the interpretation of this Article by you, not by other.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಮಾನ್ಯ ಶ್ರೀರಾಮರೆಡ್ಡಿಯವರೆ, ತಾವು ಇನ್ನೂ ತಮ್ಮ ಭಾಷಣ ಪೂರ್ತಿ ಮಾಡಿಲ್ಲವೇ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಇಲ್ಲ.

ಶ್ರೀ ಸಿದ್ದರಾಮಯ್ಯ: ಅದನ್ನು ಪೂರ್ತಿ ಮಾಡಿಬಿಡಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಅದಕ್ಕಾಗಿಯೇ ನನಗೆ ಅವಕಾಶ ಮಾಡಿಕೊಡಿ ಎಂದು ನಾನು ಹೇಳುತ್ತಿದ್ದೇನೆ. ನಾನು ಈಲ್ಲೂ ಆಗಿಲ್ಲ. ನನ್ನ ಭಾಷಣವನ್ನು ಇನ್ನು ಪೂರ್ತಿಯೂ ಮಾಡಿಲ್ಲ.

ಶ್ರೀ ಎಂ.ಪಿ. ಪ್ರಕಾಶ್: ಅವರ ಕ್ರಿಯಾಲೋಪದ ವಿಚಾರದಲ್ಲಿ ಮಾನ್ಯ ಅಧ್ಯಕ್ಷರು ರೂಲಿಂಗ್ ಅನ್ನು ಕೊಡಬಹುದು. ಮೆರಿಟ್ಸಿನ ವಿಚಾರದಲ್ಲಿ ಪ್ರಸ್ತಾಪವನ್ನು ಮಾಡಬಹುದು. ಮಾನ್ಯ ದೇಶಪಾಂಡೆಯವರು, ಮಾನ್ಯ ರಮೇಶ್ ಕುಮಾರ್‌ರವರು, ಈ 176ಕ್ಕೆ ನಾನು ಎತ್ತಿದಂತಹ ವಿಷಯದ ಬಗ್ಗೆ ಭಿನ್ನವಾದಂತಹ ಅರ್ಥವಂತಿಕೆ ಇದ್ದರೆ, ಅದನ್ನು ಅವರು ತಮ್ಮ ಮುಂದೆ ಹೇಳಲಿ. ಆದರೆ ನಿಮ್ಮಿಂದ ನಾನು ಅದರ ಬಗ್ಗೆ ನಿರ್ಣಯವನ್ನು ತೆಗೆದುಕೊಳ್ಳುತ್ತೇನೆ ವಿನಃ ಅವರಿಂದ ಅಲ್ಲ.

(ಗೊಂದಲ)

ಶ್ರೀ ಎಂ.ಪಿ. ಪ್ರಕಾಶ್: ಆಯಿತ್ರೀ, You please convince him. If I am wrong, I am here prepared to hear that.

(ಗೊಂದಲ)

ಶ್ರೀ ಎಂ.ಪಿ. ಪ್ರಕಾಶ್: ನಾನೇನು ಹೇಳುತ್ತಿದ್ದೇನೆ ಎಂದರೆ, you try to convince him. I am not here to listen to you. . . . . .

(ಗೊಂದಲ)

ಶ್ರೀ ಎಂ.ಟಿ. ಕೃಷ್ಣಪ್ಪ: ಮಾತನಾಡಲಿಕ್ಕೆ ಬಿಡಿ, let him speak. He will convince.

(ಗೊಂದಲ)

ಶ್ರೀ ಎಂ.ಪಿ. ಪ್ರಕಾಶ್: . . . . . ಮಾನ್ಯ ಅಧ್ಯಕ್ಷರೆ, ತಾವು ನಾನು ಎತ್ತಿದಂತಹ 27ರ ವಿಧಿಯ ಬಗ್ಗೆ, ಸದಸ್ಯರಿಗೆ ಬೇರೆ ತರಹವಾದಂತಹ ಅರ್ಥವಂತಿಕೆ ಇದ್ದರೆ, ಅದನ್ನು ತಮಗೆ ಹೇಳಲಿ. ನೇರವಾಗಿ ಸದಸ್ಯರು ಈ ವಿಚಾರದಲ್ಲಿ ತಮ್ಮ ಗಮನವನ್ನು ಸೆಳೆದು ಮಾತನಾಡಲಿ. ಆದರೆ ಅವರು ಎತ್ತಿರತಕ್ಕಂಥದ್ದರಲ್ಲಿ merits of the case ಬಗ್ಗೆ ಹೋಗಬೇಡಿ. . . . . .

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನಾನು ಇಷ್ಟೇ ಕೇಳುತ್ತಿರುವುದು ತಮ್ಮನ್ನು . . . . .

(ಗೊಂದಲ)

ಅಧ್ಯಕ್ಷರು: ನೀವು ಕ್ರಿಯಾಲೋಪ ಎತ್ತಿದ್ದೀರಿ, ನೀವು ಅದನ್ನು ಅಷ್ಟಕ್ಕೇ restrict ಮಾಡಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನಾನು ಇನ್ನೂ ಅದನ್ನು ಕಂಪ್ಲೀಟ್ ಮಾಡಿಲ್ಲ. ನಾನು ಹೇಳುವುದನ್ನು ಪೂರ್ತಿಯಾಗಿ ಕೇಳಿ. ನಾನು ತಮ್ಮನ್ನು ಕೇಳುವುದೇನೆಂದರೆ . . . .

ಶ್ರೀ ಸಿ.ಟಿ. ರವಿ: ಕ್ರಿಯಾಲೋಪದಲ್ಲಿ ಇವರು ಭಾಷಣ ಮಾಡುತ್ತಿದ್ದಾರೆ. ಕ್ರಿಯಾಲೋಪ ಭಾಷಣ ಆಗಬಾರದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನಾನು ಭಾಷಣ ಮಾಡುತ್ತಿಲ್ಲ. ನಾನು ಪಾಯಿಂಟ್ ಆಫ್ ಆರ್ಡರ್ ಅನ್ನು ಮಾತ್ರ ಇಲ್ಲಿ ಹೇಳುತ್ತಿದ್ದೇನೆ.

ಶ್ರೀ ಸಿ.ಟಿ. ರವಿ: ಮಾನ್ಯ ಅಧ್ಯಕ್ಷರೆ, Point of order ಅನ್ನು ಎತ್ತಿ ಇವರು ಭಾಷಣ ಮಾಡುತ್ತಿದ್ದಾರೆ. ಮಾನ್ಯ ಅಧ್ಯಕ್ಷರೆ, ಅವರು point of order ಗೆ ತಾವು ruling ಕೊಡಿ.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ರೂಲ್ 27ರ ಬಗ್ಗೆ ನನಗೆ ಈಗ ಇಲ್ಲಿ ಹೇಳತಕ್ಕಂಥ ಅವಶ್ಯಕತೆ ಇಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ಸದನಕ್ಕೆ ತಪ್ಪು ಮಾಹಿತಿ ನೀಡುವಂಥಾದ್ದು ಆಗಬಾರದು. ನಾನು ಮಾನ್ಯ ಎಂ.ಪಿ. ಪ್ರಕಾಶ್‌ರವರಿಗೆ ಬಹಳ ಗೌರವ ಕೊಡತ್ತೇನೆ. ಈಗ ಮಾನ್ಯ ಎಂ.ಪಿ. ಪ್ರಕಾಶ್‌ರವರೇನು ಓದಿ ಹೇಳಿದರೋ, ಅದು ಈ ಸದನಕ್ಕೆ ತಪ್ಪು ದಾರಿಗೆ ಎಳೆಯುವಂಥಾದ್ದು ಆಗುತ್ತಿದೆ. ಯಾವ ವಿಷಯ ಇಲ್ಲಿ ಪ್ರಸ್ತಾಪ ಆಗಿಲ್ಲವೋ, ಅದರ ಬಗ್ಗೆ ನಾವು ಪ್ರಸ್ತಾಪ ಮಾಡಿದಂತಾಗುತ್ತದೆ. ರೂಲ್ 27 "Observance of Order during Governor's Address" ಬಗ್ಗೆ ಹೇಳುತ್ತದೆ. We have to observe these rules during Governor's Address only. ಗೌರ್ನರ್‌ರವರು ಇಲ್ಲಿಗೆ ಬಂದು, ಇಲ್ಲಿ ಈ ಸದನದಲ್ಲಿದ್ದಾಗ, ಅವರು ಭಾಷಣ ಮಾಡುವಾಗ, ನಾವು ಯಾವ ರೀತಿಯಾಗಿ ನಡೆದುಕೊಳ್ಳಬೇಕು ಎಂಬ ಬಗ್ಗೆ ಈ ರೂಲ್ 27ರಲ್ಲಿ ಇದೆಯೇ ಹೊರತಾಗಿ ಬೇರೆ ಏನೂ ಇಲ್ಲ. ಇದರಲ್ಲಿ ಸೆಕ್ಷನ್ 175ರ ಬಗ್ಗೆಯಾಗಲಿ, ಸೆಕ್ಷನ್ 176ರ ಬಗ್ಗೆಯಾಗಲಿ ಇದರಲ್ಲಿ interpretation ಇಲ್ಲ. ಅವರು ಈ ಸದನದಲ್ಲಿದ್ದಾಗ ನಾವು ಯಾವ ರೀತಿಯಾಗಿ ನಡೆದುಕೊಳ್ಳಬೇಕು ಎನ್ನತಕ್ಕಂಥದ್ದು ಮಾತ್ರ ಇದರಲ್ಲಿ ಇದೆಯೇ ಹೊರತಾಗಿ ಬೇರೆ ಏನೂ ಇಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಪ್ರಕಾಶ್‌ರವರು ರೂಲ್ 27ರ ಬಗ್ಗೆ ಹೇಳಿದ್ದಾರೆ. This Rule 27 comes to the force only at the time of discussion on the motion of a debate, ಗೌರ್ನರ್ ಅಡ್ರೆಸ್‌ನಲ್ಲಿ ರೂಲ್ 27 ಏನು ಹೇಳುತ್ತದೆ ಎಂದರೆ,

> "When the Houses of the Legislature are assembled together under Article 175 or 176 or when the members of the Assembly alone are assembled under Article 175 of the Constitution, no member shall obstruct or interrupt the Address either before or after the Address during its duration with any speech or point of order or in any other manner and such obstruction or interruption shall be regarded as a gross breach of order of the House and shall be dealt with by the Speaker as such in the next sitting of the Assembly."

This is only applicable at the time of Governor's Address in the House, not on the Point of Order. ಮಾನ್ಯ ಅಧ್ಯಕ್ಷರೆ, ನಾನು ಇಷ್ಟೇ ಹೇಳಬಯಸುತ್ತೇನೆ. Governor him self very clearly said "I am addressing this House, under Article 175 only". Then it is not a vote on, motion of thanks. ಆದುದರಿಂದ ಇದನ್ನು ನಡೆಯಲಿಕ್ಕೆ ಬಿಡಬಾರದು. Rule of law should prevail, not the rule of power should prevail.

ಶ್ರೀ ಹೆಚ್. ನಿಂಗಪ್ಪ: ಮಾನ್ಯ ಅಧ್ಯಕ್ಷರೆ, ರೂಲ್ 25ರಲ್ಲಿ "ಸಂವಿಧಾನದ 175(1)ನೇ ಅನುಚ್ಛೇದದ ಮೇರೆಗೆ ರಾಜ್ಯಪಾಲರ ಭಾಷಣ" ಎಂದು ಇದೆ. ಈ ನಿಯಮದ ಅಡಿಯಲ್ಲಿ ಸಂವಿಧಾನದ 175(1) ಅನುಚ್ಛೇದದ ಮೇರೆಗೆ ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪಿಸಿದ ವಿಷಯಗಳ ಬಗ್ಗೆ ಚರ್ಚಿಸಲು ಅಧ್ಯಕ್ಷರು ಸಮಯವನ್ನು ಗೊತ್ತು ಮಾಡಬಹುದು ಎಂದು ಇದೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಅದನ್ನೇ ನಾವು ಹೇಳುತ್ತಿದ್ದೇವೆ. ಚರ್ಚೆ ಮಾಡಲಿಕ್ಕೆ ಅವಕಾಶ ಇದೆ, Motion of Thanks move ಮಾಡಲಿಕ್ಕೆ ಇಲ್ಲ. ಚರ್ಚೆಗೆ ಮಾತ್ರ ಅವಕಾಶ ಇದೆ. ಅವರು ಹೇಳಿದ್ದು ಸರಿ.

ಶ್ರೀ ಹೆಚ್. ನಿಂಗಪ್ಪ: ಮಾನ್ಯ ಅಧ್ಯಕ್ಷರೆ, 176ನಲ್ಲೂ ಚರ್ಚೆ ಮಾಡಲಿಕ್ಕೆ ಅವಕಾಶ ಇದೆ.........

(ಗೊಂದಲ)

ಶ್ರೀ ಸಿ.ಟಿ. ರವಿ: . . . . . ನಿಮಗೆ ಕೇಳುವ ವ್ಯವಧಾನವೇ ಇಲ್ಲವಲ್ಲಾ. ನಿಮಗೆ ಅವರು ಹೇಳುತ್ತಿರುವುದನ್ನು ಕೇಳುವ ಸಮಾಧಾನವೇ ಇಲ್ಲವಲ್ಲಾ. ನೀವು ವಿರೋಧ ಪಕ್ಷದವರಾಗುತ್ತಿದ್ದಂತೆ ಈ ರೀತಿ ಆಡಲು ಶುರುವಾದರೆ ಹೇಗೆ? ನೀವು ಕೇಳುವುದಕ್ಕೂ ಆಗುವುದಿಲ್ಲ ಎಂದರೆ ಹೇಗೆ?

(ಗೊಂದಲ)

ಶ್ರೀ ಎನ್. ಚೆಲುವರಾಯಸ್ವಾಮಿ(ಸಾರಿಗೆ ಸಚಿವರು): ಆ ಕಡೆಯಿಂದ 3-4 ಜನರು ಮಾತನಾಡಿದ್ದಾರೆ. ಈ ಕಡೆಯಿಂದ ಮಾತನಾಡಲು ಒಬ್ಬರಿಗೂ ಅವಕಾಶ ಕೊಟ್ಟಿಲ್ಲ. ಆದುದರಿಂದ ಅವರಿಗೆ ಮಾತನಾಡಲು ಅವಕಾಶ ಕೊಡಿ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ(ಹಳಿಯಾಳ): ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು, ಮಾನ್ಯ ರಾಯರೆಡ್ಡಿಯವರು ಮತ್ತು ಮಾನ್ಯ ಶ್ರೀರಾಮರೆಡ್ಡಿಯವರು ಈ ವಿಷಯದಲ್ಲಿ ಕೆಲವು ಬೆಳಕನ್ನು ಚೆಲ್ಲಿದ್ದಾರೆ. ನನಗೆ ಸಮಯದ ಮಹತ್ವ ಗೊತ್ತಿದೆ. ಹಾಗಾಗಿ ನಾನು ಬಹಳ specific ಆಗಿ ಕೆಲವು ವಿಚಾರಗಳನ್ನು ತಮ್ಮ ಗಮನಕ್ಕೆ ತರುತ್ತೇನೆ. ಏಕೆಂದರೆ, ಇವತ್ತು ಆಗುವ ಇದೊಂದು ತಮ್ಮ ನಿರ್ಣಯ, ಇದು ಇಡೀ ದೇಶದಲ್ಲಿ ಮೊದಲನೇ ಬಾರಿ ಈ ತರಹದ ನಿರ್ಣಯ, ಇದು ಇಡೀ ದೇಶದಲ್ಲಿ ಮೊದಲನೇ ಬಾರಿ ಈ ತರಹದ ನಿರ್ಣಯ ಆಗುವುದು. ಹಾಗಾಗಿ ತಾವು ಚರ್ಚೆಗೂ ಅವಕಾಶ ಕೊಡಬೇಕಾಗುತ್ತದೆ. ಆಡಳಿತ ಪಕ್ಷದವರ ಅಭಿಪ್ರಾಯವನ್ನೂ ಸಹ ಕೇಳಬೇಕಾಗುತ್ತದೆ. ಅವಶ್ಯಕತೆ ಬಿದ್ದರೆ, ತಾವು ನಿರ್ಣಯ ತೆಗೆದುಕೊಳ್ಳುವುದಕ್ಕೆ ಮುಂಚೆ constitutional experts opinion ಅನ್ನೂ ಕೇಳಬೇಕಾಗುತ್ತದೆ. ಏಕೆಂದರೆ, ಇವತ್ತು ನಾವೇನು 175(1)ರ ಪ್ರಕಾರ ರಾಜ್ಯಪಾಲರೇನು ಭಾಷಣ ಮಾಡುತ್ತಾರೆ, ರಾಷ್ಟ್ರಪತಿಗಳೂ ಮಾಡುವಾಗ ಅದು Article 86(1) ಪ್ರಕಾರ ಮಾಡುತ್ತಾರೆ, 176(1)ರ ಪ್ರಕಾರ ಇದನ್ನು ಮಾಡುವಾಗ, ರಾಷ್ಟ್ರಪತಿಗಳು ಪಾರ್ಲಿಮೆಂಟ್‌ನ ಜಂಟಿ ಸದನದಲ್ಲಿ Article 77(1) ರ ಪ್ರಕಾರ ಮಾಡುತ್ತಾರೆ. ಹಾಗಾಗಿ ಇವತ್ತು ನಮ್ಮ ರಾಷ್ಟ್ರದ ಇತಿಹಾಸದಲ್ಲಿ, ಇಂತಹ ಒಂದು ಪ್ರಸಂಗ, 175ರಲ್ಲಿ ನಮ್ಮ ನಾಯಕರು ಹೇಳಿದಂತೆ, ಭಾಷಣ ಮಾಡಲಿಕ್ಕೆ ಗೌರ್ನರ್‌ಗೆ ಪ್ರತಿ ದಿನ ಅವಕಾಶ ಇದೆ. ನಾನು ಬಂದು ಮಾತನಾಡುತ್ತೇನೆ, Address ಮಾಡುತ್ತೇನೆ ಎಂದು ಅವರು ಪ್ರತಿದಿನವೂ ಹೇಳಬಹುದು. ಆದರೆ, ಅದು ಅವರ

message ಆಗಿರುತ್ತದೆ, ಅವರ ಭಾಷಣವಾಗಿರುತ್ತದೆಯೇ ಹೊರತು, ಅದು ಸರ್ಕಾರದ ಭಾಷಣ ಆಗಿರುವುದಿಲ್ಲ. 176 ಏನಿದೆ, ಅದು ಕ್ಯಾಬಿನೆಟ್ ಏನು ಅವರ ಭಾಷಣ ತಯಾರು ಮಾಡುತ್ತದೆ, ಅದು ಚುನಾವಣೆಯಾದ ನಂತರ ಮೊದಲನೇ session ಇರಬಹುದು ಅಥವಾ ವರ್ಷದ ಮೊದಲನೇ session ಇರುವಾಗ ಅಡ್ರೆಸ್ ಮಾಡಬೇಕಾಗುತ್ತದೆ. ಆದರೆ ಗೌರ್‍ನಮೆಂಟ್ programmes, Government policies, ಸರ್ಕಾರದ achievements ಅವರು highlight ಮಾಡಬೇಕಾಗುತ್ತದೆ. There is a distinction. 175 ಮತ್ತು 176ರಲ್ಲಿ distinction ಇದೆ.

" There have been, however, no occasions so far when the President addressed the Houses under Article 86(1) or Rule 24. He has always addressed both Houses of Parliament assembled together under Article 87(1)" ನಾನು depending upon Kashyap (Page 437) ಇದನ್ನು ಹೇಳುತ್ತಿದ್ದೇನೆ. ಯಾವಾಗಲೂ ರಾಷ್ಟ್ರಪತಿಗಳು 86ರ ಪ್ರಕಾರ ಇವತ್ತಿನತನಕ ಭಾಷಣಗಳನ್ನು ಮಾಡಿಲ್ಲ. He has not addressed the House under Article 86(1). ಹಾಗಾದರೆ ಗೌರವಾನ್ವಿತ ರಾಜ್ಯಪಾಲರಿಗೆ ಏನು ಎಕ್ಸ್‌ಟ್ರಾರ್ಡಿನರಿ ಸರ್ಕಮ್‌ಸ್ಟೆನ್ಸ್ ಇರುತ್ತದೆ, What was the extraordinary circumstances? ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಉಪ ಮುಖ್ಯಮಂತ್ರಿಗಳು ಹೇಳಿರುವುದನ್ನು ನಾವು ಪತ್ರಿಕೆ ಮುಖಾಂತರ ನೋಡಿದ್ದೇವೆ. ಕ್ಯಾಬಿನೆಟ್ ಅವರ ಭಾಷಣ ತಯಾರು ಮಾಡಿತು, ನಮ್ಮ ಸಲಹೆ ಮೇರೆಗೆ ಅವರು ಭಾಷಣ ಮಾಡುತ್ತಾರೆಂದು ತಾವು ಹೇಳಿದ್ದೀರಿ. Is it not your stand? Please clarify. ಆ ಸ್ಟ್ಯಾಂಡ್ ನಿಮ್ಮದು ಇದ್ದರೆ, then the Governor's Address is unconstitutional. Under Article 175(1) it should be his a message & It should be his Address. ಮಾನ್ಯ ರಾಜ್ಯಪಾಲರು ಏನು ಹೇಳಿದರು, ನಾವು ಬೇಟಿಯಾದಾಗ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ ನಾನು ಕಾನ್‌ಸ್ಟಿಟ್ಯೂಷನಲ್ ಪ್ರಾವಿಷನ್ಸ್ ನೋಡುತ್ತೇನೆಂದು ಹೇಳಿದರು. ಆದರೆ, ಮಾರನೆ ದಿನ ಅವರು ನಿರ್ಣಯ ಮಾಡಿದಾಗ ಏನು ಹೇಳಿದರು ಎಂದರೆ, ನಾನು ಅಡ್ವೊಕೇಟ್ ಜನರಲ್‌ರವರ ಅಭಿಪ್ರಾಯ ಕೇಳಿದ್ದೇನೆ ಎಂದು ಕೇಳಬಹುದು, Advocate Genereal is appointed by the Government. When the Government resigns, when the Chief Minister resigns, the Advocate General resigns. He is the representative of the Government, i.e., ruling party. How the Governor can say he has come to the conclusion on the advice given by the Advocate General? Advocate General is appointed by the Government which is in power. ಯಾವ ದಿನ ಸರ್ಕಾರ ರಾಜೀನಾಮೆ ಕೊಡುತ್ತದೆ ಅದೇ ದಿನ ಅಡ್ವೊಕೇಟ್ ಜನರಲ್‌ರವರು ರಾಜೀನಾಮೆ ಕೊಟ್ಟು ಹೋಗುತ್ತಾರೆ. It is a very important issue. ನಮ್ ರೂಲ್ಸ್‌ನಲ್ಲಿ, very simple reading of the rules, ತಾವು ನೋಡಿದರೆ ಏನಿದೆ ಎಂದರೆ . . . . .ಸೆಕ್ರಟರಿಯವರು ರಿಪೋರ್ಟ್ ಇಟ್ಟರು, 24ನೇ ತಾರೀಖು ತಾವು ರಿಪೋರ್ಟ್ ಇಟ್ಟಿರಿ, 176ರಲ್ಲಿ ಏನಿದೆ ಮಾನ್ಯ ಅಧ್ಯಕ್ಷರೆ, The Speaker shall in consultation with the Leader of

the House alongwith the Leader of Opposition allot time for discussion on the matters referred to in the Governor's Address in the Houses under Article 176." 176 ನಿಯಮದ ಕೆಳಗೆ ಆ ಅಡ್ರೆಸ್ ಇದ್ದರೆ, ಮಾನ್ಯ ಸಭಾ ನಾಯಕರು, ವಿರೋಧ ಪಕ್ಷದ ನಾಯಕರು ಕಾರ್ಯಕಲಾಪಗಳ ಸಲಹಾ ಸಮಿತಿಯಲ್ಲಿ ಇಟ್ಟು ತಾವು ಟೈಮ್ ಫಿಕ್ಸ್ ಮಾಡಬೇಕಾಗುತ್ತದೆ. ಆದರೆ 175 ಬಂದಾಗ "Speaker may allot time for discussion on the matters referred to in the Governor's Address under Article 175(1). ನಿಯಮ 175 ಬಂದಾಗ ತಾವು ನಿರ್ಣಯ ಮಾಡುತ್ತೀರಿ. ಯಾವಾಗ ಡಿಸ್ಕಸ್ ಮಾಡಬೇಕು ಏನು ಎಂದು. ಆದರೆ ಅಲ್ಲಿ ಮೋಷನ್ ಅವಕಾಶ ಇಲ್ಲ. The Scope of discussion under 176-On such day or days or part of the day, the House shall be at liberty to discuss the matters referred to in such addresses on the motion of thanks moved by a member and seconded by a member. ಇವತ್ತು 175 (1)ರ ಪ್ರಕಾರ ನಮ್ಮ ಸ್ನೇಹಿತರು ಏನು ಮೋಷನ್ ಮೂವ್ ಮಾಡುತ್ತಿದ್ದಾರೆ, ಅದು ಇಲ್ಲೀಗಲ್ ಇದೆ. ತಾವು ರೂಲ್ಸ್ ಓದಿ ನೋಡಿ. ಈ ಮನೆ ಮಾಡಿದ ರೂಲ್ಸ್ ನೋಡಿ; ಅಲ್ಲಿ ಮೋಷನ್‌ಗೆ ಅವಕಾಶ ಇಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು): ಅವಕಾಶ ಇಲ್ಲವೆಂದು ಎಲ್ಲಿ ಇದೆ ಹೇಳಿ?

ಶ್ರೀ ಆರ್.ವಿ. ದೇಶಪಾಂಡೆ: ಆರ್ಟಿಕಲ್ 176 ಪ್ರಕಾರ rule 19 (1) to 21 ತಾವು ಓದಿ ನೋಡಿ. ಅಲ್ಲಿ ರೂಲ್ 20ರ ಪ್ರಕಾರ ಮೋಷನ್ ಮೂವ್ ಮಾಡಬಹುದು. ಡಿಸ್ಕಷನ್ ಮಾಡಬಹುದು. 175ರಲ್ಲಿ ಏನಿದೆ ಅದು ಹೇಳಿ, ಒಂದು ವೇಳೆ ಎರಡೂ ಕಡೆ ಮೋಷನ್ ಮೂವ್ ಮಾಡುವುದಕ್ಕೆ ಅವಕಾಶ ಇದ್ದರೆ ರೂಲ್ 20 ರ ಅವಶ್ಯಕತೆ ಇರಲಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ: ನಿಯಮ 175(1)ರಲ್ಲಿ ರಾಜ್ಯಪಾಲರಿಗೆ ವಂದನೆ ಸಲ್ಲಿಸಬಾರದು ಎಂದು ಎಲ್ಲಿ ಇದೆ ಎಂದು ಹೇಳಿ, You please convince that point. You read out that. ಸಂವಿಧಾನದಲ್ಲಿ ಎಲ್ಲಿ ಇದೆ ಅದನ್ನು ದಯಮಾಡಿ ಹೇಳಿ. ನೀವು ಹೇಳುತ್ತಿದ್ದೀರಿ ಅಷ್ಟೆ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ: ಮಾನ್ಯ ಅಧ್ಯಕ್ಷರೆ, ಮಾನ್ಯ ಉಪ ಮುಖ್ಯಮಂತ್ರಿಗಳು ಬಹಳ ಸಿಂಪಲ್ ಪ್ರಶ್ನೆ ಕೇಳಿದ್ದಾರೆ. ದೇಶಪಾಂಡೆಯವರೇ, ನಿಯಮ 175ರ ಪ್ರಕಾರ ಮೋಷನ್ ಮೂವ್ ಮಾಡುವುದಕ್ಕೆ ಅವಕಾಶ ಎಲ್ಲಿ ಇದೆ ಎಂದು?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಅವಕಾಶ ಇಲ್ಲಿ ಇದೆ ಎಂದು ಹೇಳುತ್ತಾರೆ. ನಿಯಮ 20ನ್ನು ನಾನು ಓದುತ್ತೇನೆ.

> "On such date or days or part of any day the House shall be at liberty to discuss the matters referred to in such address on a motion of thanks moved by a member and seconded by another member." Rule-25 says thus on speech made under Article 175(1):

"The Speaker may allot time for discussion on the matter reffered to in the Governor's Address under Article 175(1)."
ಅಲ್ಲಿ ಮೋಷನ್ ಆಫ್ ಥ್ಯಾಂಕ್ಸ್ ಬರುವುದಿಲ್ಲ.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಮಾನ್ಯ ಯಡಿಯೂರಪ್ಪನವರೆ, ನಿಯಮ 175(1) ರಲ್ಲಿ ಟೈಮ್ ಗೊತ್ತು ಪಡಿಸತಕ್ಕಂತಹ ಅಧಿಕಾರ ಸನ್ಮಾನ್ಯ ಸಭಾಧ್ಯಕ್ಷರಿಗೆ ಬರುತ್ತದೆ. ನಿಯಮ 176ರ ಕೆಳಗೆ ಬಂದಾಗ ನಮ್ಮನ್ನು ಕರೆಸಿ ವಿಶ್ವಾಸಕ್ಕೆ ತೆಗೆದುಕೊಂಡು ಚರ್ಚೆ ಮಾಡಿ ಸಮಯ ನಿಗದಿ ಮಾಡಬೇಕಾಗುತ್ತದೆ. 176ರ ಕೆಳಗೆ it is inherent right of this House. 175ರ ಕೆಳಗೆ it is the option. We don't have to live under anybody's mercy. We want to exercise our right.

(ಗೊಂದಲ)

ಶ್ರೀ ಕೆ.ಆರ್. ರಮೇಶ್‌ಕುಮಾರ್: ನೀವು ಎರಡೂ ಕ್ಯಾಬಿನೆಟ್‌ನಲ್ಲಿ ಸಹಿ ಹಾಕಿರುತ್ತೀರಿ, ನಾವು ಕರೆದುಕೊಂಡು ಬಂದಿದ್ದು ತಪ್ಪು ಎಂದು ಹೇಳುತ್ತೀರಿ. ನಿಮ್ಮ ಹತ್ತಿರ ನಾವು ನೀತಿ ಕಲಿತುಕೊಳ್ಳಬೇಕಾ? ಈ ದೇಶ ನೋಡುತ್ತಿದೆ.

ಅಧ್ಯಕ್ಷರು: ಒಬ್ಬೊಬ್ಬರು ಮಾತನಾಡಿ.

(ಗೊಂದಲ)

ಅಧ್ಯಕ್ಷರು: ಮಾನ್ಯ ಉಪ ಮುಖ್ಯಮಂತ್ರಿಗಳು ಮಾತನಾಡುತ್ತಿದ್ದಾರೆ. ದಯವಿಟ್ಟು ಕೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, ಮಾನ್ಯ ರಮೇಶ್ ಕುಮಾರ್‌ರವರು ಮತ್ತು ಮಾನ್ಯ ಪ್ರತಿ ಪಕ್ಷದ ನಾಯಕರಲ್ಲಿ ಏನು ಭಾವನೆ ಇದೆ ಎಂಬುದು ನನಗೆ ಅರ್ಥವಾಗುತ್ತಿದೆ. ಒಂದೇ ತಿಂಗಳ ಅಂತರದಲ್ಲಿ ರಾಜ್ಯಪಾಲರು ಅದೇ ಜಂಟಿ ಅಧಿವೇಶನ ಉದ್ದೇಶಿಸಿ ಎರಡನೇ ಬಾರಿ ಭಾಷಣ ಮಾಡುವುದು ಸರಿಯಲ್ಲ ಎಂದು ಹೇಳುವುದು ನಮ್ಮ ಮುಂದಿರುವ ಪ್ರಶ್ನೆ. ತಾವು ಮಾತನಾಡುವಾಗ ನಾನು ಸೈಲೆಂಟಾಗಿ ಕೂತಿದ್ದೆ, ಹಾಗೆ ನಾನು ಒಂದು ನಿಮಿಷ ಮಾತನಾಡುವುದಕ್ಕೆ ಅವಕಾಶ ಮಾಡಿ ಕೊಡಿ. ಜನವರಿ 18ನೇ ತಾರೀಖು ರಾತ್ರಿ ನಾವು ರಾಜ್ಯಪಾಲರಿಗೆ ಭೇಟಿ ಮಾಡಿದೆವು. ಈ ಮನೆಯ 122 ಜನ ಶಾಸಕರ ಬಹುಮತವನ್ನು ಕಳೆದು ಕೊಂಡಿದ್ದಾರೆ, ದಯಮಾಡಿ ನೀವು ನಾಳೆ ರಾಜ್ಯಪಾಲರ ಭಾಷಣ ಮಾಡಬೇಡಿ ಎಂದು ಕೇಳಿದೆವು. ಮಾನ್ಯ ರಾಜ್ಯಪಾಲರು ಏನು ಉತ್ತರ ಕೊಟ್ಟರು ಎಂದರೆ, ಒಂದು ಸಾರಿ ಕ್ಯಾಬಿನೆಟ್‌ನಲ್ಲಿ ತೀರ್ಮಾನ ಮಾಡಿ ಈ ನಿರ್ಣಯ ಆಗಿರುವುದರಿಂದ, ಕ್ಯಾಬಿನೆಟ್ ಬೇಡ ಎಂದು ಹೇಳದಿದ್ದರೆ ನಾನು ಭಾಷಣ ನಿಲ್ಲಿಸುವುದಕ್ಕೆ ಬರುವುದಿಲ್ಲ ಯಡಿಯೂರಪ್ಪನವರೇ ಎಂದು ಹೇಳಿದರು. ನಾವು 122 ಜನ ಶಾಸಕರು ಅವರಿಗೆ ಬಹುಮತ ಇಲ್ಲ ನೀವು ಭಾಷಣ ಮಾಡಬೇಡಿ ಎಂದು ರಾಜ್ಯಪಾಲರ ಮನೆ ಮುಂದೆ ಧರಣಿ ಕೂತಿದ್ದೆವು. ಇದು ಒಂದನೇ ಭಾಗ. ಎರಡನೆಯದು, ದಿನಾಂಕ 19.1.06 ರಂದು ರಾಜ್ಯಪಾಲರು ಮಾಡಿದ ಭಾಷಣದ ಮೇಲೆ ಚರ್ಚೆ ನಡೆಯದೇ ಇದ್ದುದ್ದರಿಂದ, ಮತ್ತು ಅದಕ್ಕೆ ವಂದನೆ ಸಲ್ಲಿಸದೆ ಇದ್ದುದ್ದರಿಂದ ಮತ್ತು ಆ ಸಂದರ್ಭದಲ್ಲಿ ಇದ್ದ ಸರ್ಕಾರ ಬಿದ್ದು ಹೋಗಿದ್ದರಿಂದ, ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ ರಾಜ್ಯಪಾಲರು ಜಂಟಿ ಅಧಿವೇಶನವನ್ನು ಉದ್ದೇಶಿಸಿ ಭಾಷಣ ಮಾಡಲು, ಆ ಬಗ್ಗೆ ಚರ್ಚಿಸಲು, ಮತ್ತು ಅವರಿಗೆ ವಂದನೆ ಸಲ್ಲಿಸುವುದಕ್ಕೆ ಅವಕಾಶ ಮಾಡಿಕೊಡಬೇಕಾಗುತ್ತದೆ. ನಾವು ಕ್ಯಾಬಿನೆಟ್

ರೆಕಮಂಡ್ ಮಾಡಿದಂತೆ ರಾಜ್ಯಪಾಲರು ಈ ಭಾಷಣ ಮಾಡಿದ್ದಾರೆ. ನಾನು ನಿಮಗೆ ಬಹಳ ಪ್ರಮುಖವಾದ ಸಂಗತಿ ಕೇಳುತ್ತೇನೆ. ನಿಮಗೆ ಬಹುಮತ ಇದ್ದಿದ್ದರೆ ಈ ಪ್ರಶ್ನೆ ಉದ್ಭವವಾಗುತ್ತಿರಲಿಲ್ಲ. ನಿಮ್ಮ ಸರ್ಕಾರ ಬಿದ್ದ ಮೇಲೆ ಹೊಸ ಸರ್ಕಾರ ಅಸ್ಥಿತ್ವಕ್ಕೆ ಬಂದ ಮೇಲೆ, ನಿಮ್ಮ ನೀತಿ ನಿಲುವುಗಳು ಏನಿತ್ತು ಅದನ್ನು ನಾವು ಮುಂದುವರೆಸಿಕೊಂಡು ಹೋಗುವುದಕ್ಕಾಗುವುದಿಲ್ಲ, ಎಂದು ಹೇಳಿ ರಾಜ್ಯಪಾಲರು ಭಾಷಣ ಮಾಡಿದರು. ರಾಜ್ಯಪಾಲರು ಭಾಷಣ ಆದ ಮೇಲೆ ನಾವು ಚರ್ಚೆ ಪ್ರಾರಂಭ ಮಾಡಿದ್ದೇವೆ. ಹಿಂದೆ ಮಾಡಿದ ರಾಜ್ಯಪಾಲರ ಭಾಷಣಕ್ಕೆ ಚರ್ಚೆಗೆ ಅವಕಾಶ ಇಲ್ಲ. ಏಕೆಂದರೆ, ಆ ಸರ್ಕಾರ ಬಿದ್ದು ಹೋಗಿದೆ. ಇದು ಸಾಮಾನ್ಯ ಜನರಿಗೆ ಗೊತ್ತಿದ್ದರೂ ಸಹ ಗಂಟೆ ಗಂಟ್ಟಲೆ ಕೂತು ಇಲ್ಲಿ ಚರ್ಚೆ ಮಾಡುವುದರಲ್ಲಿ ಅರ್ಥ ಏನಿದೆ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನಿಜ, ನೀವು ಹೇಳಿದ್ದನ್ನು ನಾನು ಒಪ್ಪುತ್ತೇನೆ. ಮಾನ್ಯ ಉಪ ಮುಖ್ಯಮಂತ್ರಿಗಳು ಹೇಳಿರತಕ್ಕಂಥದ್ದು ಸರಿ ಇದೆ. ಮಾನ್ಯ ಅಧ್ಯಕ್ಷರೆ, ಇಲ್ಲಿ ಕೇಳಿ. ಮಾನ್ಯ ಉಪ ಮುಖ್ಯಮಂತ್ರಿಗಳು ಹೇಳಿರುವುದು ಸರಿ ಇದೆ. ಹಾಗಾದರೆ 24ನೇ ತಾರೀಖು ರಾಜ್ಯಪಾಲರು ಭಾಷಣ ಮಾಡಿದರಲ್ಲಾ ಆಗ ಆ ಭಾಷಣದಲ್ಲಿ ಏನು ಹೇಳಬೇಕಾಗಿತ್ತು, 176ರ ಅನುಚ್ಛೇದದಲ್ಲಿ ಎಂದು ಹೇಳಬೇಕಾಗಿತ್ತು. ಆದರೆ ಅವರು ಏನು ಹೇಳಿದ್ದಾರೆಂದರೆ ಅನುಚ್ಛೇದ 175(1)ರ ಅಡಿಯಲ್ಲಿ ಮಾತ್ರ ನಾನು ಎರಡು ಸದನದ ಗೌರವಾನ್ವಿತ ಸದಸ್ಯರುಗಳನ್ನು ಉದ್ದೇಶಿಸಿ ಮಾತ್ರ ಭಾಷಣ ಮಾಡುತ್ತಿದ್ದೇನೆ ಎಂದು ಹೇಳಿದ್ದಾರೆ. Why he has said it?

ಶ್ರೀ ಎನ್. ಚೆಲುವರಾಯಸ್ವಾಮಿ: 176 exhaust ಆಗಿದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: 176 nullifyed ಆಗಿದ್ದರೆ ಇವರು 176 ಎಂದೇ ಹೇಳಬೇಕಾಗಿತ್ತು. 176ರ ಅನುಚ್ಛೇದದಲ್ಲಿಯೇ ಭಾಷಣ ಮಾಡುತ್ತಿದ್ದೇನೆ ಎಂದು ಅವರು ಹೇಳಬೇಕಾಗಿತ್ತು. ಆದರೆ ಅವರು 175(1) ಅನುಚ್ಛೇದದಲ್ಲಿ ನಾನು ಭಾಷಣ ಮಾಡುತ್ತಿದ್ದೇನೆ ಎಂದು ಮಾತ್ರ ಅವರು ಹೇಳಿದ್ದಾರೆ.

ಅಧ್ಯಕ್ಷರು: ಮಾನ್ಯ ಶ್ರೀರಾಮರೆಡ್ಡಿಯವರೆ, ಎಂ.ಪಿ. ಪ್ರಕಾಶ್‌ರವರು ಏನೋ ಹೇಳುತ್ತಾರಂತೆ. ಒಂದ್ನಿಮಿಷ ತಾವು ಕುಳಿತುಕೊಳ್ಳಿ.

ಶ್ರೀ ಎಂ.ಪಿ. ಪ್ರಕಾಶ್: ಮಾನ್ಯ ಅಧ್ಯಕ್ಷರೆ, ಈಗಾಗಲೇ ಸದನದ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿದ್ದಾರೆ. ಗೌರವಾನ್ವಿತ ಹಿರಿಯ ಸದಸ್ಯರಾದ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರೂ ಕೂಡ ಇದರಲ್ಲಿ ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಶ್ರೀರಾಮರೆಡ್ಡಿಯವರು ಕ್ರಿಯಾಲೋಪ ಎತ್ತಿದ್ದೇವೆ ಎಂದು ಕೆಲವು ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಅದರ ಮೇಲೆ ಚರ್ಚೆಯಾಗುತ್ತಿಲ್ಲ. ಕ್ರಿಯಾಲೋಪ ಸಮಂಜಸವೇ ಅಥವಾ ಅಲ್ಲವೇ ಎಂಬ ಬಗ್ಗೆ ತಾವು ಇನ್ನೂ ಕೂಡ ತೀರ್ಮಾನ ಮಾಡಿ ತಮ್ಮ ಆದೇಶವನ್ನು ಕೊಟ್ಟಿಲ್ಲ. ಈಗ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದು ಇಷ್ಟೆ. ಈ ವಿಚಾರದಲ್ಲಿ ಚರ್ಚೆ ಮಾಡುವುದಕ್ಕೆ ಎಲ್ಲರಿಗೂ ಅವಕಾಶ ಇರುವುದೇ ಆಗಿದ್ದರೆ ನಾವೆಲ್ಲಾ ಇದರ ಬಗ್ಗೆ ಚರ್ಚೆ ಮಾಡೋಣ. ಯಾವ ಯಾವ ಕಾನೂನು ಯಾವ ರೀತಿ ಇರುತ್ತದೆ, ನಮಗೆ ಇರತಕ್ಕಂಥ ಜಡ್ಜ್‌ಮೆಂಟ್‌ಗಳು ಏನು ಯಾವ ತರಹದಲ್ಲಿ ಅದರ ಅರ್ಥ ವಿಶ್ಲೇಷಣೆ ಇರುತ್ತವೆ ಎನ್ನುವ ವಿಚಾರಗಳೂ ಕೂಡ ಬರುತ್ತವೆ. ಆದುದರಿಂದ ಈಗಾಗಲೇ ಅವರು ಕ್ರಿಯಾಲೋಪ ಎತ್ತಿದ್ದಾರೆ. ತಾವು ಈ ಬಗ್ಗೆ ಚರ್ಚೆಗೆ ತಾವು ಕರೆಯುವುದೇ ಆಗಿದ್ದರೆ ತಾವು ಯಾರನ್ನಾದರೂ ಕರೆಯಬಹುದು. ನಾನು ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ಇಚ್ಛೆಪಡುತ್ತಿದ್ದೇನೆ. ಆದುದರಿಂದ ತಾವು ಅಲ್ಲಿರತಕ್ಕಂಥವರನ್ಯಾರನ್ನಾದರೂ ಕರೆಯಬಹುದು ಅಥವಾ ನಮ್ಮನ್ನಾದರೂ ಕರೆಯಬಹುದು ಅಥವಾ ಯಾರನ್ನಾದರೂ ಕರೆಯಬಹುದು. ನೀವು ನನಗೆ ಅವಕಾಶವನ್ನು ಕೊಟ್ಟರೆ ನಾನು ಅದರ ಬಗ್ಗೆ ಮಾತನಾಡಲು ಸಿದ್ಧನಿದ್ದೇನೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಮಾನ್ಯ ಅಧ್ಯಕ್ಷರೆ, ಮಾನ್ಯ ಉಪ ಮುಖ್ಯಮಂತ್ರಿಗಳು ಮಾತನಾಡುತ್ತಾ 18ನೇಯ ತಾರೀಖು ನಾವುಗಳೆಲ್ಲರೂ ರಾಜ್ಯಪಾಲರ ಬಳಿಗೆ ಹೋಗಿ ಅವರಿಗೆ ಮನವರಿಕೆ ಮಾಡಿಕೊಟ್ಟೆವು, ಈಗಿರುವ ಸರ್ಕಾರಕ್ಕೆ ಬಹುಮತ ಹೋಗಿದೆಯಾದ ಕಾರಣ ನಾಳೆ ಭಾಷಣ ಮಾಡಲು ಬರಬೇಡಿ ಎಂದು ಹೇಳಿದೆವು ಎಂದು ಅವರು ಹೇಳಿದರು. ರಾಜ್ಯಪಾಲರು ಸಂವಿಧಾನದ ಪ್ರತಿನಿಧಿ. ಸಂವಿಧಾನವನ್ನು ರಕ್ಷಣೆ ಮಾಡತಕ್ಕಂಥ ಹೊಣೆಗಾರಿಕೆ ಅವರ ಮೇಲಿದೆ. ಅವತ್ತು ಅವರಿಗೆ ಆಗಿನ ಸರ್ಕಾರಕ್ಕೆ ಬಹುಮತ ಇತ್ತೋ ಇಲ್ಲವೋ ಎಂಬ ಬಗ್ಗೆ ಅನುಮಾನ ಅವರ ಮನಸ್ಸಿನಲ್ಲಿ ಬಂದಿದ್ದರೆ, ಇಂಥ ಸನ್ನಿವೇಶಗಳು ಭಾರತ ದೇಶದಲ್ಲಿ ಹಿಂದೆ ಯಾವಾಗಲಾದರೂ ಬಂದಿದೆಯೇ, ಆ ಸನ್ನಿವೇಶದಲ್ಲಿ ಯಾರು ಏನು ಮಾಡಿದರು, ರೂಲ್ಸ್ ಏನು ಹೇಳುತ್ತದೆ, ಸಂವಿಧಾನ ಏನು ಹೇಳುತ್ತದೆ, ಇವುಗಳ ಬಗ್ಗೆ ಯೋಚನೆ ಮಾಡಬೇಕಾಗಿತ್ತು. ಪಂಜಾಬ್‌ನಲ್ಲಿ ಇಂಥದ್ದೇ ಸನ್ನಿವೇಶ ಬಂದಾಗ ಏನು ಮಾಡಿದರು. ಅವೊತ್ತು ಸನ್ಮಾನ್ಯ ಉಪ ಮುಖ್ಯಮಂತ್ರಿಗಳು ಹೇಳಿದಂತೆ ಕ್ಯಾಬಿನೆಟ್‌ನಲ್ಲಿ ತೀರ್ಮಾನ ಆಗಿಬಿಡುತ್ತದೆ ನಾವು ಹೋಗಲೇಬೇಕು ಎಂದು ನಿರ್ಬಂಧ ಏನೂ ಇಲ್ಲ. ಎಲ್ಲಿದೆ ತೋರಿಸಿ, ಅದಕ್ಕೇ ನಾವು ಇನ್ನೂ ಬಹಳ ಹೇಳುವವರಿದ್ದೇವೆ. ಸನ್ಮಾನ್ಯ ರಾಜ್ಯಪಾಲರಾದಿಯಾಗಿ ಯಾರು ಯಾರು ಏನೇನು ಮಾಡಿದ್ದಾರೆ ಎಂದು ಹೇಳಬೇಕಾಗುತ್ತದೆ. ಎಲ್ಲರಿಗೂ ಪರಮೋಚ್ಛ ಈ ಸಂವಿಧಾನ. ನಾವು ಈ ಸದನಕ್ಕೆ ಬಂದ ಮೇಲೆ ಬಾಯಿ ಬಿಡಬೇಕಾಗಿದ್ದರೆ ಮೊದಲು ಪ್ರಮಾಣವನ್ನು ಸ್ವೀಕರಿಸಿ ಅದಕ್ಕೆ ನಮ್ಮ ಗೌರವ ವ್ಯಕ್ತಪಡಿಸಿ ತದನಂತರ ಬಂದು ನಮ್ಮ ಆಸನದಲ್ಲಿ ಕುಳಿತು ನಾವು ಮಾತನಾಡತಕ್ಕಂಥದ್ದು. ಅದನ್ನು ಬೀದಿಗೆ ಬಿಸಾಕಿ ಇಲ್ಲಿ ಬಾಯಿಗೆ ಬಂದ ಹಾಗೆ ಯಾರೂ ಇಲ್ಲಿ ಮಾತನಾಡುವುದಕ್ಕೆ ಬರುವುದಿಲ್ಲ. ಆದುದರಿಂದ ಹಿರಿಯ ಸದಸ್ಯರಾದ ಮಾನ್ಯ ಪ್ರಕಾಶ್‌ರವರು ಹೇಳಿದಂತೆ ನಮ್ಮದೇ ಆದ ಅಭಿಪ್ರಾಯಗಳನ್ನು ತಮ್ಮ ಮುಂದೆ ನಿವೇದಿಸಿಕೊಳ್ಳಬೇಕಾಗಿದೆ. ಪಾಯಿಂಟ್ ಆಫ್ ಆರ್ಡರ್ ಮೇಲೆಯೇ ಚರ್ಚೆಯಾಗಲಿ. ಇದೇ ವಿಧಾನಸಭೆಯಲ್ಲಿ ಒಂದೇ ಪಾಯಿಂಟ್ ಆಫ್ ಆರ್ಡರ್ ಮೇಲೆ ಎರಡ್ಮೂರು ದಿವಸಗಳ ಕಾಲ ಚರ್ಚೆಯಾಗಿರತಕ್ಕಂಥ ಪ್ರಸಂಗಗಳು ನಡೆದಿರುವುದು ಇವೆ. ತಾವು ದಯಮಾಡಿ ತಾಳ್ಮೆಯಿಂದ ಪರಾಂಬರಿಸಬೇಕು. ನಮಗೆಲ್ಲರಿಗೂ ಕೂಡ ಅವಕಾಶ ಕೊಡಬೇಕು. ಮಾನ್ಯ ಪ್ರಕಾಶ್‌ರವರು ಹೇಳಿದಂತೆ ಎಲ್ಲರೂ let them have their say. Ultimately ತಾವು ತೀರ್ಪು ಕೊಡಿ. ಆಮೇಲೆ ನೋಡೋಣ ಏನು ಆಗುತ್ತದೆ ಎಂದು.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ,

ಅಧ್ಯಕ್ಷರು: ತಾವೂ ಕೂಡ ಇದರ ಮೇಲೆಯೇ ಭಾಷಣ ಮಾಡಬೇಡಿ.

ಶ್ರೀ ವಾಟಾಳ್ ನಾಗರಾಜ್: ಭಾಷಣವಲ್ಲ. ಮಾನ್ಯ ಶ್ರೀರಾಮರೆಡ್ಡಿಯವರು ಎತ್ತಿರುವ ಕ್ರಿಯಾಲೋಪಕ್ಕೆ ಬೆಂಬಲಿಸಿ . . .

ಅಧ್ಯಕ್ಷರು: ಅವರು ಕ್ರಿಯಾಲೋಪ ಏನು ಎತ್ತಿದ್ದಾರೆಂದರೆ 176ರಲ್ಲಿ ರಾಜ್ಯಪಾಲರು ಭಾಷಣ ಮಾಡಿಲ್ಲ, 175(1)ರಲ್ಲಿ ಮಾಡಿದ್ದಾರೆ . . .

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ(ಉಪ ಮುಖ್ಯಮಂತ್ರಿಗಳು): ಬಹುಮತ ಕಳೆದುಕೊಂಡು ಸರ್ಕಾರ ಬಿದ್ದುಹೋಗಿದ್ದರೂ ಕೂಡ ಹಳೆ ರಾಜ್ಯಪಾಲರ ಭಾಷಣ ಮೇಲೆ ಚರ್ಚೆ ಮಾಡಬೇಕು ಎನ್ನುವುದು . . .

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ: ಮಾನ್ಯ ಅಧ್ಯಕ್ಷರೆ,

ಅಧ್ಯಕ್ಷರು: ಮಾನ್ಯ ದೇಶಪಾಂಡೆಯವರು ಏನೋ ಹೇಳುತ್ತಾರೆ. ಕೇಳಿ ಮಾನ್ಯ ಯಡಿಯೂರಪ್ಪನವರೇ.

ಶ್ರೀ ಆರ್.ವಿ. ದೇಶಪಾಂಡೆ: ಮಾನ್ಯ ಅಧ್ಯಕ್ಷರೆ, ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಡಿಸ್ಟಿಂಗ್‌ಷನ್ ಮಾಡಿದ್ದಾರೆ. ಅವರು ಏನು ಹೇಳುತ್ತಾರೆಂದರೆ "Inview of the difficulties involved in distinguishing between the scope and effect of Article 175(1) vis-a-vis Article 176(1) of the Constitution of India, only with a view to apprise the august house and people of the state, broad information is being provided through my address of what action the Goverenment proposes to take in the ensuing days. I reiterate that I am addressing this august House only under Article 175(1) of the Constitution."
ಮಾನ್ಯ ರಾಜ್ಯಪಾಲರೇ ಒಪ್ಪಿಕೊಂಡಿದ್ದಾರೆ. He has not been able to distinguish between 175 and 176. ರಾಜ್ಯಪಾಲರೇ ಈ ರೀತಿ ಡಿಸ್ಟಿಂಗ್‌ಷನ್ ಮಾಡಲು ಆಗಲಿಲ್ಲ ಅಂದ ಮೇಲೆ it means he has not consulted the constitutional experts or he is confused. ಆದುದರಿಂದ ಮಾನ್ಯ ಅಧ್ಯಕ್ಷರೆ, ಇಲ್ಲಿ ಈಗ ಇದರ ಬಗ್ಗೆ ಗಡಿಬಿಡಿ ಮಾಡುವುದು ಬೇಡ. ಮಾನ್ಯ ಪ್ರಕಾಶ್‌ರವರು ಹೇಳಿದ ಹಾಗೆ ಇದರ ಬಗ್ಗೆ ಚರ್ಚೆಯಾಗಲಿ. ನಿರ್ಣಯ ಏನೋ ಮಾಡುವುದು ಆಗುತ್ತದೆ. ಮೊದಲು ಚರ್ಚೆಯಾಗುವುದಕ್ಕೆ ತಾವು ಅವಕಾಶ ಮಾಡಿಕೊಡಿ. ತಾವು ಒಂದು ಪ್ರಶ್ನೆ ಕೇಳಿದಿರಿ. ನಾವು 18ನೇಯ ತಾರೀಖಿಗೆ ಮುಂಚೆ 17ರ ರಾತ್ರಿ ರಾಜ್ಯಪಾಲರ ಹತ್ತಿರ ಹೋದಾಗ 121 ಜನರಿಂದ 130 ರವರೆಗೂ ಇದ್ದೆವು, ಎಂದು Governor cannot take cognisance of that. If he had taken ನಮ್ಮ ರಮೇಶ್‌ಕುಮಾರ್‌ರವರು ಹೇಳಿದ ಹಾಗೆ he could have done anything he wanted.

ಶ್ರೀ ಬಿ.ಎಸ್. ಯಡಿಯೂರಪ್ಪ(ಉಪ ಮುಖ್ಯಮಂತ್ರಿಗಳು): ಸುಪ್ರೀಂಕೋರ್ಟ್‌ನ ತೀರ್ಮಾನದ ಪ್ರಕಾರ ಸದನದಲ್ಲಿಯೇ ಬಲಾಬಲದ ತೀರ್ಮಾನವಾಗಲಿ ಎಂದು ರಾಜ್ಯಪಾಲರು ತಮಗೆ ಅವಕಾಶ ಮಾಡಿಕೊಟ್ಟರು. ರಾಜ್ಯಪಾಲರು ಏನು ಹೇಳಿದರು. ಸುಪ್ರೀಂಕೋರ್ಟ್‌ನಲ್ಲಿ ತೀರ್ಮಾನವಾಗಿರುವುದು ಇದೆ. ಬಲಾಬಲದ ಪ್ರಶ್ನೆ ಈ ಮನೆಯಲ್ಲಿಯೇ ಆಗಬೇಕು ಎನ್ನುವ ತೀರ್ಮಾನಕ್ಕೋಸ್ಕರ ನಿಮಗೆ ಅವಕಾಶ ಮಾಡಿಕೊಟ್ಟರು. ನೀವು ಬಹುಮತ ಕಳೆದುಕೊಂಡ ಮೇಲೆ ಇನ್ನೂ ಯಾಕೆ ಆ ಬಗ್ಗೆ ನೀವು ಚರ್ಚೆ ಮಾಡುತ್ತಿದ್ದೀರಿ?

ಶ್ರೀ ಕೆ.ಆರ್. ರಮೇಶ್‌ಕುಮಾರ್: ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಉಪ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. 19ನೇ ತಾರೀಖಿನಿಂದ ಅಧಿವೇಶನ ಇತ್ತು. ಅಧಿವೇಶನ ಇದ್ದಾಗ ಈ ಮನೆಯ ಎಲ್ಲಾ ಸದಸ್ಯರಿಗೆ ತಮ್ಮ ಎಲ್ಲಾ ಹಕ್ಕು ಚಲಾಯಿಸತಕ್ಕಂಥ ಅವಕಾಶ ಅವರಿಗೆ ಇರುತ್ತದೆ, ಹೀಗಿರುವಾಗ 27ನೇಯ ತಾರೀಖು ಎಂದು ನಿಗದಿ ಮಾಡತಕ್ಕಂಥ ಅಗತ್ಯ ಏನಿತ್ತು? ತಾವುಗಳೆಲ್ಲರೂ ಅವರ ಬಳಿ ಡೆಲಿಗೇಷನ್ ಹೋದಾಗ, ಅವರು ನಾಳೆಯಿಂದ ಹೇಗೂ ಅಧಿವೇಶನ ಇದ್ದೇ ಇದೆಯಲ್ಲಾ, ಅಲ್ಲಿ ನಿಮ್ಮ ಹಕ್ಕನ್ನು ಚಲಾಯಿಸಿ, ನಾಳೆಯೇ ಹೋಗಿ ಅವಿಶ್ವಾಸ ನಿರ್ಣಯ ಮಂಡಿಸಿ ಎಂದು ಅವರು ನಿಮಗೆ ಹೇಳಬಹುದಾಗಿತ್ತು. X

X ಈ ಪದಗಳನ್ನು ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾನ್ಯ ರಮೇಶ್‌ಕುಮಾರ್‌ರವರೆ, 19ನೇಯ ತಾರೀಖು ರಾಜ್ಯಪಾಲರು ಭಾಷಣ ಮಾಡು ಕಾಲಕ್ಕೆ ನಿಮ್ಮಲ್ಲಿ ಇದ್ದವರೇ 64 ಜನರು 224 ಅಲ್ಲ. ಒಂದು ಕ್ಷಣ ಅಧಿಕಾರದಲ್ಲಿ ಮುಂದುವರೆಯುವುದಕ್ಕೆ ಸಾಧ್ಯವಿರಲಿಲ್ಲ. ಅವೊತ್ತೇ ರಾಜೀನಾಮೆ ಕೊಟ್ಟು ಹೋಗಬೇಕಾಗಿತ್ತು.

ಶ್ರೀ ಕೆ.ಆರ್. ರಮೇಶ್‌ಕುಮಾರ್: ನಾನು ಇಲ್ಲ ಎಂದು ಹೇಳುತ್ತಿಲ್ಲ. ಸನ್ಮಾನ್ಯ ಉಪ ಮುಖ್ಯಮಂತ್ರಿಗಳೇ, ನಾನು ಈಗಲೂ ಹೇಳುತ್ತಿದ್ದೇನೆ. ನಮಗೆ ಅವೊತ್ತು ಬಲ ಇತ್ತು ಎಂದು ಹೇಳುತ್ತಿಲ್ಲ.

ಅಧ್ಯಕ್ಷರು: ಮಧ್ಯೆ ಯಾರೂ ಮಾತನಾಡಬೇಡಿ. ಮಾನ್ಯ ರಮೇಶ್‌ಕುಮಾರ್‌ರವರು ಏನು ಹೇಳುತ್ತಾರೆ ಕೇಳಿ. ಆಮೇಲೆ ಅದಕ್ಕೆ ಉತ್ತರ ಕೊಡುವಿರಂತೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಮಾನ್ಯ ಅಧ್ಯಕ್ಷರೆ, ಮಾನ್ಯ ಯಡಿಯೂರಪ್ಪನವರಿಗೆ ನಾನು ಇಷ್ಟೇ ಹೇಳುತ್ತಿದ್ದೇನೆ. ಸನ್ಮಾನ್ಯ ರಾಜ್ಯಪಾಲರ ಬಳಿಗೆ ತಮ್ಮ ನಿಯೋಗ ಹೋದಾಗ ಅಂದು 18ನೇ ತಾರೀಖು. 19ನೇಯ ತಾರೀಖಿಗೆ ಆಗಲೇ ಸದನದ ಕಾರ್ಯಕಲಾಪಗಳು ಏನು ಎಂದು ನಿಗದಿಯಾಗಿತ್ತು. ಆದುದರಿಂದ ಅವರು ಒಂದು ಮಾತು ಹೇಳಬಹುದಿತ್ತು. ಹೇಗಿದ್ದರೂ ನಾಳೆಯಿಂದ ಅಧಿವೇಶನ ಇದೆಯಲ್ಲಾ ಅಲ್ಲಿ ತಮ್ಮ ಹಕ್ಕನ್ನು ತಾವು ಚಲಾಯಿಸಿ ಎಂದು ಗಾಜ್ಯಪಾಲರು ಹೇಳಿದ್ದರೆ ಮಾರನೇ ದಿವಸವೇ ತಾವು ಒಂದು ನೋಟೀಸ್ ಕೊಡಬಹುದಿತ್ತು.

ಶ್ರೀ ಹೆಚ್.ಸಿ. ಬಾಲಕೃಷ್ಣ: ಅಂದಿನ ಮಾನ್ಯ ಮುಖ್ಯಮಂತ್ರಿಗಳೇ ಈ ಮಾತನ್ನು ಹೇಳಬಹುದಿತ್ತು. ನಾಳೆ ಸಭೆಯಲ್ಲಿಯೇ ನಿರೂಪಿಸುತ್ತೇವೆ ಎಂದು. ಆದರೆ ಅಂದಿನ ಮುಖ್ಯಮಂತ್ರಿಗಳು ಹೇಳುವುದಕ್ಕೆ ತಯಾರಿರಲಿಲ್ಲ.

(ಗೊಂದಲ)

ಅಧ್ಯಕ್ಷರು: ದಯಮಾಡಿ ರಮೇಶ್‌ಕುಮಾರ್‌ರವರು ಏನು ಹೇಳುತ್ತಿದ್ದಾರೆ ಕೇಳಿ. ಅದಕ್ಕೆ ಆಮೇಲೆ ಉತ್ತರ ಕೊಡಿ. ಏಕೆ ಈ ರೀತಿ ಮಧ್ಯೆ ಮಾತನಾಡುತ್ತೀರಿ.

ಶ್ರೀ ಹೆಚ್.ಸಿ. ಬಾಲಕೃಷ್ಣ: ಮಾನ್ಯ ಅಧ್ಯಕ್ಷರೆ, ಮಾನ್ಯ ಶ್ರೀರಾಮರೆಡ್ಡಿಯವರು ಏನು ಕ್ರಿಯಾಲೋಪ ಎತ್ತಿದ್ದಾರೆ ಅದರ ಮೇಲೆ ಚರ್ಚೆಯಾಗಬೇಕೋ ಬೇಡವೋ ಎಂಬ ಬಗ್ಗೆ ದಯಮಾಡಿ ತಾವು ತೀರ್ಮಾನ ಕೊಡಬೇಕು.

ಅಧ್ಯಕ್ಷರು: ಮಾನ್ಯ ರಮೇಶ್‌ಕುಮಾರ್‌ರವರು ಏನು ಹೇಳುತ್ತಾರೆ ಕೇಳೋಣ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ: ಮಾನ್ಯ ಪ್ರಕಾಶ್‌ರವರೂ ಕೂಡ ಇವರ ಬಗ್ಗೆ ಚರ್ಚೆಗೆ ಅವಕಾಶ ಕೊಡಿ ಎಂದು ಹೇಳಿದ್ದಾರೆ. ಮಾನ್ಯ ಅಧ್ಯಕ್ಷರು ಒಪ್ಪಿಕೊಂಡಿದ್ದಾರೆ.

ಶ್ರೀ ಅರಗ ಜ್ಞಾನೇಂದ್ರ: ಮಾನ್ಯ ಅಧ್ಯಕ್ಷರು ಇನ್ನೂ ಚರ್ಚೆಗೆ ಅವಕಾಶ ಮಾಡಿ ಕೊಡದಿದ್ದರೂ ಕೂಡ ಯಾವ ನಿಯಮಾವಳಿಯಡಿಯಲ್ಲಿ ಎಲ್ಲರೂ ಮಾತನಾಡುತ್ತಿದ್ದಾರೆ ಹೇಳಿ. ಸುಮ್ಮನೆ ಸದನದ ಸಮಯ ಹಾಳು ಮಾಡುವುದು, ಇಲ್ಲಿ ಚರ್ಚೆ ನಡೆಯಬಾರದು ಇದನ್ನು ಅಬ್ಜೆಕ್ಷನ್ ಮಾಡುವಂಥ ಒಂದೇ ಉದ್ದೇಶವನ್ನು ಅವರು ಹೊಂದಿದ್ದಾರೆ. ಅದು ಬಿಟ್ಟು ಬೇರೆ ಯಾವುದೂ ಇಲ್ಲ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ: ಮಾನ್ಯ ಅಧ್ಯಕ್ಷರೆ, ನಾನು ಮಾತನಾಡುವುದನ್ನು ಇನ್ನೂ ಮುಗಿಸಿಲ್ಲ.

ಅಧ್ಯಕ್ಷರು: ಆಯಿತು. ತಾವು ಮಾತನಾಡಿ ಮುಗಿಸಿ. ಎಲ್ಲರೂ ಮಾತನಾಡುತ್ತಾರೆ ಎಂದು ತಾವು ಕುಳಿತುಕೊಂಡುಬಿಟ್ಟು ಈಗ ಮಾತು ಮುಗಿಸಿಲ್ಲ ಮುಗಿಸಿಲ್ಲ ಎಂದರೆ ಹೇಗೆ? ಈಗ ಮಾತನಾಡಿ.

ಶ್ರೀ ಆರ್.ವಿ. ದೇಶಪಾಂಡೆ: ಮಾನ್ಯ ಅಧ್ಯಕ್ಷರೆ, ಇದನ್ನು ನಾನು ಮಾನ್ಯ ಉಪ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ.

(ಗೊಂದಲ)

ಶ್ರೀ ಕೆ.ಆರ್. ರಮೇಶ್‌ಕುಮಾರ್: ಆ ರೀತಿ ಎದ್ದು ಎದ್ದು ಕೈತೋರಿಸಿಕೊಂಡು ಹಾವಭಾವಗಳೊಂದಿಗೆ ಏಕಾ ಏಕಿ ಬೈಯ್ಯುತ್ತಿದ್ದಾರಲ್ಲಾ, ಇದೇನು ವಿಧಾನಸಭೆಯೇ, ಅಥವಾ ಅಲ್ಲವೇ, ನಮ್ಮ ಪರಿಸ್ಥಿತಿ ಏನು?

(ಗೊಂದಲ)

ಅಧ್ಯಕ್ಷರು: ಮಾನ್ಯ ರಮೇಶ್‌ಕುಮಾರ್‌ರವರೆ ಇದೇನು ವಿಧಾನಸಭೆಯೇ ಎಂದು ಕೇಳುತ್ತಿದ್ದೀರಲ್ಲಾ, ನಿಮಗೆ ಏನು ಅನ್ನಿಸುತ್ತದೆ ಹೇಳಿ.

(ಗೊಂದಲ)

ಶ್ರೀ ಕೆ.ಆರ್. ರಮೇಶ್‌ಕುಮಾರ್: ನೀವು ಯಾವ ಕ್ಷೇತ್ರದಿಂದ ಬಂದಿದ್ದೀರಿ ಎಂಬುದನ್ನು ನೆನಪು ಮಾಡಿಕೊಳ್ಳಿ.

ಶ್ರೀ ಬಿ.ಎಸ್. ಹೊರಟ್ಟಿ: ಮಾನ್ಯ ಅಧ್ಯಕ್ಷರೆ, ಅವರ ಕಡೆಯೂ ಎಲ್ಲರೂ ಎದ್ದುನಿಂತು ಮಾತನಾಡುತ್ತಾರೆ. ಈ ಕಡೆಯಲ್ಲಿಯೂ ಮಾತನಾಡುತ್ತಾರೆ. ಅವರೂ ಕೂಡ ಅಧ್ಯಕ್ಷರಾದ ತಾವು ಅಪ್ಪಣೆ ಕೊಟ್ಟಾಗ ಮಾತ್ರ ಮಾತನಾಡಲಿ. ನಾವೂ ಹಾಗೆಯೇ ಮಾಡೋಣ. ಅಧ್ಯಕ್ಷರೇ, ನಿಯಮವನ್ನು ಪಾಲಿಸುವುದಕ್ಕೆ ತಾವು ಎಲ್ಲರಿಗೂ ಹೇಳಿ. ಒಂದು ಕಡೆಯವರಿಗೆ ಮಾತ್ರ ಅಲ್ಲ. ಮಾನ್ಯ ರಮೇಶ್‌ಕುಮಾರ್‌ರವರು ಅಧ್ಯಕ್ಷರಾಗಿದ್ದಂಥವರು. ಈ ರೀತಿಯಾಗಿ ಹುಚ್ಚಾಪಟ್ಟೆಯಾಗಿ ಮಾತನಾಡುತ್ತಿದ್ದಾರೆ ಎಂದು ಹೇಳಿದರು. ಅವರು ಎದ್ದು ಮಾತನಾಡುವುದಿಲ್ಲವೆ? ನಾನು ಹೇಳುತ್ತೇನೆ, ನೀವು ಸಭಾಧ್ಯಕ್ಷರು, ನೀವು ಪರ್ಮಿಷನ್ ಕೊಟ್ಟನಂತರ ಮಾತನಾಡಲಿ. ಅವರೂ ಮಾತನಾಡಲಿ, ಇವರೂ ಮಾತನಾಡಲಿ. ಅವರು ಎದ್ದು ಮಾತನಾಡುವುದಕ್ಕೆ ಕಾನೂನು ಇಲ್ಲ, ನಾವು ಎದ್ದು ಮಾತನಾಡುವುದಿದ್ದರೆ ಕಾನೂನು ಎಂದರೆ ಏನರ್ಥ? ಎಲ್ಲರಿಗೂ ಕೂಡ ಕಾನೂನು ಒಂದೇ ಇದೆ ಈ ಸದನದಲ್ಲಿ. ಈಗ ಮಾನ್ಯ ರೆಡ್ಡಿಯವರು ಏನು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ, ಆ ಪಾಯಿಂಟ್ ಆಫ್ ಆರ್ಡರ್ ಮುಗಿದನಂತರ ತಾವು ರೂಲಿಂಗ್ ಕೊಡಿ. ಆಮೇಲೆ ಮಾತನಾಡಲಿ. ಈಗ ಮಾನ್ಯ ರೆಡ್ಡಿಯವರು ಏನು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ ಅದಕ್ಕೆ ತಾವು ರೂಲಿಂಗ್ ಕೊಡುವ ಪೂರ್ವದಲ್ಲಿ ಉಳಿದವರ್ಯಾರು ಮಾತನಾಡುವಂತಹ ಅವಶ್ಯಕತೆಯಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ: ಯಾರು ಹೇಳಿದ್ದು? ನಮ್ಮ ಲೀಡರ್ ರೈಸ್ ಮಾಡಿದ್ದಾರೆ, ಮಾನ್ಯ ರೆಡ್ಡಿಯವರು ಏನು ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡಿದ್ದಾರೆ, ಅದರ ಬಗ್ಗೆ ಮಾತನಾಡುವುದಕ್ಕೆ ಅಧಿಕಾರ ಇದೆ.

ಶ್ರೀ ಬಿ.ಎಸ್. ಹೊರಟ್ಟಿ: ಈಗ ಅವರು, ಮಾನ್ಯ ವಿರೋಧ ಪಕ್ಷದ ನಾಯಕರು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ ಎಂದು ಹೇಳಿದರು. ಆದರೆ ಮಾನ್ಯ ವಿರೋಧ ಪಕ್ಷದ ನಾಯಕರು ಪಾಯಿಂಟ್ ಆಫ್ ಆರ್ಡರ್ ಎತ್ತಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ: ಅವರು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ ಏಕೆ ಇಲ್ಲ?

ಶ್ರೀ ಬಿ.ಎಸ್. ಹೊರಟ್ಟಿ: ಮಾನ್ಯ ಅಧ್ಯಕ್ಷರೆ, ಪ್ರೊಸೀಡಿಂಗ್ ತೆಗೆದು ನೋಡಿ.

ಶ್ರೀ ಆರ್.ವಿ. ದೇಶಪಾಂಡೆ: ಆಯಿತು, I don't know. ಕಾನೂನು ಸಚಿವರಾಗಿ ಕಾನೂನಿಗೆ ನೀವೇ ಅಡ್ಡ ಬರುತ್ತಿದ್ದೀರಿ. ಕನೂನಿನಲ್ಲಿ ಸರಿಯಾದ ನಿರ್ಣಯವಾಗಲಿ. It is your own interest.

ಶ್ರೀ ಬಿ.ಎಸ್. ಹೊರಟ್ಟಿ: ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆಯೇ ಇಲ್ಲವೇ ಎನ್ನುವುದಕ್ಕೆ ಪ್ರೊಸೀಡಿಂಗ್ ತೆಗೆದು ನೋಡಿ. ಅವರು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದರೆ, ಉಳಿದವರೆಲ್ಲಾ ಮಾತನಾಡಲಿ. ಈಗ ಮಾನ್ಯ ರೆಡ್ಡಿಯವರು ಏನು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ, ಅದರ ಮೇಲೆ ಅವರು ಏನು ಹೇಳುತ್ತಾರೆಂದು ಕೇಳಿ. ಅದಕ್ಕೆ ತಾವು ರೂಲಿಂಗ್ ಕೊಡಿ. ಆಮೇಲೆ ನಾವು ಮಾತನಾಡೋಣ. ಅಲ್ಲಿಯವರೆಗೆ ಸುಮ್ಮಸುಮ್ಮನೆ ಎಷ್ಟೊತ್ತು ಮಾತನಾಡುತ್ತಾರೆ. ಈಗ ತಾವು ಮಾನ್ಯ ರೆಡ್ಡಿಯವರ ಪಾಯಿಂಟ್ ಆಫ್ ಆರ್ಡರ್ ಮೇಲೆ ರೂಲಿಂಗ್ ಕೊಡಿ.

(ಗೊಂದಲ)

ಶ್ರೀ ಎಸ್.ಎಸ್. ಪಾಟೀಲ್: ಮಾನ್ಯ ಅಧ್ಯಕ್ಷರೆ, ಮಾತನಾಡಲಿಕ್ಕೆ ಅವಕಾಶ ಮಾಡಿ ಕೊಟ್ಟಿದ್ದೀರಿ.

ಅಧ್ಯಕ್ಷರು: ಮಾನ್ಯ ಎಸ್.ಎಸ್. ಪಾಟೀಲ್‌ರವರೇ, ನಾವು ಅವಕಾಶ ಮಾಡಿಕೊಡಬೇಕಾಗಿಲ್ಲ. ಎಲ್ಲಾ ಅವರವರೆ ನಿಂತು ಮಾತನಾಡುತ್ತಿದ್ದಾರೆ. ಗೋಡಾ ಹೈ, ಮೈದಾನ್ ಹೈ.

ಶ್ರೀ ಆರ್.ವಿ. ದೇಶಪಾಂಡೆ: ಮಾನ್ಯ ಅಧ್ಯಕ್ಷರೆ, ನಾನು ಐದು ನಿಮಿಷದಲ್ಲಿ ಮುಗಿಸುತ್ತೇನೆ. ಇದು ಕಂಟಿನ್ಯೂಯಿಂಗ್ ಅಸೆಂಬ್ಲಿ ಸೆಷನ್. ಮಾನ್ಯ ಉಪ ಮುಖ್ಯಮಂತ್ರಿಗಳು, 176ರ ಪ್ರಕಾರ ಮಾನ್ಯ ರಾಜ್ಯಪಾಲರು ಮಾಡಿದ ಭಾಷಣದ ವಿಚಾರದಲ್ಲಿ, ನಿಮ್ಮ ಸರ್ಕಾರ ಹೋಯಿತು ಭಾಷಣ ಹೋಯಿತು ಎಂದ. ಅದು ಹಾಗೆ ಆಗುವುದಿಲ್ಲ. It is a property of the House. ಅದರ ಬಗ್ಗೆ ನೀವು ಇತಿಶ್ರೀ ಹಾಡಬೇಕಾಗುತ್ತದೆ. ನೀವು ಅದರ ಬಗ್ಗೆ ನಿರ್ಣಯ ಮಾಡಬೇಕಾಗುತ್ತದೆ. 1991 ರಲ್ಲಿ ಮಾಜಿ ಪ್ರಧಾನಿ ಚಂದ್ರಶೇಖರ್ ಅವರಿಗೆ ಇದೇ ಪರಿಸ್ಥಿತಿ ಬಂದಿತ್ತು. ಒಂದು ಉದಾಹರಣೆ ಕೊಡುತ್ತಿದ್ದೇನೆ.

ಶ್ರೀ ಎಂ.ಪಿ. ಪ್ರಕಾಶ್: ಮಾನ್ಯ ರಮೇಶ್‌ಕುಮಾರ್ ಅವರು ಹೇಳಿದ ಹಾಗೆ ಚರ್ಚೆಗೆ ಅವಕಾಶ ಕೊಡಿ. ಮಾನ್ಯ ಅಧ್ಯಕ್ಷರೆ, ತಾವು ರೂಲಿಂಗ್ ಕೊಟ್ಟು ಬಿಡಿ.

ಶ್ರೀ ಆರ್.ವಿ. ದೇಶಪಾಂಡೆ: ಅದಕ್ಕೆ ಉದಾಹರಣೆಯನ್ನು ಕೊಡುತ್ತಿದ್ದೇನೆ. Supporting to my argument I am giving example. I am supporting my argument.

Sri M.P. Prakash: But why are you quoting 1991?

Sri R.V. Deshpande: I am not discussing.

ಅಧ್ಯಕ್ಷರು: ಈಗ ಎಲ್ಲರೂ ಹೇಳಿದ್ದೇ ಹೇಳುತ್ತಿದ್ದೀರಿ, ಏನೂ ಪ್ರಯೋಜನವಾಗುವುದಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ: 1991 ರಲ್ಲಿ ಮಾಜಿ ಚಂದ್ರಶೇಖರ್‌ರವರು ರಾಜೀನಾಮೆ ಕೊಟ್ಟರು. ಆಗ ಸ್ಪೀಕರ್ ರೂಲಿಂಗ್ ಕೊಟ್ಟರು. ಆ ಸಮಯದಲ್ಲಿ ಮೋಷನ್ ಆಫ್ ಥ್ಯಾಂಕ್ಸ್ ಟು ಪ್ರೆಸಿಡೆಂಟ್‌ಗೆ ಚರ್ಚೆ ನಡೆದಿತ್ತು. ಆಗ ಸ್ಪೀಕರ್ ರೂಲಿಂಗ್ ಕೊಟ್ಟರು. ಪ್ರಧಾನ ಮಂತ್ರಿಯವರು ರಾಜೀನಾಮೆ ಕೊಟ್ಟಿದ್ದಾರೆ, ಹಾಗಾಗಿ Motion of Thanks to President's Address couapsed. ಆ ತರಹದ ನಿರ್ಣಯ ಇವತ್ತು ತಮ್ಮ ಕಛೇರಿಯಿಂದ ಆಗಿಲ್ಲ. ಈ ಸದನದಲ್ಲಿ ಮಾಡಿಲ್ಲ. ತಾವು ಆ ನಿರ್ಣಯವನ್ನು ಮಾಡಬೇಕಾಗಿತ್ತು. 176(1)ಕ್ಕೆ ತಾವು ಮೋಷನ್‌ಗೆ ಅಮೆಂಡ್‌ಮೆಂಟ್ ಮೂವ್ ಮಾಡಬಹುದು. ಕಟ್ ಮೋಷನ್ ಮೂವ್ ಮಾಡಬಹುದು. ಪ್ರಾವಿಜನ್ ಇದೆ, ಆದರೆ ಆ ನಿರ್ಣಯ ಆಗಿಲ್ಲ. ಹಾಗಾಗಿ ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಮಾನ್ಯ ಖರ್ಗೆಯವರು 176(1) ಈ ಸದನದ ಆಸ್ತಿ ಇದೆ, ಅದರ ಬಗ್ಗೆ ಕೂಡ ಚರ್ಚೆ ಮಾಡಿ ಎಂದು ಹೇಳುತ್ತಾರೆ. ಇದು ಒಂದು ಭಾಗ.

ಶ್ರೀ ಬಿ.ಎಸ್. ಹೊರಟ್ಟಿ: ಹಾಗಾದರೆ ಆವತ್ತು ಮೋಷನ್ ಯಾರು ಮೂವ್ ಮಾಡಿದ್ದಾರೆ?

ಶ್ರೀ ಆರ್.ವಿ. ದೇಶಪಾಂಡೆ: ನಾನು ಮಾತನಾಡುತ್ತೇನೆ. ಅದಲ್ಲದೆ ಗೌವರ್ನರ್ ಭಾಷಣದ ವಿಚಾರದಲ್ಲಿ ನಮ್ಮ ಮನೆಯ ರೂಲ್ 19 ರಿಂದ 28 ರವರೆಗೆ ನೋಡಿ ಏನಿದೆ ಎಂದು. ಒಂದು ವೇಳೆ ಮೋಷನ್ ಆಫ್ ಥ್ಯಾಂಕ್ಸ್ ಮಾಡುವುದಕ್ಕೆ ಪರ್ಮಿಷನ್ ಇದ್ದರೆ 175(1) ಕ್ಕೆ, ಸ್ಪೆಸಿಫಿಕ್ ಪ್ರಾವಿಜನ್ 176 ಮಾಡುತ್ತಿರಲಿಲ್ಲ. 176 ರಲ್ಲಿ ಸ್ಪೆಸಿಫಿಕ್ ಪ್ರಾವಿಜನ್ ಮಾಡಿದ್ದಾರೆ. ಆದ್ದರಿಂದ ಮೋಷನ್ ಆಫ್ ಥ್ಯಾಂಕ್ಸ್ ಟು ಗೌವರ್ನರ್‌ಗೆ ಆಗಬೇಕು. 175 ರಲ್ಲಿ ಇಲ್ಲ. 176 ಮ್ಯಾಂಡೇಟರಿ ಇದೆ. ಹಾಗಾಗಿ 175 ಆಪ್‌ಷನಲ್ ಎಂದು ತಿಳಿದು ಕೊಳ್ಳಬೇಕು. Let us go to the Constitution. Article 175-'The Governor may Address the Legislative or in the case of a State having a Legislative Council, either Houses of the Legislature of the State or both the Houses assembled together and may for that purpoase require the attendnce of Members.'

Article 176-' At the commencement of the first session of each legislation of the Legislative Assembly and at the commencement of the first session of each year the Governor shall address the Legislative Assembly or in the case of the State having Legislative Council, both Houses assembled together and inform the Legislature of the causes of its summons.' So, Sir, 175 & 176 total distinction ಇದೆ. ಅಷ್ಟೇ ಅಲ್ಲ.

176(2) - 'Provision shall be made by the rules regulating the procedure of the House or either Houses for the allotment of time for discussion of the matters referred to in such Address.' ಈ ತರಹದ ಪ್ರಾವಿಜನ್ 175ರಲ್ಲಿ ಇಲ್ಲ. Under 175 there is no provision for discussion procedure.

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು): ನೀವು ಒಂದು ನಿಮಿಷ ಹೋಲ್ಡ್ ಆಗಿ. ನಮ್ಮ ರೂಲ್ ಪ್ರಕಾರ ಕೂಡ Governor's Address under Article 175(1) of the Constitution - 'The Speaker may allot time for the discussion of the matters referred to in the Governor's Address under Article 175(1) of the Constitution. ಆದ್ದರಿಂದ ಇಲ್ಲಿ ಅವಕಾಶ ಇದೆ. 175(1) ರ ಪ್ರಕಾರ ರಾಜ್ಯಪಾಲರ

ಭಾಷಣವಾಗಿದೆ. ಅದಕ್ಕೆ ಡಿಸ್‌ಕಷನ್‌ಗೆ ಅವಕಾಶ ಕೊಟ್ಟಿದ್ದಾರೆ. ಇದು ಒಂದು. ಇನ್ನು ಎರಡನೆಯದಾಗಿ ಈ ರಾಜ್ಯದ ಜನ ನಾನು ಮಾತನಾಡುವುದನ್ನೂ ಹಾಗೂ ನೀವು ಮಾತನಾಡುವುದನ್ನು ಕೇಳುತ್ತಿದ್ದಾರೆ. ಇಲ್ಲಿ ಮುಖ್ಯವಾದ ಸಂಗತಿ ಎಂದರೆ ನೀವು ಬಹುಮತ ಕಳೆದುಕೊಂಡಿರಿ. ಹೊಸ ಸಮ್ಮಿಶ್ರ ಸರ್ಕಾರ ಬಂದಿದೆ. ಹೊಸ ಸಮ್ಮಿಶ್ರ ಸರ್ಕಾರದ ನಮ್ಮ ರೀತಿನೀತಿಗಳು ಏನು ಇರಬೇಕೆನ್ನುವುದನ್ನು ನಾವು ರಾಜ್ಯಪಾಲರಿಂದ ಹೇಳಿಸಿದ್ದೇವೆ. ಅದರ ಬಗ್ಗೆ ಚರ್ಚೆ ಪ್ರಾರಂಭವಾಗಬೇಕು.

ಶ್ರೀ ಆರ್.ವಿ. ದೇಶಪಾಂಡೆ: ಅದಕ್ಕೆ ವಿಧಾನ ಇದೆ, ಆ ವಿಧಾನದ ಪ್ರಕಾರ ಮಾಡಬೇಕಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾನ್ಯ ರಾಜ್ಯಪಾಲರು ಎಕ್ಸ್‌ಪರ್ಟ್ಸ್ ಜೊತೆ ಚರ್ಚೆ ಮಾಡಿ ತಮಗೆ ಸರಿ ಎಂದು ಕಂಡುಬಂದ ನಂತರ ಭಾಷಣ ಮಾಡಿದ್ದಾರೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್: ನಾವು ನಿಸ್ಸಂಶಯವಾಗಿ ಬಹುಮತವನ್ನು ಕಳೆದುಕೊಂಡಿದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ಎಲ್ಲೂ 175(1) ರಲ್ಲಿ ಚರ್ಚೆ ಮಾಡಬಾರದು ಎಂದು ಇಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೆ, Motion of Thanks does not arise. ಆದರೆ ಚರ್ಚೆ ಬೇಡವೆಂದು ಹೇಳಲಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ: 175(1) ರಲ್ಲಿ ಚರ್ಚೆ ಮಾಡಬಾರದೆಂದು ಎಲ್ಲಿದೆ ಎಂದು ನಾನು ನಿಮ್ಮನ್ನು ಕೇಳುತ್ತಿರುವುದು. ಎಲ್ಲೂ ಇಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ದಯವಿಟ್ಟು ನಾನು ಹೇಳುವುದನ್ನು ಮಾನ್ಯ ಉಪ ಮುಖ್ಯಮಂತ್ರಿಗಳು ಕೇಳಿ 175(1) ರಲ್ಲಿ ಮಾನ್ಯ ರಾಜ್ಯಪಾಲರು ಭಾಷಣ ಮಾಡಿರತಕ್ಕಂಥ ಸಂದರ್ಭದಲ್ಲಿ ಅವರೇ ಸ್ಪಷ್ಟವಾಗಿ ಹೇಳಿದ್ದಾರೆ, ನಾನು 175(1)ಕ್ಕೆ ಮಾತ್ರ ಸೀಮಿತವಾಗಿ ಮಾತನಾಡಿದ್ದೇನೆ ಎಂದು ಹೇಳುತ್ತಿದ್ದಾರೆ. ಅವರು ಮಾತನಾಡಲಿ ಅಡ್ರಸ್ ಮಾಡಲಿ ನಮ್ಮದು ವಿರೋಧ ಇಲ್ಲ. ಚರ್ಚೆ ಮಾಡಲಿ ವಿರೋಧ ಇಲ್ಲ. ಅದರ ಬಗ್ಗೆ ಏನೂ ತಕರಾರು ಇಲ್ಲ. ಆದರೆ ನಮ್ಮ ತಕರಾರು ಏನೆಂದರೆ ಕಾನೂನು ವಿರುದ್ಧ ಮೋಷನ್ ಆಫ್ ಥ್ಯಾಂಕ್ಸ್ ಎಂದು ಬರುವುದಿಲ್ಲ. I will tell.

ಶ್ರೀ ಎನ್. ಚೆಲುವರಾಯಸ್ವಾಮಿ: ಮೋಷನ್ ಮೂವ್ ಮಾಡಬಾರದೆಂದು ಯಾವ ಆರ್ಟಿಕಲ್‌ನಲ್ಲಿ ಇದೆ ತೋರಿಸಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನಾನು ಹೇಳುತ್ತಿದ್ದೇನೆ, ದಯವಿಟ್ಟು ಕೇಳಿ.

ಶ್ರೀ ಎನ್. ಚೆಲುವರಾಯಸ್ವಾಮಿ: ತೋರಿಸಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನಾನು ಓದುತ್ತಿದ್ದೇನೆ . . .

ಶ್ರೀ ಆರ್.ವಿ ದೇಶಪಾಂಡೆ: ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ 176 ಕ್ಕೆ ಚರ್ಚೆ ಮಾಡಬಹುದು. ಆದರೆ ಮೋಷನ್ ಮೂವ್ ಮಾಡುವುದಕ್ಕೆ ಆಗುವುದಿಲ್ಲ. 176 ಅನ್ನು ಈ ಸದನದ ಮುಂದೆ ಮಂಡಿಸಿದಾಗ You cannot. ಹಾಗಾಗಿ Orissa decision ನಲ್ಲಿ ಬಹಳ clear distinction ಆಗಿದೆ.

ಶ್ರೀ ಎಂ.ಪಿ. ಪ್ರಕಾಶ್: ಮಾನ್ಯ ಅಧ್ಯಕ್ಷರೆ, ಮಾನ್ಯ ಶ್ರೀರಾಮರೆಡ್ಡಿಯವರು ಕ್ರಿಯಾಲೋಪವನ್ನು ಎತ್ತಿದರು. ಆ ಕ್ರಿಯಾಲೋಪವನ್ನು ತಾವು ಮಾನ್ಯತೆ ಮಾಡಿದ್ದರೆ ಆ ಪ್ರಶ್ನೆ ಬೇರೆ. ಮಾನ್ಯತೆ ಮಾಡದೆ ಇದ್ದರೆ ತಾವು ಚರ್ಚೆಗೆ ಅವಕಾಶ ಕೊಡಿ. ಮಾನ್ಯ ವಿರೋಧ ಪಕ್ಷದ ನಾಯಕರು ಎತ್ತಿರತಕ್ಕಂಥ ಆಕ್ಷೇಪಗಳು ಏನಿವೆ ಹಾಗೂ ಮಾನ್ಯ ದೇಶಪಾಂಡೆಯವರು ಏನು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ, ಅದರ ಜೊತೆಗೆ ಬೇರೆ ಸದಸ್ಯರುಗಳಾದಂತಹ ನಾವೂ ಸಹ ಈ ಸದನದಲ್ಲಿ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತಿದ್ದೇವೆ. ಆದ್ದರಿಂದ ಅದನ್ನು ಚರ್ಚೆಗೆ ತೆಗೆದುಕೊಳ್ಳಿ. ಮಾನ್ಯ ವಾಟಾಳ್ ನಾಗರಾಜ್‌ರವರಿಗೂ ಅವಕಾಶ ಕೊಡಿ. ಬೇರೆಯವರಿಗೂ ಅವಕಾಶ ಕೊಡಿ. ನಾವೂ ಮಾತನಾಡುವುದಕ್ಕೆ ತಯಾರಿದ್ದೇವೆ. ಅವರೂ ಮಾತನಾಡುತ್ತಾರೆ. ಇಲ್ಲದೆ ಇದ್ದರೆ ನಾವು ಅವಕಾಶದಿಂದ ವಂಚಿತರಾಗುತ್ತೇವೆ.

ಶ್ರೀ ಎನ್. ಚೆಲುವರಾಯಸ್ವಾಮಿ: ತಾವು ರೂಲಿಂಗ್ ಕೊಡದೆ ಈ ವಿಷಯ ಎಲ್ಲರೂ ಚರ್ಚೆ ಮಾಡುತ್ತಾರೆ. ತಾವು ರೂಲಿಂಗ್ ಕೊಡಿ, ಅದರ ಬಗ್ಗೆ ಚರ್ಚೆ ನಡೆಯಲಿ.

ಶ್ರೀ ವಾಟಾಳ್ ನಾಗರಾಜ್(ಚಾಮರಾಜನಗರ): ಮಾನ್ಯ ಅಧ್ಯಕ್ಷರೆ, ತಾವು ತೀರ್ಪು ಕೊಡುವುದಕ್ಕೆ ಮುಂಚೆ ಒಂದು ನಿಮಿಷ ನನಗೆ ಕಾಲಾವಕಾಶವನ್ನು ಕೊಡಿ. ಈಗ ಮಾನ್ಯ ಜಿ.ವಿ. ಶ್ರೀರಾಮರೆಡ್ಡಿಯವರು ಎತ್ತಿರುವಂತಹ ಕ್ರಿಯಾಲೋಪ ಬಹಳ ಗಂಭೀರವಾದದ್ದು. ಈ ಬಗ್ಗೆ ನಾನು ತಮಗೆ ಸಲಹೆಯನ್ನು ಕೊಡುತ್ತೇನೆ. ಈ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಸದನ ಅನಾಥವಾಗಬಾರದು. ಈ ಸದನ ಅನಾಥವಾಗದಂತೆ ತಡೆಯುವ ಶಕ್ತಿ ಇರುವಂಥಾದ್ದು ತಮಗೆ, ಆದುದರಿಂದ ಇಲ್ಲಿ ಇವತ್ತಿನ ಕಾರ್ಯಸೂಚಿಯಲ್ಲಿ ವಂದನಾ ನಿರ್ಣಯವೆಂಬ ಪ್ರಶ್ನೆ ಬಂದಿದೆ. ಈಗ ಈ ಬಗ್ಗೆ ಚರ್ಚೆಯನ್ನು ಮಾಡಬಹುದೆಂದು ಎಲ್ಲರೂ ಹೇಳಿದ್ದಾರೆ. ನಾನು ತಮಗೆ ಹೇಳುವುದೇನೆಂದರೆ, ಈ ಚರ್ಚೆಯನ್ನು ಸಂವಿಧಾನ ಪಂಡಿತರು ಹೊರಗಡೆ ಕಣ್ಣಿಟ್ಟು, ಇದು ಏನಾಗುತ್ತದೆಂಬ ಬಗ್ಗೆ ನೋಡುತ್ತಿದ್ದಾರೆ. ನಾನು ತಮಗೆ ಒಂದು ಸಲಹೆಯನ್ನು ಕೊಡುವುದೇನೆಂದರೆ, ತಾವು ದಯವಿಟ್ಟು ಈ ಸದನವನ್ನು ಮುಂದೂಡಿ, ತಮ್ಮ ಕಾರ್ಯಾಲಯದಲ್ಲಿ ಕುಳಿತು ಇದರ ಬಗ್ಗೆ ನಾವು ಚರ್ಚೆ ಮಾಡಬೇಕೇ ಅಥವಾ ನಿರ್ಣಯ ಮಾಡಬೇಕೆಂಬುದನ್ನು ಕ್ರಮಕೈಗೊಳ್ಳಿಯೆಂದು ತಮಗೆ ನಾನು ಸಲಹೆಯನ್ನು ಕೊಡುತ್ತಿದ್ದೇನೆ. ಅದನ್ನು ಬಿಟ್ಟು ನೀವು ನಿರ್ಣಯವನ್ನು ಮಾಡುವುದಕ್ಕೆ ಹೋದರೆ ಅದು ಅಸಿಂಧುವಾಗುತ್ತದೆ, ಮತ್ತು ಈ ಸದನಕ್ಕೆ ನಿಜವಾಗಿಯೂ ತಾಯಿ, ತಂದೆ, ಯಾರು ಇಲ್ಲದಂತಹ ಪ್ರಜಾತಂತ್ರದ ವ್ಯವಸ್ಥೆ ಆಗುತ್ತದೆ. ಇದು ಕಾನೂನು ವಿರುದ್ಧವಾಗುತ್ತದೆ, ಸಂವಿಧಾನದ ಕೊಲೆಯಾಗುತ್ತದೆಂದು ನಾನು ಹೇಳುತ್ತೇನೆ.

ಶ್ರೀ ಸಿದ್ದರಾಮಯ್ಯ(ಚಾಮುಂಡೇಶ್ವರಿ): ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಬಹಳ ಪ್ರಾಮುಖ್ಯವಾದಂತಹ ಪ್ರಶ್ನೆಯನ್ನು ಎತ್ತಿದ್ದಾರೆ. ಅದರ ಬಗ್ಗೆ ಚರ್ಚೆ ನಡೆಯುತ್ತಿದೆ. ಮಾನ್ಯ ಶ್ರೀರಾಮರೆಡ್ಡಿಯವರು, ನಾನು ಎಲ್ಲರೂ ಸೇರಿಕೊಂಡಿದ್ದೇವೆ. ಮಾನ್ಯ ಅಧ್ಯಕ್ಷರೇ, ಇಲ್ಲಿ ಬಹಳ ಮುಖ್ಯವಾಗಿ ಗಮನಿಸಬೇಕಾಗಿರುವಂಥಾದ್ದು ಏನೆಂದರೆ, ಇದು ರಾಜ್ಯಾಂಗ ಸಂವಿಧಾನಬದ್ಧವಾದಂತಹ ಪ್ರಶ್ನೆಯಾಗಿದ್ದು, ಇದು ಗಂಭೀರವಾದಂತಹ ವಿಚಾರವಾಗಿದೆ. ಇಲ್ಲಿ ಸದನದ ಕಲಾಪಕ್ಕೆ ಅಡ್ಡಿಮಾಡಬೇಕು, ಸಮಯವನ್ನು ಹಾಳು ಮಾಡಬೇಕೆಂಬ ಉದ್ದೇಶವಿಲ್ಲ. ರಾಜ್ಯಪಾಲರು ರಾಜ್ಯಾಂಗ ಬದ್ಧವಾಗಿ ಭಾಷಣವನ್ನು ಮಾಡುವುದಕ್ಕೆ ಅವಕಾಶವಿದೆ. ಭಾರತ ಸಂವಿಧಾನದ ಅನುಚ್ಛೇದ 175(1) ಮತ್ತು ಆರ್ಟಿಕಲ್ 176 (1) ಈ ಎರಡೂ ವಿಧಿಗಳಲ್ಲಿ ಅವರು ವಿಧಾನ ಸಭೆಯನ್ನು ಅಥವಾ ವಿಧಾನ ಪರಿಷತ್ತಿನ ಅಥವಾ ಸದನಗಳನ್ನುದ್ದೇಶಿಸಿ ಜಂಟಿಯಾಗಿ ಭಾಷಣವನ್ನು ಮಾಡುವುದಕ್ಕೆ

ಶ್ರೀ ಜೆ.ಸಿ. ಮಾಧುಸ್ವಾಮಿ: ಈಗಾಗಲೇ ನೀವು ನನ್ನನ್ನು ಕರೆದಿದ್ದೀರಿ. ಒಬ್ಬೊಬ್ಬರೇ ಮಾತನಾಡಿ ಎಂದು ಹೇಗೆ ಹೇಳುತ್ತೀರಿ? ಮಾತನಾಡುವುದಕ್ಕೆ ಅವಕಾಶ ಕೊಡಿ.

ಶ್ರೀ ಎಂ.ಪಿ. ಪ್ರಕಾಶ್: ದಯವಿಟ್ಟು ನನಗೆ ಮಾತನಾಡಲು ಅವಕಾಶ ಕೊಡಿ. ದಯಮಾಡಿ ಅವಕಾಶ ಮಾಡಿಕೊಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ: ಅವರದ್ದು ಆದಮೇಲೆ, ಪ್ರಕಾಶ್‌ರವರಿಗೆ ಅವಕಾಶ ಮಾಡಿಕೊಡಿ.

ಶ್ರೀ ಎಂ.ಪಿ. ವೆಂಕಟೇಶ್: ಇಷ್ಟಕ್ಕೆಲ್ಲಾ ಕಾರಣ ಕಾಂಗ್ರೆಸ್ ಪಕ್ಷದವರೇ, ಅವರೇ ಹೇಳಿಕೊಂಡು, ಅವರೇ ಭಾಷಣ ಮಾಡುತ್ತಿದ್ದಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನಾನು ಸ್ವಲ್ಪ ಮಾತನಾಡಬೇಕು ಅಧ್ಯಕ್ಷರೇ.

ಅಧ್ಯಕ್ಷರು: ಆಯಿತು, ಮಾನ್ಯ ಮಾಧುಸ್ವಾಮಿಯವರು ಮಾತನಾಡುತ್ತಾರೆ. ಆಮೇಲೆ ನೀವು ಮಾತನಾಡಿ.

ಶ್ರೀ ಎಂ.ಪಿ. ವೆಂಕಟೇಶ್: ಇದನ್ನೆಲ್ಲಾ ಅವರು ಮೊದಲೇ ತಿಳಿದುಕೊಳ್ಳಬೇಕು. ಕಾಂಗ್ರೆಸ್ ಮುಖ್ಯಮಂತ್ರಿಯವರನ್ನು ಕೆಳಗಿಳಿಸಲು ಅವಕಾಶ ಮಾಡಿಕೊಟ್ಟು, ಈಗ ಮಾತನಾಡುತ್ತಿದ್ದಾರೆ. ಇದಕ್ಕೆಲ್ಲಾ ಕಾರಣ ಕಾಂಗ್ರೆಸ್ ಪಾರ್ಟಿಯವರು.

ಅಧ್ಯಕ್ಷರು: ಮಾಧುಸ್ವಾಮಿಯವರಿಗೆ ಅವಕಾಶ ಕೊಟ್ಟಿದ್ದೇನೆ. ಮಾಧುಸ್ವಾಮಿಯವರೇ ಮಾತನಾಡಿ.

ಶ್ರೀ ಜೆ.ಸಿ. ಮಾಧುಸ್ವಾಮಿ(ಚಿಕ್ಕನಾಯಕನಹಳ್ಳಿ): ಮಾನ್ಯ ಅಧ್ಯಕ್ಷರೆ, ನನ್ನನ್ನು ಮಾತನಾಡಲು ಕರೆದಿದ್ದಕ್ಕೆ ತಮಗೆ ವಂದಿಸುತ್ತೇನೆ. ಮುಖ್ಯವಾಗಿ ಇಲ್ಲಿ ಎರಡು ಜಿಜ್ಞಾಸೆಗಳಿವೆ. 176–Special address of the Governor or the President ಎಂದು ಟ್ರೀಟ್ ಮಾಡಬೇಕು. 175(1) Ordinary address of the Governor ಎಂದು ಟ್ರೀಟ್ ಮಾಡಬೇಕು. ಆಡಳಿತ ಪಕ್ಷದಲ್ಲಿ ಯಾರು ಇರುತ್ತಾರೆ, ವಿರೋಧ ಪಕ್ಷದಲ್ಲಿ ಯಾರು ಇರುತ್ತಾರೆ ಎನ್ನುವುದಲ್ಲ. ಶಾಸನಸಭೆಗಳು ಕರಾರುವಕ್ಕಾಗಿ ನಡೆಯಬೇಕೆಂದರೆ, ರಾಜ್ಯಪಾಲರು ಈ ಭಾಷಣವನ್ನು 176ರ ಕೆಳಗೇ ಮಾಡಬೇಕಾಗಿತ್ತು. 175ರ ಕೆಳಗೆ ಮಾಡಬಾರದಾಗಿತ್ತು. 176ರ ಕೆಳಗೆ ಆವತ್ತು ಅವರು ಭಾಷಣ ಮಾಡುವ ದಿವಸ ನಾನು ಇಲ್ಲಿ ಅಡಚಣೆ ಮಾಡಿದೆ. ಆವತ್ತು ನನ್ನ ಮನಸ್ಸಿಗೆ ವಿರುದ್ಧವಾಗಿ ಏಕೆ ಅಡಚಣೆ ಮಾಡಿದೆ ಎಂದರೆ, ಆವತ್ತು ನನ್ನ ಮನಸ್ಸಿಗೆ ವಿರುದ್ಧವಾಗಿ ಏಕೆ ಅಡಚಣೆ ಮಾಡಿದೆ ಎಂದರೆ, ಆವತ್ತು ಮೆಜಾರಿಟಿ ಇರುವ ಸರ್ಕಾರ ಈ ರಾಜ್ಯದಲ್ಲಿ ಇರಲಿಲ್ಲ ಎನ್ನುವುದು ಗವರ್ನರ್ ನಾಲೆಡ್ಜ್‌ನಲ್ಲಿತ್ತು. ಆದ್ದರಿಂದ ಅವರು ಅಡ್ರೆಸ್ ಮಾಡಬಾರದಿತ್ತು. ಇನ್ನೊಂದು ಕಾನ್‌ಸ್ಟಿಟ್ಯೂಷನಲ್ ಲ್ಯಾಕೂನ ಇಲ್ಲಿ ಸೃಷ್ಟಿ ಮಾಡುತ್ತಿದ್ದೀರಿ ಎಂದು ಆವತ್ತು ನಾನು ಹೇಳಿದೆ. ಇಲ್ಲಿ ನಿಂತುಕೊಂಡು ನಾನು ಕೂಗಾಡಿದೆ. ನಾನು ಅವರಿಗೆ ಹೇಳಿದೆ, You are going to create a bad precedent for the State. ಆವತ್ತು ನಾನು ಅಗೌರವವಾಗಿ ಮಾತನಾಡಿದೆ, ಗವರ್ನರ್‌ಗೆ ಕೆಟ್ಟ ಮಾತನ್ನು ಬಳಸಿದ್ದಕ್ಕೆ ನಾನು ಕ್ಷಮೆ ಕೇಳುತ್ತೇನೆ. ಆದರೆ ಏಕೆ ಆ ರೀತಿ ಮಾಡಿದೆ ಎಂದರೆ, ಈ ರೀತಿಯ ಸ್ಥಿತಿ ನಿರ್ಮಾಣವಾಗುತ್ತದೆ ಎಂದು ನಮಗೆ ಗೊತ್ತಿತ್ತು, ದಯಮಾಡಿ ನಿಮ್ಮ ಭಾಷಣವನ್ನು ನಿಲ್ಲಿಸಿ, ಹೊರಟು ಹೋಗಿ, ನೀವು ಭಾಷಣವನ್ನು ಮಾಡಬೇಡಿ ಎಂದು ಹೇಳಿದೆನು. ಗವರ್ನರ್‌ರವರು ಸರ್ಕಾರೀ ಭಾಷಣವನ್ನೇ

ಓದಬೇಕು. Sir, under Constitution ಗವರ್ನರ್‌ರವರಿಗೆ ಅವರದೇ ಆದಂಥ ಭಾಷಣ ಮಾಡುವ ಅಧಿಕಾರವೇ ಇಲ್ಲ 176ರ ಕೆಳಗಡೆ. ಸಂವಿಧಾನದ ಪ್ರಕಾರ, ಕ್ಯಾಬಿನೆಟ್ ಏನು ತಯಾರು ಮಾಡಿಕೊಡುತ್ತದೆ ಅಷ್ಟನ್ನೇ ಹೇಳಬೇಕಾಗಿತ್ತು. ಇವತ್ತೂ ಕೂಡ, 176ರ ಕೆಳಗೆ ಕನ್ಸೀವ್ ಮಾಡುತ್ತೀರಿ ಎಂದಾದರೆ ನನಗೆ ಜಿಜ್ಞಾಸೆಯಿದೆ. ಎನ್ನುವ ಪದವನ್ನು ಅವರು ಬಳಸಬಾರದು. When once Cabinet approves, it is his binded duty. ಗವರ್ನರ್‌ಗೆ ಅದು ಡ್ಯೂಟಿಯಾಗಬೇಕಾಗಿತ್ತು. ಇವತ್ತು ಏನಾಗಿದೆ 176ರ ಕೆಳಗೆ ಆವತ್ತು ಗವರ್ನರ್‌ರವರು ಏನು ಭಾಷಣ ಮಾಡಿದರು, ಅದೂ ಕೂಡ null and void ಆಗಬೇಕಾಗಿದೆ. ನಂತರ 175ರ ಕೆಳಗೆ ಭಾಷಣ ಮಾಡಿದ್ದಾರೆ. ನಾನು ಮಾನ್ಯ ಯಡಿಯೂರಪ್ಪನವರಿಗೆ ರಿಕ್ವೆಸ್ಟ್ ಮಾಡಿಕೊಳ್ಳುತ್ತೇನೆ, ದಯಮಾಡಿ 'ವಂದನಾ ನಿರ್ಣಯ' ಎನ್ನುವ ಪದವನ್ನು ವಾಪಸ್ಸು ತೆಗೆದುಕೊಂಡು, ಚರ್ಚೆಗೆ ಅವಕಾಶ ಮಾಡಿಕೊಡಿ ಎನ್ನುವುದೊಂದೇ ಇದಕ್ಕಿರುವ ಸಲ್ಯೂಷನ್. ಈಗ ವಂದನಾ ನಿರ್ಣಯವನ್ನು 175ರ ಪ್ರಾವಿಷನ್ ಕೆಳಗೆ ಮೂವ್ ಮಾಡಬಾರದು. ಅದರ ಮೇಲೆ ಚರ್ಚೆಗಷ್ಟೇ ಅವಕಾಶವಿದೆ. ಗವರ್ನರ್‌ರವರು ಯಾವ ವಿಷಯಕ್ಕೆ ಬೇಕಾದರೂ ಇಲ್ಲಿ ಅಸೆಂಬ್ಲಿಗೆ ಬರಬಹುದು, ಮಾರ್ಗದರ್ಶನ ಮಾಡಬಹುದು, ಡೈರೆಕ್ಟ್ ಮಾಡಬಹುದು, ನಮಗೆ ಅಡ್ರೆಸ್ ಮಾಡಬಹುದು. ಅಧ್ಯಕ್ಷರಾದ ತಾವು, ರಾಜ್ಯಪಾಲರ ಅಥವಾ ರಾಷ್ಟ್ರಪತಿಯವರ ಭಾಷಣದ ಮೇಲೆ ಚರ್ಚೆ ಮಾಡಲು ಸಮಯ ನಿಗದಿ ಮಾಡಿ ಭಾಷಣ ಮಾಡಿ ಎಂದು ಕೇಳಬಹುದು. ಆದರೆ, ವಂದನಾ ನಿರ್ಣಯ ಎನ್ನುವ ಪದವನ್ನು 175(1)ರ ಕೆಳಗೆ ಬಳಸಬಾರದು. ಸರ್ಕಾರ ಮಾಡಬೇಕಾಗಿರುವುದು ಅಷ್ಟೇ. ಆ ಪದವನ್ನು ವಿತ್‌ಡ್ರಾ ಮಾಡಿಕೊಂಡು ಚರ್ಚೆಗೆ ಅವಕಾಶ ಮಾಡಿಕೊಡಲಿ. ನಿಮ್ಮವರೇ ಚರ್ಚೆಯನ್ನು ಪ್ರಾರಂಭ ಮಾಡಲಿ. ಇದರಲ್ಲಿ ತಕರಾರೇನಿಲ್ಲ. ಆದರೆ ಆ ಒಂದು ಪದ Special address of the Governor or president ಮಾತ್ರ ಇರಬೇಕು. That is a mandatory. ಎರಡನೆಯದು, ಸನ್ಮಾನ್ಯ ಯಡಿಯೂರಪ್ಪನವರಿಗೆ ನಾನು ರಿಕ್ವೆಸ್ಟ್ ಮಾಡುವುದು ಏನೆಂದರೆ, ಹೊಸ ಎಲೆಕ್ಟೆಡ್ ಸರ್ಕಾರ ಬಂದಾಗ ಮಾತ್ರ ನೀವು ಕನ್ಸೀವ್ ಮಾಡಬೇಕು. ಹೊಸದಾಗಿ ಚುನಾಯಿತವಾಗಿ ಸರ್ಕಾರ ಬಂದಾಗ, ಅದು ಸ್ಪೆಷಲ್ ಅಡ್ರೆಸ್ ಆಗುತ್ತದೆ. ಅಥವಾ ವರ್ಷದಲ್ಲಿ ಮೊದಲನೆಯ ದಿವಸ ಕರೆಯುವ ಅಧಿವೇಶನದಲ್ಲಿ ಮಾಡುವ ಭಾಷಣ ಮಾತ್ರ ಸ್ಪೆಷಲ್ ಅಡ್ರೆಸ್ ಆಗುತ್ತದೆ. ಅದು ಸಂವಿಧಾನದಲ್ಲಿ ಇಲ್ಲ. ಅವರು ಮಿಸ್ಟೇಕ್ ಮಾಡಿಕೊಳ್ಳುತ್ತಿದ್ದಾರೆ.

ಒಬ್ಬ ಮಾನ್ಯ ಸದಸ್ಯರು: ಅವರ ಅನುಕೂಲಕ್ಕೆ ಏನೇನು ಬೇಕೋ ಅದನ್ನು ಮಾಡಿಕೊಳ್ಳುತ್ತಾರೆ. ಅದೇ ರೀತಿ ಇದನ್ನೂ ಮಾಡಬಹುದು ಎಂದುಕೊಂಡಿದ್ದಾರೆ.

Sri J.C. Madhuswamy: Sir, it is not under Constitution. ನಾವು ಯಾವುದನ್ನೂ ವಿರೋಧ ಮಾಡಲು ನಿಂತಿಲ್ಲ. ದಯಮಾಡಿ ಅರ್ಥಮಾಡಿಕೊಳ್ಳಿ. ಅದನ್ನು ಮಾಡಲು ಬರುವುದಿಲ್ಲ. Please try to understand. It is not under Constitution. Newly elected government of the people ಬಂದಾಗ ಮಾಡುವ address ಮಾತ್ರ special address ಆಗುತ್ತದೆ. Change in Government ಆದರೆ ಆಗುವುದಿಲ್ಲ. ಈ Change in Government ಆಗುವುದಕ್ಕೆ ಮೊದಲೇ ವರ್ಷದಲ್ಲಿ ಮೊದಲನೇ ದಿವಸ ವಿಧಾನಸಭೆ ನಡೆದು Address ಆಗಿಬಿಟ್ಟಿದೆ. ಮಾನ್ಯ ಅಧ್ಯಕ್ಷರೆ, ವರ್ಷದಲ್ಲಿ ಮೊದಲನೇ ದಿವಸ ಶಾಸನಸಭೆಯಲ್ಲಿ ಅವರು Special address ಮಾಡಬಹುದು. ಸರ್ಕಾರ ಹೊಸದಾಗಿ ಚುನಾಯಿತವಾಗಿ ಬಂದಾಗ

175(1) ಎಂದು 24ನೇ ತಾರೀಖಿನ ಅವರ ಭಾಷಣದಲ್ಲಿ ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. When such being the case, ಇದರ ಮೇಲೆ ವಂದನಾ ನಿರ್ಣಯ ಮೂವ್ ಮಾಡಲು ಬರುವುದಿಲ್ಲ. ಅದನ್ನು ಮಾಡುವುದಕ್ಕೆ ತಾವು ಅವಕಾಶ ಕೊಡಕೂಡದು, ಇದು ಆಗಬಾರದು ಎನ್ನುವುದೇ ನನ್ನ ಕಳಕಳಿಯ ಮನವಿ. ಆದ್ದರಿಂದ, 175(1) ಎಂದು ಇರುವುದರಿಂದ ಅದರ ಮೇಲೆ ಚರ್ಚೆ ಮಾಡೋಣ, ಎಲ್ಲಾ ಸದಸ್ಯರೂ ಚರ್ಚೆ ಮಾಡೋಣ. ಆದರೆ ವಂದನಾ ನಿರ್ಣಯಕ್ಕೆ ಮಾತ್ರ ಅವಕಾಶ ಕೊಡಬಾರದು ಎಂಬುದು ನನ್ನ ಕಳಕಳಿಯ ಮನವಿ.

ಶ್ರೀ ಅರಗ ಜ್ಞಾನೇಂದ್ರ: ಮಾನ್ಯ ಅಧ್ಯಕ್ಷರೆ, ಮಾನ್ಯ ಸಿದ್ದರಾಮಯ್ಯನವರು ಹೇಳುವ ಪ್ರಕಾರ 176(1)ರ ಪ್ರಕಾರ ವಂದನಾ ನಿರ್ಣಯ ಮೂವ್ ಮಾಡುವುದು, 175(1)ರ ಪ್ರಕಾರ ಚರ್ಚೆ ಮಾಡುವುದು ಎಂದು ಹೇಳಿದಂತಾಗುತ್ತದೆ. ಇದರಲ್ಲಿ ಅರ್ಥವೇ ಇಲ್ಲ. 176(1)ರ ಪ್ರಕಾರ ರಾಜ್ಯಪಾಲರು ಮಾಡಿದ ಹಿಂದಿನ ಭಾಷಣ ಅವರು ಅಧಿಕಾರ ಕಳೆದುಕೊಂಡ ದಿವಸವೇ ಅದು ಸತ್ತುಹೋಯಿತು.

(ಗೊಂದಲ)

ಶ್ರೀ ಅರಗ ಜ್ಞಾನೇಂದ್ರ: ಏಕೆಂದರೆ, ರಾಜ್ಯಪಾಲರ ಭಾಷಣ ಒಂದು ಸರ್ಕಾರದ ನೀತಿ ನಿರೂಪಣೆಗಳನ್ನು ರೂಪಿಸತಕ್ಕಂಥಾದ್ದು. ಆ ಸರ್ಕಾರ ಬಹುಮತವನ್ನು ಕಳೆದುಕೊಂಡಾಗ, ರಾಜ್ಯಪಾಲರ ಭಾಷಣದ ಜೊತೆಗೇ ಆ ಸರ್ಕಾರವೂ ಹೋಗಿಬಿಟ್ಟಿದೆ. ಹಾಗಾಗಿ, ಆ ಸರ್ಕಾರದ ಜೊತೆಗೇ ಅದು ಹೋಯಿತು. ಅದರ ನೀತಿ ನಿರೂಪಣೆಗಳು ಮುಂದೆ ಜಾರಿಗೆ ಬರಲು ಸಾಧ್ಯವಿಲ್ಲ. ಆದ್ದರಿಂದ, 175(1)ರ ಪ್ರಕಾರ ಮಾಡಿರುವ ಭಾಷಣವನ್ನು ಚರ್ಚೆಗೆ ಎತ್ತಿಕೊಳ್ಳಬೇಕು ಮತ್ತು ನಿಯಮಾವಳಿ 20ರ ಪ್ರಕಾರ ಅದಕ್ಕೆ ವಂದನೆಯನ್ನು ಸಲ್ಲಿಸತಕ್ಕಂಥಾದ್ದನ್ನು ಮಂಡನೆ ಮಾಡಲಿಕ್ಕೆ ತಾವು ಅವಕಾಶ ಮಾಡಿಕೊಡಬೇಕು. ಮಾನ್ಯ ಶ್ರೀರಾಮರೆಡ್ಡಿಯವರು ಮಂಡಿಸಿರತಕ್ಕಂಥ ಕ್ರಿಯಾಲೋಪದ ಬಗ್ಗೆ ತಾವು ಒಂದು ತೀರ್ಮಾನವನ್ನು ಕೊಡಬೇಕು ಎಂಬುದು ನನ್ನ ವಿನಂತಿ; ಹಿಂದೆ, ಮೂರು ದಿವಸ ಚರ್ಚೆ ನಡೆದಿತ್ತು ಎಂದು ಮಾನ್ಯ ರಮೇಶ್ ಕುಮಾರ್‌ರವರು ಹೇಳಿದರು. ಪುರುಸೊತ್ತಿದ್ದರೆ ಒಂದು ವರ್ಷವೂ ಚರ್ಚೆ ನಡೆಸಬಹುದು. ಅದು ಆಗುವುದಿಲ್ಲ. ಇದರ ಮೇಲೆ ಸರಿಯಾದ ರೀತಿ ಚರ್ಚೆ ನಡೆಯಬೇಕಾಗುತ್ತದೆ. ಒಂದು ಸಮ್ಮಿಶ್ರ ಸರ್ಕಾರದ ನೀತಿ ನಿಯಮಗಳನ್ನು ಸರಿಯಾದಂಥ ರೀತಿಯಲ್ಲಿ ಚರ್ಚೆ ಮಾಡಿ, ಒಂದು ನಿರ್ಣಯವನ್ನು ಮಾಡಿ ಜನರಿಗೆ ಹೇಳಬೇಕಾಗಿದೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಮಾನ್ಯ ಜ್ಞಾನೇಂದ್ರರವರೇ, ದಯಮಾಡಿ ಒಂದು ನಿಮಿಷ ಈಲ್ಡ್ ಆಗಿ.

ಶ್ರೀ ಅರಗ ಜ್ಞಾನೇಂದ್ರ: ಇದನ್ನು ನೀವು ಸುಮ್ಮನೆ ಮೂರು–ಮೂರು ದಿವಸ ಚರ್ಚೆ ಮಾಡಬೇಕು ಎಂದು ಹೇಳಿದರೆ, ಅದನ್ನೂ ಮಾಡಬಹುದು.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಒಂದು ನಿಮಿಷ ಈಲ್ಡ್ ಆಗಿ. ಆವತ್ತು ನಮ್ಮ ಹಿರೀಕರೆಲ್ಲಾ ವಿಧಾನಸಭೆಗೆ ಬಂದಿದ್ದರಲ್ಲಾ, ಅವರಿಗೆ ಮಾಡುವುದಕ್ಕೆ ಏನೂ ಕೆಲಸವಿರಲಿಲ್ಲ, ಇವರಷ್ಟು ಬುದ್ಧಿವಂತರೇ ಅಲ್ಲ ಅವರು, ಅವರಿಗೆ ಪುರಸೊತ್ತು ಇತ್ತು, ಅದಕ್ಕೋಸ್ಕರ ಮೂರು ದಿವಸ ಚರ್ಚೆಯಾಯಿತು. ಇಂಥ ಜ್ಞಾನಿಗಳು ಆವತ್ತೇ ಹುಟ್ಟಿಬಿಟ್ಟಿದ್ದರೆ, ದೇಶಕ್ಕೆ ಈ ಗತಿಯೇ ಬರುತ್ತಿರಲಿಲ್ಲ. ಎಂಥ ಅವಿವೇಕಿಗಳು ನೋಡಿ. ಎಂಥ ಅವಿವೇಕಿಗಳು ನೋಡಿ, ಅವರು ಮೂರು ದಿವಸ ಚರ್ಚೆ ಮಾಡಿದ್ದರು.

ಶ್ರೀ ಅರಗ ಜ್ಞಾನೇಂದ್ರ: 175(1)ರ ಪ್ರಕಾರ ವಂದನಾ ನಿರ್ಣಯ ಮಂಡನೆ ಮಾಡಬಾರದು ಎಂದು ಇದೆಯೇ? ಎಲ್ಲಿದೆ?

ಶ್ರೀ ಕೆ.ಆರ್. ರಮೇಶ್‌ಕುಮಾರ್: ನಿಮ್ಮಂಥ ಜ್ಞಾನಿಗಳು ಆವತ್ತು ಹುಟ್ಟದೇ ಇದ್ದುದ್ದು ಈ ದೇಶದ ದೌರ್ಭಾಗ್ಯ. ಈಗಲಾದರೂ ತಾವು ಜನ್ಮತಾಳಿದಿರಲ್ಲಾ, ನಾವು ಧನ್ಯರಾದೆವು.

ಶ್ರೀ ಎನ್. ಚಲುವರಾಯಸ್ವಾಮಿ (ಸಾರಿಗೆ ಸಚಿವರು): ಮಾನ್ಯ ಅಧ್ಯಕ್ಷರೆ, ಅವರು ಏನು ಹೇಳಿದರೆಂದರೆ, ಚರ್ಚೆ ಮಾಡಬಾರದು ಎಂದು ಅವರು ಹೇಳಲಿಲ್ಲ. ಕ್ರಿಯಾಲೋಪ ಎತ್ತಿರುವುದರ ಬಗ್ಗೆ ತಾವು ತೀರ್ಮಾನ ಕೊಡಬೇಕು ಎಂದು ಹೇಳಿದರೇ ವಿನಃ, ಬೇರೆ ವಿಷಯದಲ್ಲಿ ಚರ್ಚೆ ಎರಡು ದಿವಸ ನಡೆದಿರಬಹುದು, ಮೂರು ದಿವಸ ನಡೆದಿರಬಹುದು, ಆದರೆ ಈ ವಿಚಾರದಲ್ಲಿ ತಾವು ತೀರ್ಮಾನ ಕೊಟ್ಟಮೇಲೆ ಚರ್ಚೆಯಾಗಲಿ ಎಂದು ಅವರು ಹೇಳಿದರು. ಮಾನ್ಯ ರಮೇಶ್ ಕುಮಾರ್‌ರವರು ಬಹಳ ಹಿರಿಯ ಸದಸ್ಯರು. ದಯಮಾಡಿ, ಇಲ್ಲಿ ಯಾರೂ ದಡ್ಡರು ಎಂದು ಭಾವಿಸುವುದು ಬೇಡ. ತಾವು ಬುದ್ಧಿವಂತರಿದ್ದೀರಿ ಎನ್ನುವುದನ್ನು ನಾವು ಒಪ್ಪುತ್ತೇವೆ. ಆದರೆ ಬೇರೆಯವರೆಲ್ಲ ದಡ್ಡರು ಎನ್ನುವಂತೆ ತಾವು ಪ್ರಸ್ತಾಪ ಮಾಡತಕ್ಕಂಥಾದ್ದು ಬೇಡ ಎಂದು ಹೇಳುತ್ತಿದ್ದೇನೆ.

ಶ್ರೀ ಅರಗ ಜ್ಞಾನೇಂದ್ರ: ನಮ್ಮನ್ನೆಲ್ಲಾ ದಡ್ಡರು ಎಂದು ನೀವು ಏಕಾಏಕಿ ಪರಿಗಣಿಸಿಬಿಟ್ಟರೆ ಅದು ಹೇಗಾಗುತ್ತದೆ? ಸುಮಾರು ಎರಡೂವರೆ ಗಂಟೆಗಳ ಕಾಲ ಇಲ್ಲಿ ಚರ್ಚೆಯಾಗಿದೆ.

ಅಧ್ಯಕ್ಷರು: ಮಾನ್ಯ ಮಾಧುಸ್ವಾಮಿಯವರೇ ಹೇಳಿ. ಈಗ ಮಾಧುಸ್ವಾಮಿಯವರು ಏನು ಹೇಳುತ್ತಾರೆ ಎಂದು ಕೇಳೋಣ.

ಶ್ರೀ ಜೆ.ಸಿ. ಮಾಧುಸ್ವಾಮಿ: ಸನ್ಮಾನ್ಯ ಅಧ್ಯಕ್ಷರೇ, ಇಲ್ಲಿ ಯಾರೂ . . . . .

ಶ್ರೀ ಕೃಷ್ಣಬೈರೇಗೌಡ: ಮಾನ್ಯ ಹಿರಿಯ ಸದಸ್ಯರಾದ ಜ್ಞಾನೇಂದ್ರರವರು, ಜನವರಿ 19ನೇ ತಾರೀಖು ಮಾನ್ಯ ರಾಜ್ಯಪಾಲರು ಮಾಡಿದ ಭಾಷಣ ಸತ್ತು ಹೋಯಿತು ಎಂದು ಹೇಳಿದರು. ಸತ್ತು ಹೋಯಿತು ಎಂದು ಹೇಳುವುದಕ್ಕೆ ನಾನ್ಯಾರು ಅಥವಾ ಅವರ್‍ಯಾರು? ತಾವು ಅಧ್ಯಕ್ಷ ಪೀಠದಲ್ಲಿ ಕುಳಿತಿದ್ದೀರಿ. ಸತ್ತು ಹೋಯಿತು ಎಂದು ತಾವು ಹೇಳಿದ್ದರೆ, ಇವತ್ತು ಈ ಪ್ರಶ್ನೆಯೇ ಬರುತ್ತಿರಲಿಲ್ಲ.

ಶ್ರೀ ಅರಗ ಜ್ಞಾನೇಂದ್ರ: ನಮ್ಮ ಅಭಿಪ್ರಾಯ ನಾವು ಹೇಳಿದೆವು. ಸತ್ತು ಹೋಗಿದೆ ಎಂದು ಹೇಳಿ ಅವರನ್ನು ಕನ್ವಿನ್ಸ್ ಮಾಡುತ್ತಿದ್ದೇವೆ.

ಶ್ರೀ ಕೃಷ್ಣಬೈರೇಗೌಡ: ಮಾನ್ಯ ಅಧ್ಯಕ್ಷರೆ, ಸತ್ತು ಹೋಯಿತು ಎಂದು ತಾವು ರೂಲಿಂಗ್ ಕೊಡಿ, ಒಪ್ಪಿಕೊಳ್ಳುತ್ತೇವೆ. ಅದು ಬಿಟ್ಟು, ಸತ್ತುಹೋಯಿತು ಎಂದು ಹೇಳುವುದಕ್ಕೆ ನಾವ್ಯಾರು?

ಶ್ರೀ ಎಂ.ಪಿ. ವೆಂಕಟೇಶ್: ಮಾನ್ಯ ಜ್ಞಾನೇಂದ್ರರವರು, ಅವರ ಅಭಿಪ್ರಾಯವನ್ನು ಹೇಳಿದ್ದಾರೆ. ಅದು ಅವರ ಅಭಿಪ್ರಾಯ. ಅವರ ಅಭಿಪ್ರಾಯವನ್ನು ಅವರು ಹೇಳಲಿ.

ಶ್ರೀ ಹೆಚ್.ಸಿ. ಬಾಲಕೃಷ್ಣ: ಮಾನ್ಯ ಜ್ಞಾನೇಂದ್ರ ಅವರು ತಮ್ಮ ಅಭಿಪ್ರಾಯವನ್ನು ಹೇಳಿದ್ದಾರೆ. ನಿಮ್ಮ ಅಭಿಪ್ರಾಯವನ್ನು ನೀವು ಹೇಳಿ. ನಂತರ, ಅಧ್ಯಕ್ಷರು ತೀರ್ಮಾನ ಮಾಡಲಿ. ಇವರು ತಮ್ಮ ಅಭಿಪ್ರಾಯವನ್ನು ಹೇಳಿದಾಗ ನೀವು ಏಕೆ ಟೀಕೆ ಮಾಡುತ್ತೀರಿ?

ಶ್ರೀ ಮಹದೇವ: ಪಕ್ಷದ ಸಂವಿಧಾನವನ್ನು ಅವರ ಪಕ್ಷದವರು ಸಾಯಿಸಬಹುದು. ಆದರೆ ಈ ದೇಶದ ಸಂವಿಧಾನದಲ್ಲಿ ಬಂದಿರತಕ್ಕಂಥಾದ್ದನ್ನು ಯಾರೂ ಸಾಯಿಸಲಿಕ್ಕೆ ಬರುವುದಿಲ್ಲ.

ಅಧ್ಯಕ್ಷರು: ಒಬ್ಬೊಬ್ಬರು ಮಾತನಾಡಿ.

ಅವಕಾಶ ಇದೆ. ಈ ಎರಡೂ ಭಾಷಣಗಳನ್ನು ಮಾನ್ಯ ರಾಜ್ಯಪಾಲರು ಮಾಡಿದ್ದಾರೆ. ಮೊದಲನೆಯದು ಜನವರಿ 19ನೇ ತಾರೀಖಿನಂದು ಮಾಡಿದ್ದಾರೆ. ಇದು ನಾನು ತಿಳಿದುಕೊಂಡಿರುವ ಪ್ರಕಾರ ಆರ್ಟಿಕಲ್ 176(1)ರ ಪ್ರಕಾರ ಮಾಡಿದ್ದಾರೆ. ಇಲ್ಲಿ ಮಾನ್ಯ ರಾಜ್ಯಪಾಲರು ಬಹಳ ಸ್ಪಷ್ಟವಾಗಿ 24ನೇ ತಾರೀಖಿನಂದು ಮಾಡಿದಂತಹ ಭಾಷಣದಲ್ಲಿ ಹೇಳಿದ್ದಾರೆ. ಇದರಲ್ಲಿ ಗೊಂದಲ ನಿವಾರಣೆಯಾಗದೆ ಇರುವ ಕಾರಣಕ್ಕೋಸ್ಕರವೇ ಅದನ್ನು ಸ್ಪಷ್ಟಪಡಿಸಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. "ಭಾರತ ಸಂವಿಧಾನದ ಅನುಚ್ಛೇದ 176(1) ರ ವ್ಯಾಪ್ತಿ ಮತ್ತು ಪರಿಣಾಮದ ನಡುವೆ ವ್ಯತ್ಯಾಸ ಕಲ್ಪಿಸುವಲ್ಲಿ ಇರುವ ತೊಂದರೆಗಳ ದೃಷ್ಟಿಯಿಂದ ಗೌರವಾನ್ವಿತ ಸದನ ಮತ್ತು ರಾಜ್ಯದ ಜನತೆಗೆ ಮನವರಿಕೆ ಮಾಡಿಕೊಡುವ ಉದ್ದೇಶದಿಂದ ಮಾತ್ರವೇ ಮುಂಬರುವ ದಿನಗಳಲ್ಲಿ ಸರ್ಕಾರವು ಯಾವ ಕ್ರಮ ಕೈಗೊಳ್ಳಲು ಉದ್ದೇಶಿಸಿದೆ ಎಂಬ ಬಗ್ಗೆ ನನ್ನ ಭಾಷಣದ ಮೂಲಕ ಸ್ಥೂಲ ಮಾಹಿತಿಯನ್ನು ನೀಡುತ್ತಿದ್ದೇನೆ." ಹೀಗೆ ಹೇಳಿ, "ನಾನು ಭಾರತ ಸಂವಿಧಾನದ ಅನುಚ್ಛೇದ 175(1)ರ ಅಡಿ ಮಾತ್ರ ಈ ಗೌರವಾನ್ವಿತ ಸದನವನ್ನು ಉದ್ದೇಶಿಸಿ ಮಾತನಾಡುತ್ತಿದ್ದೇನೆಂದು ಪುನರುಚ್ಚರಿಸುತ್ತಿದ್ದೇನೆ." ಈ ರೀತಿ ಮಾನ್ಯ ರಾಜ್ಯಪಾಲರು ಸ್ಪಷ್ಟವಾಗಿ ಹೇಳಿದ್ದಾರೆ. ಈಗ ಈ ಎರಡೂ ಭಾಷಣಗಳ ಬಗ್ಗೆ ಸ್ಪಷ್ಟೀಕರಣ ಆಗಬೇಕು. ಈಗ ಜನವರಿ 19ನೇ ತಾರೀಖಿನ ರಾಜ್ಯಪಾಲರ ಭಾಷಣದ ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದರೆ Motion of Thanks ಅನ್ನು ಮೂವ್ ಮಾಡುವುದಕ್ಕೆ ಅವಕಾಶ ಇದೆ, ಹಾಗೆ ಒಬ್ಬ ಮಾನ್ಯ ಸದಸ್ಯರು Motion of Thanks ಅನ್ನು ಮೂವ್ ಮಾಡತಕ್ಕಂಥಾದ್ದು, ಮತ್ತೆ ಇನ್ನೊಬ್ಬ ಮಾನ್ಯ ಸದಸ್ಯರು ಅನುಮೋದಿಸತಕ್ಕಂಥಾದ್ದು, ಅನಂತರ ತಾವು ಇದಕ್ಕೆ ಚರ್ಚೆ ಮಾಡಲು ಅವಕಾಶವನ್ನು ಕೊಟ್ಟರೆ, ಚರ್ಚೆ ಮಾಡತಕ್ಕಂಥಾದ್ದು ಇದೆ. ಅದನ್ನು ಸದನ ಅಡಾಪ್ಟ್ ಮಾಡುವಂಥಾದ್ದು 176(1)ರಲ್ಲಿ ಇರತಕ್ಕಂಥ ವಿಚಾರ. ಇವತ್ತು ಇಲ್ಲಿ ನಮಗೆ ಕೊಟ್ಟಿರುವಂತಹ ಅಜೆಂಡಾದಲ್ಲಿ ಏನು ಇದೆಯೆಂದರೆ ವಂದನಾ ನಿರ್ಣಯವನ್ನು ಮಂಡನೆ ಮಾಡುವಂಥಾದ್ದು, ಮತ್ತೆ ಅದರ ಮೇಲೆ ಚರ್ಚೆಯಾಗುವಂಥಾದ್ದು ಇದೆ. ಮಾನ್ಯ ರಾಜ್ಯಪಾಲರು ಭಾಷಣವನ್ನು ಮಾಡಿರುವಂಥಾದ್ದು, 175(1)ರ ಪ್ರಕಾರ ಎಂದರೆ, ವಂದನಾ ನಿರ್ಣಯವನ್ನು ಮಂಡಿಸುವುದಕ್ಕೆ ಅವಕಾಶ ಇಲ್ಲ. ಇದು ಬಹಳ ಸ್ಪಷ್ಟವಾಗಿ 176(1)ರಲ್ಲಿ ಕೂಡ ಇದೆ. ಅದನ್ನು ಹೇಳುವಾಗ ಏನು ಮಾಡಿದ್ದಾರೆಂದರೆ, 176(1)ರಲ್ಲಿ ರಾಜ್ಯಪಾಲರು ಸದನವನ್ನು ಉದ್ದೇಶಿಸಿ ಮಾಡಿದಂತಹ ಭಾಷಣದ ಬಗ್ಗೆ ಚರ್ಚೆಯಾಗಬೇಕೆಂದು ಹೇಳಿ, ಆ ಚರ್ಚೆಯ ಅವಧಿಯನ್ನು ಮಾನ್ಯ ವಿರೋಧಪಕ್ಷದ ನಾಯಕರ ಜೊತೆಗೆ ಮತ್ತು ಸದನದ ನಾಯಕರ ಜೊತೆಗೆ ಚರ್ಚೆ ಮಾಡಿ, ಅದನ್ನು ಮಾನ್ಯ ಸಭಾಧ್ಯಕ್ಷರು ತೀರ್ಮಾನ ಮಾಡಬೇಕೆಂದು, ಅದಕ್ಕೆ ಕೆಲವು ವಿಧಿವಿಧಾನಗಳನ್ನು ರೂಪಿಸಿದ್ದಾರೆ. ಅದನ್ನು ಹೇಗೆ ಮಾಡಬೇಕೆಂದು, ಚರ್ಚೆ ಹೇಗೆ ಆಗಬೇಕೆಂದು ಮಾಡಿದ್ದಾರೆ. ಕಳೆದ ಬಾರಿ Motion of Thanks ಅನ್ನು ಮೂವ್ ಮಾಡಿದಾಗ ಏನು ಮಾಡಬೇಕೆಂಬುದನ್ನು ಹೇಳಿದ್ದಾರೆ. ಆದರೆ 175(1)ರಲ್ಲಿ ಏನೂ ಹೇಳಿಲ್ಲ, ಚರ್ಚೆ ಎಂದು ಮಾತ್ರ ಹೇಳಿದ್ದಾರೆ. ಆದರೆ 175(1)ರಲ್ಲಿ ಸರ್ಕಾರದ ನೀತಿ, ಕಾರ್ಯಕ್ರಮಗಳನ್ನು ಹೇಳಬೇಕೆಂದು ಏನು ಇಲ್ಲ. ಯಾವುದೇ ಪ್ರಮುಖವಾದಂತಹ ವಿಚಾರಗಳನ್ನು, ಸದನಕ್ಕೆ ತಿಳಿಸಬೇಕೆಂದರೆ, ಮಾನ್ಯ ರಾಜ್ಯಪಾಲರು ಅದನ್ನು ತಿಳಿಸುವುದಕ್ಕೆ ಅವಕಾಶ ಇದೆ, ಮತ್ತೆ ಅದನ್ನು ಚರ್ಚೆ ಮಾಡಬಹುದು. ಆದರೆ Motion of Confidence ಅನ್ನು ಮೂವ್ ಮಾಡಿ, ಅದನ್ನು ಅಡಾಪ್ಟ್ ಮಾಡುವಂಥಾದ್ದಕ್ಕೆ ಅವಕಾಶ ಇಲ್ಲ. It is categorically very clear. ಇಷ್ಟು ಇದ್ದರೂ ಕೂಡ ಗೊಂದಲ ಏನಾಗಿದೆಯೆಂದರೆ, ನೀವು ವಂದನಾ ನಿರ್ಣಯವನ್ನು ಮಂಡನೆ ಮಾಡಲು ಅವಕಾಶವನ್ನು ಕೊಟ್ಟಿದ್ದೀರಿ. ಆರ್ಟಿಕಲ್ 175(1) ರ ಪ್ರಕಾರ ಪಾಸ್ ಮಾಡಿದ್ದಾರೆ. ಇದು ಒಂದಕ್ಕೊಂದು ತದ್ವಿರುದ್ಧವಾಗುತ್ತದೆ. ಇದು ರಾಜ್ಯಾಂಗ ಬಾಹಿರವಾಗುತ್ತದೆ, ರಾಜ್ಯಾಂಗದ

ವಿಧಿ ವಿಧಾನಗಳಿಗೆ ವಿರೋಧವಾಗುತ್ತದೆ. ಇಲ್ಲಿ ಅದಕ್ಕೆ ಅವಕಾಶವನ್ನು ಕೊಟ್ಟು, ಇಲ್ಲಿ ವಂದನಾ ನಿರ್ಣಯ ಮಂಡನೆ ಆಗಿ, ಚರ್ಚೆಯಾಗಿ, ಅಡಾಪ್ಟ್ ಆದರೆ, ಮುಂದೆ ಈ ಸದನ ಒಂದು ಕೆಟ್ಟ, ರಾಜ್ಯಾಂಗಕ್ಕೆ ವಿರುದ್ಧವಾದಂತಹ, ರಾಜ್ಯಾಂಗ ಬಾಹಿರವಾಗಿ ನಿರ್ಣಯವನ್ನು ಮಾಡಿದ ಹಾಗೆ ಆಗುತ್ತದೆ. ತಾವು ಅದಕ್ಕೆ ಅವಕಾಶವನ್ನು ಕೊಡಬಾರದೆಂದು ನಮ್ಮೆಲ್ಲರ ಕಳಕಳಿಯಾಗಿದೆ. ಇದರಲ್ಲಿ ಬೇರೆ ಏನೂ ದುರುದ್ದೇಶವಿಲ್ಲ. ನಾವು ಇದನ್ನು ಅಡ್ಡಿ ಪಡಿಸಬೇಕು, ಸದನದ ಸಮಯವನ್ನು ಹಾಳು ಮಾಡಬೇಕೆಂದು ಇಲ್ಲ. ಮಾನ್ಯ ಎಂ.ಪಿ. ಪ್ರಕಾಶ್‌ರವರು ಹೇಳಿದರು, ಮಾನ್ಯ ರಾಜ್ಯಪಾಲರು ಒಂದು ಸಾರಿ ಭಾಷಣ ಮಾಡಿದ ಮೇಲೆ, ಈ ಬಗ್ಗೆ ರೂಲ್ 27 ಅನ್ನು ಕೋಟ್ ಮಾಡಿ ಹೇಳಿದರು. ಇದನ್ನು ಯಾವಾಗ ಹೇಳಬೇಕೆಂದರೆ, ಮಾನ್ಯ ರಾಜ್ಯಪಾಲರು ಭಾಷಣ ಮಾಡುವುದಕ್ಕೆ ಮುಂಚಿತವಾಗಿ, ಭಾಷಣ ಮಾಡುವಾಗ, ಭಾಷಣದ ತರುವಾಯ ಎಂದು ಇದೆಯೇ, ಹೊರತು . . .

ಶ್ರೀ ಬಿ.ಎಸ್. ಹೊರಟ್ಟಿ: "ತರುವಾಯ" ಎಂದರೆ ಏನು?

ಶ್ರೀ ಸಿದ್ಧರಾಮಯ್ಯ: "ತರುವಾಯ" ಎಂದರೆ ಯಾವತ್ತಾದರೂ ಎಂದು ಅಲ್ಲ. ಮುಂದಿನ ಸದನಕ್ಕಲ್ಲ. ಇಲ್ಲಿ ಭಾಷಣ ಮಾಡಿದ ತಕ್ಷಣ ಎಂದು ಅರ್ಥ, ಮುಂದಿನ ಸದನದಲ್ಲಿ ಎಂದು ಅಲ್ಲ. ವಿಧಾನ ಸಭೆ ಸೇರಿದಾಗ, ಯಾವುದಕ್ಕೆ ಸೇರಿದಾಗ 175(1) ಕ್ಕೆ ಸೇರಿದಾಗ, ಮಾತ್ರ 176(1)ಕ್ಕೆ ಸೇರಿದಾಗ ಮಾತ್ರ ಎಂದು ಇದೆಯೇ, ಹೊರತು ಯಾವಾಗಲಾದರೂ ಕೂಡ, ಅವರು ಕ್ರಿಯಾಲೋಪವನ್ನು ಎತ್ತಬಾರದು, ಅಡಚಣೆ ಮಾಡಬಾರದು. ಇಲ್ಲಿ ಮಾನ್ಯ ರಾಜ್ಯಪಾಲರ ಭಾಷಣಕ್ಕೆ ತಿದ್ದುಪಡಿ ಮಾಡುವ ಅವಕಾಶ ಇದೆ. ಇದನ್ನು ಬಹಳ ಸ್ಪಷ್ಟವಾಗಿ ರೂಲ್‌ನಲ್ಲಿ ಹೇಳಿದ್ದೇವೆ. ಆ ರೀತಿ ಅವಕಾಶವಿರುವಾಗ, ಕ್ರಿಯಾಲೋಪವನ್ನು ಎತ್ತಬಾರದು, ಎನ್ನುವಂಥಾದ್ದು ಯಾವ ರೂಲ್‌ನಲ್ಲಿ ಸ್ಪಷ್ಟವಾಗಿ ಹೇಳುತ್ತದೆ, ಎಲ್ಲಿ ಇದೆ? ಇದು ಎಲ್ಲೂ ಇಲ್ಲ. ನಾವೇ ಅದನ್ನು ಭಾವಿಸಿಕೊಂಡು ಈ ರೀತಿ ಹೇಳಿಬಿಟ್ಟಿದ್ದಾರೆ. ಅದಕ್ಕೋಸ್ಕರವೇ ಕ್ರಿಯಾಲೋಪವೆ ಎತ್ತಬಾರದು, ಚರ್ಚೆನೇ ಮಾಡಬಾರದು. ಈ ಸದನದ ಸಮಯ ಹಾಳಾಗಿ ಹೋಗುತ್ತದೆಂದು ನಾವು ಚರ್ಚೆ ಮಾಡುವಂಥಾದ್ದು ಇದೆಯಲ್ಲಾ, ಇದು ಸರಿಯಾದದ್ದು ಅಲ್ಲ. ಇದು ರಾಜ್ಯಾಂಗಕ್ಕೆ ಬದ್ಧವಾದಂತಹ ವಿಚಾರವಾಗಿರುವುದರಿಂದ, ಸಂವಿಧಾನಾತ್ಮಕವಾದಂತಹ ವಿಚಾರವಾಗಿರುವುದರಿಂದ, ನಾವು ಇದರ ಬಗ್ಗೆ ನಾವು ನಮ್ಮ ಮೈಂಡನ್ನು ಅಪ್ಲೈ ಮಾಡಬೇಕಾಗುತ್ತದೆ, ನೀವೂ ಕೂಡ ಇದನ್ನು ಗಂಭೀರವಾಗಿ ಪರಿಗಣಿಸಬೇಕೆಂದು ನನ್ನ ಕಳಕಳಿಯ ಮನವಿಯಾಗಿದೆ.

(ಈ ಹಂತದಲ್ಲಿ ಸದಸ್ಯರಾದ ಶ್ರೀ ಎ.ಟಿ.ರಾಮಸ್ವಾಮಿಯವರು ಮಾತನಾಡಲು ಪ್ರಯತ್ನಿಸಿದರು)

ನೀವು ನಂತರ ಮಾತನಾಡಿ, ನೀವು ಮಾತನಾಡುವುದು ಬೇಡ ಎಂದು ಎಲ್ಲಿಯೂ ಹೇಳಿಲ್ಲ ಮಾನ್ಯ ರಾಮಸ್ವಾಮಿಯವರೆ, ಎಷ್ಟು ಬೇಕಾದರೂ ಮಾತನಾಡಿ, ನಿಮಗೂ ಅವಕಾಶವಿದೆ, ನೀವೂ ರಾಜ್ಯಾಂಗವನ್ನು ಓದಿಕೊಂಡಿದ್ದೀರಿ, ನೀವೂ ವಕೀಲರಾಗಿದ್ದೀರಿ ಎಂದು ಕಾಣಿಸುತ್ತದೆ. ಇಲ್ಲವೇ?, ನಿಮಗೆ ಶಾಸಕರಾಗಿ ಬಹಳ ಅನುಭವವಿದೆ. ಇಲ್ಲಿ ಮಾತನಾಡಲು ವಕೀಲರಾಗಬೇಕು ಎಂದೇನೂ ಇಲ್ಲ. ರಾಜ್ಯಾಂಗವನ್ನು ಇಂಟರ್‌ಪ್ರಿಟ್ ಮಾಡಲು ವಕೀಲರೇ ಆಗಬೇಕು ಎಂದೇನೂ ಇಲ್ಲ. ಅರ್ಥಮಾಡಿಕೊಂಡು ಹೇಳಲಿಕ್ಕೆ ಎಲ್ಲರಿಗೂ ಅವಕಾಶವಿದೆ. ಇಲ್ಲಿ ಎಲ್ಲರೂ ವಕೀಲರೇ ಆರಿಸಿ ಬಂದಿಲ್ಲ. ವಕೀಲರೇ ಇಲ್ಲಿ ವಿವರಣೆ ಕೊಡಬೇಕಾದಂಥ ಅಗತ್ಯವಿಲ್ಲ. ಆದ್ದರಿಂದ, ಭಾಷಣದ ಮೇಲೆ ಇಲ್ಲಿ ಚರ್ಚೆ ಮಾಡಲಿಕ್ಕೆ ನಮ್ಮದು ಯಾವುದೇ ತಕರಾರಿಲ್ಲ. ಆದರೆ ಅದು 176(1)ರ ಪ್ರಕಾರ, 19ನೇ ಜನವರಿ 2006ರಂದು ಮಾಡಿರುವ ಭಾಷಣಕ್ಕೆ Motion of Confidence ಮೂವ್ ಮಾಡಿ, ಅದರ ಬಗ್ಗೆ ಚರ್ಚೆಯಾದರೆ, we have no objection. ಅದರಲ್ಲಿ ನಾವೂ ಭಾಗಿಯಾಗಿ ಚರ್ಚೆ ಮಾಡೋಣ, ವಂದನೆ ಸಲ್ಲಿಸೋಣ, ಅದನ್ನು ಅಡಾಪ್ಟ್ ಮಾಡೋಣ. But here is a case,

ಮಾತ್ರ Governor's address ಅನ್ನು Joint Assembly ಗೆ ಅವರು ಮಾಡಬಹುದು. ಇಲ್ಲಿ ಏನಾಗಿದೆ ಎಂದರೆ, ದಯಮಾಡಿ ಈ ವಿಷಯವನ್ನು ದೊಡ್ಡದು ಮಾಡುವುದರ ಬದಲು withdraw ಮಾಡಿಕೊಂಡು 'ಚರ್ಚೆ' ಎನ್ನುವ ಪದ ಬಳಸಿಬಿಟ್ಟು ಇದನ್ನು ಸಮಾಪ್ತಿ ಮಾಡುವುದು ಒಳ್ಳೆಯದೆಂದು ನಾನು ತಮಗೆ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು: ಈಗಾಗಲೇ ಸಮಯ ಒಂದೂವರೆ ಗಂಟೆಯಾಗಿದೆ. ಇನ್ನೂ ಅನೇಕ ಜನ ಮಾನ್ಯ ಸದಸ್ಯರು ಮಾತನಾಡುವವರಿರುವುದರಿಂದ ಈಗ ಸದನವನ್ನು ಲಂಚ್‌ಗಾಗಿ ನಾನು ಎರಡೂವರೆ ಗಂಟೆವರೆಗೆ ಸದನವನ್ನು ಮುಂದೂಡುತ್ತಿದ್ದೇನೆ.

(ಸದನವು ಮಧ್ಯಾಹ್ನ 1-31 ಗಂಟೆಗೆ ಮುಂದೂಡಿ ಭೋಜನ ನಂತರ ಪುನಃ 2-30 ಗಂಟೆಗೆ ಸೇರಲು ನಿಶ್ಚಯಿಸಿತು?

(ಸದನವು ಪುನಃ ಮಧ್ಯಾಹ್ನ 3 ಗಂಟೆ 22 ನಿಮಿಷಕ್ಕೆ ಆರಂಭವಾಯಿತು)

ಅಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನಲಂಕರಿಸಿದರು.

ವಿಷಯ: ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣ ಪ್ರಸ್ತಾಪದ ಬಗ್ಗೆ (ಮುಂದುವರಿದ ಚರ್ಚೆ):

ಅಧ್ಯಕ್ಷರು: ಮಾನ್ಯ ಎಂ.ಪಿ. ಪ್ರಕಾಶ್‌ರವರು ಮಾತನಾಡಿ.

ಶ್ರೀ ಕೆ. ಶ್ರೀನಿವಾಸಗೌಡ: ಮಾನ್ಯ ಅಧ್ಯಕ್ಷರೆ, ನಿಮ್ಮ ಕಣ್ಣು ಆ ಕಡೆಯೇ ಇರುತ್ತದೆ, ಸ್ವಲ್ಪ ಈ ಕಡೆಯೂ ನೋಡಿ.

ಅಧ್ಯಕ್ಷರು: ಬೆಳಿಗ್ಗೆಯಿಂದ ಈ ಕಡೆಯವರು ಮಾತನಾಡಿದ್ದಾರೆ, ಹಾಗಾಗಿ ಅವರಿಗೂ ಅವಕಾಶ ಕೊಡಲಾಗುತ್ತಿದೆ.

ಶ್ರೀ ಕೆ. ಶ್ರೀನಿವಾಸಗೌಡ: ಹಿರಿಯ ಸದಸ್ಯರುಗಳಿದ್ದಾರೆ, ವಿರೋಧಪಕ್ಷದ ಕಡೆ ಸ್ವಲ್ಪ ಹೆಚ್ಚಿಗೆ ಕಣ್ಣಾಯಿಸಿ ಎಂದು ಹೇಳುತ್ತಿದ್ದೇನೆ ಅಷ್ಟೆ.

ಶ್ರೀ ಎಂ.ಪಿ. ಪ್ರಕಾಶ್ (ಹಡಗಲಿ): ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ಬೆಳಿಗ್ಗೆ ನಮ್ಮ ವಿರೋಧಪಕ್ಷದ ನಾಯಕರಾದ ಮಾನ್ಯ ಧರ್ಮಸಿಂಗ್‌ರವರು ಮಾತನಾಡುತ್ತಾ ಒಂದು ಮೂಲಭೂತ ಪ್ರಶ್ನೆಯನ್ನು ಎತ್ತಿದ್ದಾರೆ. ದಿನಾಂಕ 19ನೇ ತಾರೀಖಿನಂದು ಸಮ್ಮಿಶ್ರ ಸರ್ಕಾರ ಅಧಿಕಾರದಲ್ಲಿದ್ದ ಸಂದರ್ಭದಲ್ಲಿ ಸಚಿವಸಂಪುಟ ಒಪ್ಪಿಕೊಂಡಿರತಕ್ಕಂಥ ರಾಜ್ಯಪಾಲರ ಭಾಷಣವನ್ನು ತಯಾರು ಮಾಡಿ, ಒಪ್ಪಿಗೆ ಕೊಟ್ಟು, ಅದನ್ನು ರಾಜ್ಯಪಾಲರು ಜಂಟಿ ಸದನದಲ್ಲಿ ಓದಿದ ಮೇಲೆ ಮತ್ತೆ ಇನ್ನೊಂದು ಬಾರಿ, ಅಂದರೆ ಎರಡನೇ ಬಾರಿ ರಾಜ್ಯಪಾಲರ ಭಾಷಣ ಮಾಡುವುದಕ್ಕೆ ಅವಕಾಶವಿಲ್ಲ. ಆ ಕಾರಣಕ್ಕಾಗಿ ಅಸಿಂಧುವಾಗುತ್ತದೆ, ಆರ್ಟಿಕಲ್ 175ರ ಕೆಳಗೆ ನಮ್ಮ ರಾಜ್ಯಪಾಲರು ಭಾಷಣ ಮಾಡಿದ್ದಾರೆ. ನಮ್ಮ ಸಭೆಯ ನಡವಳಿಗಳು ಹಾಗೂ ನಿಯಮಾವಳಿಗಳಿಗೆ ಸಂಬಂಧಿಸಿದಂತೆ ನಿಯಮಾವಳಿಗಳನ್ನು ರಚನೆ ಮಾಡಿಕೊಂಡಿದ್ದೇವೆ. ಆ ನಿಯಮ ಕಲಂ 25ರ ಅಡಿಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶವಿದೆ, ಮತ್ತೊಮ್ಮೆ ವಂದನಾ ನಿರ್ಣಯವನ್ನು ಇಲ್ಲಿ ಮಂಡಿಸುವುದಕ್ಕೆ, ಈ ಸದನ ಅದಕ್ಕೆ ಒಪ್ಪಿಗೆ ಕೊಡುವುದಕ್ಕೆ ಅವಕಾಶವಿಲ್ಲವೆಂದು ಪ್ರಸ್ತಾಪ ಮಾಡಿದ್ದಾರೆ. ಅನೇಕ ಹಿರಿಯ ಸದಸ್ಯರಾದ ಮಾನ್ಯ ಆರ್.ವಿ ದೇಶಪಾಂಡೆಯವರು, ರಮೇಶ್‌ಕುಮಾರ್‌ರವರು, ಶ್ರೀರಾಮರೆಡ್ಡಿಯವರು,

ವಾಟಾಳ್‌ನಾಗರಾಜ್‌ರವರು, ಬಸವರಾಜ್ ರಾಯರೆಡ್ಡಿಯವರು ಈ ವಿಚಾರವನ್ನು ಪ್ರಸ್ತಾಪ ಮಾಡಿ, ಅಸಿಂಧುವಾಗುತ್ತದೆ, ಇದನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಕಲ್ಪಿಸಿಕೊಡಬಾರದು, ಇದು ಸಂಪ್ರದಾಯವಲ್ಲವೆಂದು ಹೇಳಿದ್ದಾರೆ. ಸನ್ಮಾನ್ಯ ಅಧ್ಯಕ್ಷರೆ, ತಮಗೆ ಗೊತ್ತಿರುವಂತೆ ಸಂಪ್ರದಾಯ ಎನ್ನತಕ್ಕಂಥದ್ದು ಯಾವತ್ತಾದರೂ ಒಂದು ದಿವಸ ಪ್ರಾರಂಭ ಮಾಡಬೇಕಾಗಿರತಕ್ಕಂಥದ್ದು, ಸಂಪ್ರದಾಯವೆನ್ನತಕ್ಕಂಥದ್ದು ನಮ್ಮ ನಿಯಮಾವಳಿಗಳ ಮುಖಾಂತರ ಬಂದಿರತಕ್ಕಂಥದ್ದಲ್ಲ, ಕನ್ವೆಷನ್ ಎನ್ನತಕ್ಕಂಥ ಪದವನ್ನು ಬಳಸುತ್ತೇವೆ. ಅದನ್ನು ಎಲ್ಲಿಯಾದರೂ ಒಂದು ಕಡೆಗೆ ನಾವೇ ಏಕೆ ಪ್ರಥಮವಾಗಬಾರದು ಎನ್ನುವ ಪ್ರಶ್ನೆ ಕೂಡ ಬರುತ್ತದೆ. ಪ್ರತಿಯೊಂದು ಸನ್ನಿವೇಶ ಊಹೆಗೆ ಸಿಗದಿರತಕ್ಕಂಥ ರೀತಿಯಲ್ಲಿದ್ದಂತಹದ್ದರಲ್ಲಿ, ಕಾನೂನು ರಚನೆ ಮಾಡುವಾಗ, ಮುಂದಿನ ದಿನಗಳಲ್ಲಿ ಇಂತಹ ಒಂದು ಸಂದಿಗ್ಧ ಪರಿಸ್ಥಿತಿ ಉದ್ಭವವಾಗಬಹುದೆಂದು ಪರಿಭಾವಿಸಿ ಆದಷ್ಟು ಮಟ್ಟಿಗೆ ಅದೆಲ್ಲದಕ್ಕೂ ಉತ್ತರವನ್ನು ಕಂಡುಹಿಡಿಯಬೇಕೆನ್ನುವ ಕಾರಣಕ್ಕಾಗಿಯೇ ನಮ್ಮ ಕಾನೂನುಗಳಲ್ಲಿ ಅವುಗಳಿಗೆ ಅವಕಾಶ ಮಾಡಿಕೊಟ್ಟಿರುತ್ತಾರೆ. ಹಾಗೆ ಕಾನೂನಿನಲ್ಲಿ ಅವಕಾಶ ಮಾಡಿಕೊಡುವುದರ ಜೊತೆ ಜೊತೆಗೆ ನಿಯಮಾವಳಿಗಳನ್ನು ಕೂಡ ರಚನೆ ಮಾಡಿದ್ದಾರೆ. ಆ ನಿಯಮಾವಳಿಗಳ ಹಿನ್ನೆಲೆಯಲ್ಲಿ ನೀವು ಈ ವಿಚಾರವನ್ನು ಮಾನ್ಯ ರಾಜ್ಯಪಾಲರು, ಮಾನ್ಯ ವಿರೋಧ ಪಕ್ಷದ ನಾಯಕರಾದ ಧರ್ಮಸಿಂಗ್‌ರವರ ನೇತೃತ್ವದಲ್ಲಿ ಕೊಟ್ಟಂತಹ ಮನವಿ ಮತ್ತು ಪತ್ರವನ್ನು ನೋಡಿದ ನಂತರ, ಅಲ್ಲಿ ಅವರು ಕೂಲಂಕಷವಾಗಿ ವಿಚಾರವನ್ನು ಚರ್ಚೆ ಮಾಡಿ ಈಗ 175(1)ರ ಕೆಳಗೆ ನೀವೇನು ಮಾಡುತ್ತಿದ್ದೀರಿ ಅದು ಸರಿಯಲ್ಲ. "Therefore, under the circumstances enumerated above, we request to uphold the Constitution of India in the interest of democracy." ಎಂದು ದಿನಾಂಕ 22.2.2006 ರಂದು ಮಾನ್ಯ ಧರ್ಮಸಿಂಗ್‌ರವರ ನೇತೃತ್ವದಲ್ಲಿ ಒಂದು ಮನವಿಯನ್ನು ರಾಜ್ಯಪಾಲರಿಗೆ ಅರ್ಪಿಸಿದ್ದಾರೆ. ಅದಾದ ನಂತರ ರಾಜ್ಯಪಾಲರು ಸಂವಿಧಾನದ ನಿಯಮಾವಳಿಗಳಿಗೆ ಅದಕ್ಕೆ ಸಂಬಂಧಪಟ್ಟಿರತಕ್ಕಂಥ ಪರಿಣಿತರ, ತಜ್ಞರ ಸಲಹೆಯನ್ನು ಕೂಡ ಪಡೆದಿದ್ದಾರೆ, ನಮ್ಮ ರಾಜ್ಯಸರ್ಕಾರದ ಅಡ್ವೋಕೇಟ್ ಜನರಲ್‌ರವರ ಸಲಹೆಯನ್ನೂ ಕೂಡ ಪಡೆದಿದ್ದಾರೆ. ಅದನ್ನು ಪಡೆದುಕೊಂಡ ನಂತರದಲ್ಲಿ ತಮ್ಮ ವಿಚಾರಗಳನ್ನು ತಮ್ಮ ಭಾಷಣದಲ್ಲಿ 175(1)ರ ಕೆಳಗೆ, 176, 175ರ ನಡುವೆ ಇರತಕ್ಕಂಥ ವಿಚಾರಗಳ ಬಗ್ಗೆ ನಾನು ಗೊಂದಲವಾಗಬಾರದೆನ್ನುವ ಕಾರಣಕ್ಕಾಗಿಯೇ ಪ್ರಥಮ ಭಾರಿಗೆ ಮೊದಲನೇ ಅಧ್ಯಾಯ ಒಂದನೇ ಪ್ಯಾರಾಗ್ರಾಫ್‌ನಲ್ಲಿ ಅವರು ಈ ವಿಚಾರವನ್ನು ಪ್ರಸ್ತಾಪ ಮಾಡಿ 175(1)ರ ಕೆಳಗೆ ನಾನು ಈ ಭಾಷಣವನ್ನು ಕೊಡುತ್ತಿದ್ದೇನೆ ಎನ್ನುವ ಮಾತನ್ನು ಹೇಳಿದ್ದಾರೆ. ಇಲ್ಲಿ ನಾವು ಗಮನಿಸಬೇಕಾದ ಅಂಶ ಕೇವಲ ಎರಡು ಮೂರಕ್ಕೆ ಮಾತ್ರ ಸೀಮಿತವಾಗಿರತಕ್ಕಂಥದ್ದು. ಇದು ಸಂಪ್ರದಾಯವಲ್ಲ, ಅಸಿಂಧುವಾಗಿರತಕ್ಕಂಥದ್ದು ಆ ಕಾರಣಕ್ಕಾಗಿ ಎರಡನೇ ಬಾರಿಗೆ ಮಾಡುವುದಕ್ಕೆ ಆಗುವುದಿಲ್ಲ, ಅದನ್ನು ಮಾಡಬಾರದು ಎನ್ನುವುದರ ಬಗ್ಗೆ ಸಂವಿಧಾನ ಸಂಪೂರ್ಣ ಮೌನವಾಗಿರುವ ಈ ಸಂದರ್ಭದಲ್ಲಿ ನಾವು ಯಾವರೀತಿಯಾಗಿ ಅರ್ಥೈಸುವಿಕೆ ಅದರಲ್ಲಿ ಮಾಡಬೇಕು? ಇಲ್ಲಿ ಮಾಡಬಾರದೆನ್ನುವ ನಿಷೇಧವಿಲ್ಲ. ಆದರೆ ನಿಯಮಾವಳಿಗಳು ಇಲ್ಲಿಯವರೆಗೆ ಆಗಿರತಕ್ಕಂಥ ಪದ್ಧತಿಯ ಪ್ರಕಾರ 176ರ ಕೆಳಗೆ ಪ್ರಸ್ತಾಪ ಮಾಡುತ್ತಾರೆ ವಂದನಾ ನಿರ್ಣಯ ಮಂಡನೆಯಾಗುತ್ತದೆ. ತಾವು ಈ ಸಂದರ್ಭದಲ್ಲಿ, ಸದನದ ಅನೇಕ ಹಿರಿಯ ಸದಸ್ಯರು ಈ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಆದರೂ ಕೂಡ ಮಾನ್ಯ ರಾಜ್ಯಪಾಲರು ತಮ್ಮ ಭಾಷಣವನ್ನು

ದಯಪಾಲಿಸಿದ ನಂತರ ಮುಂದೆ ಒಂದು ಅನಿವಾರ್ಯವಾಗಿರತಕ್ಕಂಥ ಸಂದಿಗ್ಧ ಪರಿಸ್ಥಿತಿ ನಿರ್ಮಾಣವಾಗಿ ಚರ್ಚೆಗೆ ಬಂದಿರತಕ್ಕಂಥ ಸಂದರ್ಭದಲ್ಲಿ ತಾವು ಇಲ್ಲಿ ವಂದನಾ ನಿರ್ಣಯ ಮಂಡಿಸುವುದಕ್ಕೆ ಸಾಧ್ಯವಿಲ್ಲವೆಂದು ಹೇಳುತ್ತಿದ್ದೀರಿ. ಸದನದ ವರದಿಯನ್ನು ನೋಡಿದರೆ 27ನೇ ತಾರೀಖು ವಿಶ್ವಾಸ ಮತಯಾಚನೆ ಮಾಡಿ, 3ನೇ ತಾರೀಖು ಪ್ರಮಾಣ ವಚನವಾಗಿ ನೂತನ ಸರ್ಕಾರದ ಅಸ್ತಿತ್ವಕ್ಕೆ ಬಂದಿರುತ್ತದೆ. ಸುಪ್ರೀಂ ಕೋರ್ಟ್ ಬಿಹಾರ ಹಾಗೂ ಮಾನ್ಯ ಬೊಮ್ಮಾಯಿರ ಪ್ರಕರಣಗಳಲ್ಲಿ ನೀಡಿರುವ ತೀರ್ಪಿನ ಹಿನ್ನೆಲೆಯಲ್ಲಿ ಮಾನ್ಯ ರಾಜ್ಯಪಾಲರು ಹೊಸ ಸರ್ಕಾರ ರಚನೆಗೆ ಅವಕಾಶ ಕಲ್ಪಿಸಿಕೊಟ್ಟಿರುತ್ತಾರೆ.

ಶ್ರೀ ವಾಟಾಳ್‌ನಾಗರಾಜ್: ಮಾನ್ಯ ಪ್ರಕಾಶ್‌ರವರು ಬಹಳ ಕಷ್ಟದಲ್ಲಿ ಮಾತನಾಡುತ್ತಿದ್ದಾರೆ.

ಶ್ರೀ ಎಂ.ಪಿ. ಪ್ರಕಾಶ್: ಬಹಳ ಸರಳ ಮತ್ತು ಸುಲಲಿತ ಮಾರ್ಗದಲ್ಲಿ ಮಾತನಾಡುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್: ನಿಮ್ಮ ಕಷ್ಟ ನೋಡಿ ಅನುಕಂಪ ಬರುತ್ತಿದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನೀವು ಬಹಳ ಕಷ್ಟದ ಪರಿಸ್ಥಿತಿಯಲ್ಲಿ ಮಾತನಾಡುತ್ತಿದ್ದೀರಿ.

ಶ್ರೀ ಎಂ.ಪಿ. ಪ್ರಕಾಶ್: ನಿಮ್ಮ ಬಗ್ಗೆ ಬಹಳ ಕನಿಕರವಿದೆ, ನಿಮ್ಮ ಭಾಷಣವನ್ನು ಮತ್ತೊಂದು ಸಲ ಓದಿದರೆ ಗೊತ್ತಾಗುತ್ತದೆ, ನೀವು ದೇವೇಗೌಡರ ಬಗ್ಗೆ ಎಂತಹ ಒಳ್ಳೆಯ ಮೆಚ್ಚುಗೆಯ ಮಾತುಗಳನ್ನು ಮಾತನಾಡಿ, ನಾಳೆ ದೆಹಲಿಯಲ್ಲಿ ನಡೆಯತಕ್ಕಂಥ ವಿಚಾರದಲ್ಲಿ, ಅವರನ್ನೂ ಕೂಡ ಆಹ್ವಾನಿಸಿ, ನಿಮ್ಮ ಇರಾನ್ ಪ್ರತಿಭಟನೆಯ ಸಂದರ್ಭದಲ್ಲಿ ಏನು ಮಾಡಿದಿರಿ? ನಿಮ್ಮ ಈ ಸಂದಿಗ್ಧ ಪರಿಸ್ಥಿತಿಗೆ ನಾನು ಬಹಳ ಕನಿಕರಪಡುತ್ತಿದ್ದೇನೆ . . .

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಇರಾನ್‌ಗೂ ಇದಕ್ಕೂ ಸಂಬಂಧವಿಲ್ಲ, ಪ್ರತಿಭಟನೆಗೆ ಬಂದರೆ ಕರೆದುಕೊಂಡು ಹೋಗುತ್ತೇವೆ ನಾವೇನೂ ಇಲ್ಲವೆಂದು ಹೇಳುವುದಿಲ್ಲ.

ಶ್ರೀ ಎಂ.ಪಿ. ಪ್ರಕಾಶ್: ನಾವೇ ಮಾಡುತ್ತಿದ್ದೇವೆ, ನಿಮ್ಮನ್ನು ನಾವು ಕರೆಯುತ್ತೇವೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಇರಾಕಿಗೂ ಇದಕ್ಕೂ ಸಂಬಂಧವಿಲ್ಲ.

ಶ್ರೀ ಕೆ. ಶ್ರೀನಿವಾಸಗೌಡ: ತೆಲುಗಿನಲ್ಲೊಂದು ಗಾದೆ ಇದೆ, ನೀ ಬೆಮ್ಮೆಸೂಚಿನ ಬೆಮ್ಮೆತೀರೆ ಅಂತ, ಪಾಪ ನೀವು ಬೀಳುವಂತಹ ಶ್ರಮ ಆ ಬೆಮೆ ಇವರೆಲ್ಲಾ ತೀರಿಸಿಕೊಳ್ಳುತ್ತಿದ್ದಾರೆ ಅನ್ನುವುದು ನಮ್ಮದು ಅಷ್ಟೇ. ತೆಲುಗು ನಿಮಗೆ ಅರ್ಥವಾಗುತ್ತದೆ, ಆದ್ದರಿಂದ ಹೇಳುತ್ತಿದ್ದೇನೆ. ನಿಮಗೆ ಆ ಭ್ರಮೆ ತೀರಿಲ್ಲ ಅಂತ ನಾನಂತೂ ತಿಳಿದುಕೊಂಡಿದ್ದೇನೆ.

ಶ್ರೀ ಎಂ.ಪಿ. ಪ್ರಕಾಶ್: ತಾವು ನನ್ನ ಬಗ್ಗೆ ಇಷ್ಟು ಅನುಕಂಪ ತೋರಿಸಿದ್ದಕ್ಕಾಗಿ ಬಹಳ ಧನ್ಯವಾದಗಳನ್ನು ಹೇಳುತ್ತೇನೆ.

ಶ್ರೀ ಎನ್. ಚಲುವರಾಯಸ್ವಾಮಿ (ಸಾರಿಗೆ ಸಚಿವರು): ನಿಮ್ಮ ಅನುಕಂಪವನ್ನು ಅವರು ಬಯಸಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಆದರೆ ಅದರ ಕರುಣಾ ಜನಕಸ್ಥಿತಿ ನೋಡಿ ನಮಗೆ ಕರುಣೆ ಬರುತ್ತಿದೆ.

Sri R. Roshan Beig: Sir, somehow you are not in your elements Mr. M.P. Prakash is not in his elements.

ಶ್ರೀ ಎಂ.ಪಿ. ಪ್ರಕಾಶ್: ಇಲ್ಲ ಹಾಗೆ ನೀವು ಅಂದುಕೊಳ್ಳಬಹುದು. ನಿಮ್ಮ ಈ ಎಲ್ಲಾ ಅನುಕಂಪಗಳು ಎಷ್ಟು ಕೃತ್ರಿಮವಾಗಿದೆ ಎಂದು ನಾನು ಬಲ್ಲೆ. ಮಾನ್ಯ ವಾಟಾಳ್ ನಾಗರಾಜ್, ಶ್ರೀರಾಮರೆಡ್ಡಿ, ಮಾಧುಸ್ವಾಮಿಯವರು ನನ್ನ ಬಗ್ಗೆ ಅನುಕಂಪ ತೋರಿಸಿದರೆ ಹೇಗೆ? ಮಾನ್ಯ ಸಿದ್ದರಾಮಯ್ಯನವರಿಗೆ ತೋರಿಸಿದರೆ ಅದನ್ನು ನಾನು ಒಪ್ಪುತ್ತೇನೆ. ಉಳಿದಂತಹ ನನ್ನ ಗೆಳೆಯರು ಏನು ಅನುಕಂಪ ತೋರುತ್ತಿದ್ದಾರೆ ಅದು ಸ್ವಾರ್ಥಪ್ರೇರಿತವಾದದ್ದು.

ಶ್ರೀ ಸಿದ್ದರಾಮಯ್ಯ: ಮಾನ್ಯ ಪ್ರಕಾಶ್‌ರವರು you are arguing a during case. you are defending a mistake committed by the government securare arguing awering case.

ಶ್ರೀ ವಾಟಾಳ್ ನಾಗರಾಜ್: ಮಹಾಭಾರತದಲ್ಲಿ ಕರ್ಣನ ಪರಿಸ್ಥಿತಿ ಏನಾಯಿತು ಅದೆ ನಿಮಗೂ ಸಿದ್ದರಾಮಯ್ಯನವರಿಗೂ ಆಗಿರತಕ್ಕ ಪರಿಸ್ಥಿತಿ. ಆದರೂ ಇನ್ನೂ ನೀವು ನಂಬಿ ಕೂತಿದ್ದೀರಿ. ವಜ್ರಕವಚ ಹೋಯಿತು. ಎಲ್ಲಾ ಹೋಗಿದೆ. ಆದರೂ ನಂಬುತ್ತಿದ್ದೀರಿ.

ಅಧ್ಯಕ್ಷರು: ಆಯ್ತು.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ನಿಮ್ಮ ಪರಿಸ್ಥಿತೀನೂ ಅದೇ; ನಾಳೆ ನಿಮಗೆ ಆಧಾರ ಕೊಟ್ಟು ಹೇಳುತ್ತೇವೆ. ಕೃಷ್ಣನ ಪರಿಸ್ಥಿತಿನೂ ಅದೇ.

(ಗೊಂದಲ)

ಅಧ್ಯಕ್ಷರು: ಯಾರ್‍ಯಾರ ಪರಿಸ್ಥಿತಿ ಏನೆಂದು ನಿರ್ಧಾರಿತವಾಗಿದೆ, ಆದ್ದರಿಂದ ಏಕೆ ಮಾತನಾಡಿ ಅಡಚಣೆ ಮಾಡುವಿರಿ?

ಶ್ರೀ ಎನ್. ಚಲುವರಾಯಸ್ವಾಮಿ: ಶಕುನಿ ಪಾತ್ರಧಾರಿ ಪರಿಸ್ಥಿತಿ ಏನಾಯಿತು?

ಶ್ರೀ ಎಂ.ಪಿ. ಪ್ರಕಾಶ್: ಮಾನ್ಯ ಅಧ್ಯಕ್ಷರೇ, ಇವತ್ತು ಪ್ರಸ್ತುತ ಅಲ್ಲದಿದ್ದರೂ ಮಾನ್ಯ ರಮೇಶ್‌ಕುಮಾರ್ ಅವತ್ತು ಮಾತನಾಡುವಾಗ ಪಿತೃವಾಕ್ಯ ಪರಿಪಾಲನೆಗಾಗಿ ಮಾಡಬೇಕಾಯಿತು ಎಂದು ದಶರಥನ ಉದಾಹರಣೆ ಕೊಟ್ಟು ಹೇಳಿದ್ದರು. ನಾನು ಮೂಲ ರಾಮಾಯಣವನ್ನು ತರಿಸಿ ಓದಿದೆ. ಮತ್ತೂರು ಕೃಷ್ಣಮೂರ್ತಿಯವರ ಜತೆಗೆ ಕೂಡ ಮಾತನಾಡಿದೆ. ಮೂಲ ರಾಮಾಯಣದಲ್ಲಿ ರಾಮ ನಿನ್ನ ವಾಕ್ಯವನ್ನು ಪರಿಪಾಲನೆ ಮಾಡುವುದಕ್ಕಾಗಿ ನಾನು ಅರಣ್ಯಕ್ಕೆ ಹೋಗುತ್ತೇನೆ ಅಂತ ಮೂಲ ರಾಮಯಣದಲ್ಲಿ ಹೇಳುವುದಿಲ್ಲ. 'ಈ ಮುದಿ ವ್ಯಾಮೋಹಕ್ಕೆ ಒಳಗಾಗಿ ನಮ್ಮನ್ನು ಕಾಡಿಗೆ ಅಟ್ಟುತ್ತಿದ್ದೀಯಲ್ಲಾ. ಎಂದು ಹೇಳಿ ಪರಿತಪಿಸುತ್ತಾನೆ ಮೂಲದಲ್ಲಿ. ಆದ್ದರಿಂದ ಅದರ ವಿಚಾರವನ್ನು ನಾನು ಪ್ರಸ್ತಾಪಿಸಲು ಹೋಗುವುದಿಲ್ಲ.

ಶ್ರೀ ಕೆ.ಆರ್. ರಮೇಶ್‌ಕುಮಾರ್: ತಾವು ಮೂಲ ರಾಮಾಯಣದಿಂದ ಹೇಳಿದಿರಿ, ನಾನು ನನಗೆ ಗೊತ್ತಿದ್ದ ಮಾಮೂಲೀ ರಾಮಾಯಣದಿಂದ ಹೇಳಿದೆ. ಮಾನ್ಯ ಯಡಿಯೂರಪ್ಪನವರ ಶ್ರೀರಾಮ ಏನು ಹೇಳುತ್ತಾನೆ? ಅವನು ಮುದಿಯ ಅಂದನಾ?

ಶ್ರೀ ಎಂ.ಪಿ. ಪ್ರಕಾಶ್: ಕೋಲಾರದ ಇಬ್ಬರೂ ಸದಸ್ಯರು ಮಾನ್ಯ ಶ್ರೀರಾಮರೆಡ್ಡಿ ಮತ್ತು ಶ್ರೀನಿವಾಸಗೌಡರು ಎಲ್ಲಾ ಹೇಳಿದರು. ಇದಕ್ಕೆ ಡಿವಿಜಿಯವರು ಬಹಳ ಸುಂದರವಾದ ಮಾತು ಹೇಳುತ್ತಾರೆ. 'ಎದ್ದೆದ್ದು ಬೀಳುತಿಹೆ, ಗುದ್ದಾಡಿ ಸೋಲುತಿಹೆ, ಗದ್ದಲವ ತುಂಬಿ ಪ್ರಸಿದ್ಧನಾಗುತಿಹೆ; ಉದ್ಧರಿಸುವೆ ಜಗವನೆನ್ನುತಿಹೆ, ನಿನ್ನುದ್ಧಾರವೆಷ್ಟಾಯಿತೋ ಮಂಕುತಿಮ್ಮ' ಅಂತ. ಆದ್ದರಿಂದ

ಶ್ರೀರಾಮರೆಡ್ಡಿಯವರಾದರೂ ಅಲ್ಲೇ ಉಳಿದರು. ಶ್ರೀನಿವಾಸಗೌಡರೇ ನಮ್ಮ ಜತೆಗಿದ್ದಿರಿ, ಅಲ್ಲಿ ಹೋದಿರಿ, ಆದರೂ ನಿಮ್ಮ ಉದ್ಧಾರ ಎಷ್ಟಾಯಿತು? ಅದೇನೇ ಇರಲಿ ಅಧ್ಯಕ್ಷರೇ, ಇಲ್ಲಿ ಬಹಳ ಮುಖ್ಯವಾಗಿ ಪರಿಗಣಿಸಬೇಕಾಗಿರುವುದು 1974ರಲ್ಲಿ ಸುಪ್ರೀಂಕೋರ್ಟ್‌ನವರು ಒಂದು ತೀರ್ಮಾನ ಕೊಟ್ಟಿದೆ. ಆ ತೀರ್ಪಿನ ಪ್ರಕಾರವಾಗಿ ರಾಜ್ಯಪಾಲರಿಗೆ ಯಾವುದೇ ತರಹದ ವಿವೇಚನೆ ಡಿಸ್ಕ್ರಿಷನ್ ಎಂಬ ಪದ ಬಳಕೆ ಇಲ್ಲ. 175(1)ರ ಕೆಳಗೆ ಕ್ಯಾಬಿನೆಟ್ ನಿರ್ಣಯ ಮಾಡಿ ರಾಜ್ಯಪಾಲರು ಭಾಷಣ ಸದನಕ್ಕೆ ದಯಪಾಲಿಸಿರುತ್ತಾರೆ ಅಂತ ಮಾತು ನೀವು ಹೇಳಿದ್ದೀರಿ. ಮುಖ್ಯವಾಗಿರುವ ಉದ್ದೇಶ ಯಾವಾಗಲಾದರೂ ಎರಡೂ ಸದನಗಳಿದ್ದಾಗ ಇಂತಹ ಜಂಟಿ ಅಧಿವೇಶನ ಅಥವಾ ಒಂದು ಸದನವಿದ್ದಾಗ ಒಂದು ಕಡೆಗೆ ರಾಜ್ಯಪಾಲರು ಭಾಷಣ ಮಾಡಬೇಕು ಎಂಬ ಉದ್ದೇಶ ಏನು? ಆಶಯ ಏನು? ಸಂವಿಧಾನದಲ್ಲಿ ಆ ಕಲಂ ಸೇರಿಸಬೇಕಾದ ಅಗತ್ಯ ಸಂವಿಧಾನ ರಚನಕಾರರ ಮನಸ್ಥಿತಿ ಏನಿತ್ತು? ಮುಖ್ಯವಾಗಿರುವುದು ವರ್ಷದ ಪ್ರಾರಂಭದಲ್ಲಿ ಅಥವಾ ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದ ಸಂದರ್ಭದಲ್ಲಿ ತಮ್ಮ ಉದ್ದೇಶಗಳು ಕಾರ್ಯಕ್ರಮಗಳು ಮುಂದಿನ ದಿನಮಾನಗಳಲ್ಲಿ ತಾವು ತೋರಿಸಬೇಕಾಗಿರುವ ನಡವಳಿಕೆಗಳು ಅವುಗಳ ಅನುಷ್ಠಾನಕ್ಕೆ ಬೇಕಾಗಿರುವ ಎಲ್ಲಾ ಸಿದ್ಧತೆಗಳನ್ನು.....

ಶ್ರೀ ಸಿದ್ದರಾಮಯ್ಯ: ಸಾಮಾನ್ಯ ಚುನಾವಣೆ ಆದ ತಕ್ಷಣ ಬಂದ ಸರ್ಕಾರ ಅಂತ ಅಲ್ಲಿ ಹೇಳಿರುವುದು. ಜಂಟಿ ಅಧಿವೇಶನ ಕುರಿತು ರಾಜ್ಯಪಾಲರು ಭಾಷಣ ಮಾಡಬೇಕು ಅಂತ ಇರುವುದು.

ಶ್ರೀ ಎಂ.ಪಿ. ಪ್ರಕಾಶ್: ಇಲ್ಲ ಸಾಮಾನ್ಯ ಎಂಬ ಪದ ಬಳಸಿಲ್ಲ. 'At the commencement of the first session after each general election to the Legislative Assembly and at the commencement of the first session of each year, the Governor shall address the Legislative Assembly or, in the case of a State having a Legislative Council, both Houses assembled together and inform the Legislature of the causes of its summons.' 'Causes of its summons' is most important. ಯಾವ ಕಾರಣಕ್ಕಾಗಿ ನಾವು ಈ ಸದನ ಕರೆದಿದ್ದೇವೆ ನೂತನವಾಗಿ ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದ ಮೇಲೆ ನಾವು ಹಿಂದಿದ್ದ ಸರ್ಕಾರದಲ್ಲಿ ಜಾತ್ಯಾತೀತ ಜನತಾದಳ ಕಾಂಗ್ರೆಸ್‌ನೊಂದಿಗೆ ಸರ್ಕಾರ ಮಾಡಿದ್ದೆವು. ಅದರಮಟ್ಟಿಗೆ ಕನಿಷ್ಠ ಕಾರ್ಯಕ್ರಮಗಳನ್ನು ರೂಪಿಸಿದ್ದೆವು. ಆ ಕನಿಷ್ಠ ಕಾರ್ಯಕ್ರಮಗಳ ಆಧಾರದ ಮೇಲೆ ನಾವು ಹೊಸ ಸರ್ಕಾರ ನಡೆಸಿಕೊಂಡು ಹೋಗುತ್ತೇವೆ, ನಮ್ಮ ಆಯವ್ಯಯದಲ್ಲಿ ಇದನ್ನು ಪ್ರಕಟಗೊಳಿಸುತ್ತೇವೆ. ಅದಕ್ಕನುಗುಣವಾದ ಕಾನೂನನ್ನು ಮುಂದೆ ತರುತ್ತೇವೆ ಎಂಬ ಆಶಯವನ್ನು ಅವರು ವ್ಯಕ್ತಮಾಡಿದ್ದರು. ಆದಾದ ನಂತರ ನಡೆದಿರತಕ್ಕ ಘಟನೆಗಳು ನಿಮಗೆ ಗೊತ್ತಿದೆ. ಅದರ ನಂತರ ಜಾತ್ಯಾತೀತ ಜನತಾದಳ ಬಿಜೆಪಿಯೊಂದಿಗಿನ ಸಮ್ಮಿಶ್ರ ಸರ್ಕಾರ ರಚನೆಯಾಗಿದೆ. ಅವೆರಡೂ ಪಕ್ಷಗಳು ಮತ್ತೊಂದು ಕನಿಷ್ಠ ಕಾರ್ಯಕ್ರಮದ ಆಧಾರದ ಮೇಲೆ ತಮ್ಮ ಸರ್ಕಾರ ನಡೆಸಬೇಕಾಗುತ್ತದೆ. ಯಾವ್ಯಾವ ಉದ್ದೇಶಕ್ಕಾಗಿ ಯಾವ ಕಾನೂನು ತರಬೇಕು ಎಂದು ಪ್ರಸ್ತಾಪಿಸಬೇಕಾಗುತ್ತದೆ. ಮತ್ತು ಅದರ ಉದ್ದೇಶವನ್ನು ಹೇಳಿಕೊಳ್ಳಬೇಕಾಗುತ್ತದೆ–ಅದಕೆಲ್ಲಾ ಏಕೈಕ ಮಾರ್ಗ ಈ ಸರ್ಕಾರಕ್ಕಿದ್ದುದು ರಾಜ್ಯಪಾಲರ ಮೂಲಕ ಭಾಷಣ ಮಾಡಿ ಜನತೆಗೆ ಅದನ್ನು ಪ್ರಚಾರಪಡಿಸುವುದೇ ಆ ಒಂದು ಅವಕಾಶ, 175ರ ಕೆಳಗೆ. ಅದಕ್ಕಾಗಿಯೇ ಅವರು ತಮಗಿರುವ ಅಧಿಕಾರವನ್ನು ಪ್ರಸ್ತಾಪ ಮಾಡಿದಾಗ ರಾಜ್ಯಪಾಲರು ತಮ್ಮ

ಭಾಷಣದಲ್ಲಿ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಸಂವಿಧಾನದ 163ನ್ನು ತಾವೆಲ್ಲರೂ ದಯವಿಟ್ಟು ನೋಡಬೇಕು: 'Council of Ministers to aid and advice Governor-ಎನ್ನತಕ್ಕ ಮಾತನ್ನು ಹೇಳುತ್ತಾರೆ. ಅಮೆಂಡ್‌ಮೆಂಟ್ ಆ ಮೇಲೆ There shall be a Council of Ministers with the Chief Minister at the head to aid and advise the Governor in the exercise of his functions, except in so far as he is by or under this Constitution required to exercise his functions or any of them in his discretion.' ಆ ವಿವೇಚನೆಯನ್ನು ಯಾವಾಗ ಉಪಯೋಗಿಸಬೇಕು ಎಂಬುದು . . . . .

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾನ್ಯ ಪ್ರಕಾಶ್‌ರವರೇ ರಾಜ್ಯಪಾಲರ ಆಡಳಿತ ಇದ್ದಾಗ ಅನ್ವಯಿಸುವುದು ಅದು, ಸರ್ಕಾರ ಇದ್ದಾಗ ಅದನ್ನು ನೀವು ಅನ್ವಯಿಸಿದರೆ ಹೇಗೆ? ನೀವು ನಮಗೆಲ್ಲ ಮಾರ್ಗದರ್ಶನ ಮಾಡಬೇಕಾದವರು.

ಶ್ರೀ ಎಂ.ಪಿ. ಪ್ರಕಾಶ್: ಮಾನ್ಯ ಸದಸ್ಯರು ಏನಿದೆಯೆಂದು ನೋಡಬೇಕು. 'There shall be a Council of Ministers. ನಾನು ಮಾರ್ಗದರ್ಶನ ಕೊಡಲಿಕ್ಕೆ ತಯಾರಾಗಿದ್ದೇನೆ. ನನ್ನ ಮಾರ್ಗದರ್ಶನ ಕೂಡ ಸುಪ್ರೀಂ ಕೋರ್ಟಿನ ತೀರ್ಮಾನದ ಪ್ರಕಾರ ಹೋಗಬೇಕಾಗುತ್ತದೆ. ನನ್ನ ವೈಯಕ್ತಿಕ ಅಥವಾ ನಿಮ್ಮ ವೈಯಕ್ತಿಕ ಅಲ್ಲ. ಯಾವುದೇ ಹೈಕೋರ್ಟಿನವರು ಕೊಟ್ಟಿರುವ ತೀರ್ಮಾನಗಳನ್ನು ಅರ್ಥೈಸುವುದಕ್ಕೆ ಉಪಯೋಗಿಸುವುದಕ್ಕೆ ಬರುವುದಿಲ್ಲ. 1974 AIR 2199 Supreme Court case ನಲ್ಲಿ ಒಂದು ನಿರ್ಣಯವನ್ನು ಹೇಳುತ್ತಾರೆ. ಏನು ಹೇಳುತ್ತಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಯಾವ ಕೇಸು?

ಶ್ರೀ ಎಂ.ಪಿ. ಪ್ರಕಾಶ್: ಇದಕ್ಕೆ ಸಂಬಂಧಪಟ್ಟಿರುವುದೇ. ಓದುತ್ತೇನೆ. ಏಕೆ ಬಹಳ ಅವಸರದಲ್ಲಿದೀರಲ್ಲಾ. ಇದು ಬಹಳ ಮುಖ್ಯವಾಗಿರತಕ್ಕ ಮತ್ತು ಗಂಭೀರವಾಗಿರುವ ವಿಷಯವಾಗಿರುವುದರಿಂದ ಎಲ್ಲರೂ ಕೂಡ ಇದನ್ನು ಅರ್ಥಮಾಡಿಕೊಳ್ಳುವುದಕ್ಕೆ ಪ್ರಯತ್ನವನ್ನು ಮಾಡೋಣ. ಆದಷ್ಟು ಸತ್ಸಂಪ್ರದಾಯವನ್ನು ಸೃಷ್ಟಿಮಾಡುವುದಕ್ಕೆ ಪ್ರಯತ್ನವನ್ನು ಮಾಡೋಣ. ಅದಾದಮೇಲೆ ಮಾನ್ಯ ಸ್ಪೀಕರ್‌ರವರಿಗೆ ಅದು ಬಿಟ್ಟಿರತಕ್ಕದ್ದು. 'Our Constitution embodies generally, the Parliamentary or a Cabinet system of Government of the British model, both for the Union and the State. Under this system, the President is a Constitutional or a formal head of the Union and in exercise of his powers and functions conferred on him by or under the Constitution, on the Aid and Advice of the Council of Ministers. Article 103 is an exception to the aid and advice to the council of Ministers because it specifically provides that the President act only according to the opinion of the Election Commission.' And all that under Article 193 of the Constitution. "The aid and advice to be tendred.' The Governor, under the Cabinet system is a Constitutional or formal head of the State and he exercises all his powers and functins conferred on him by or

under the Constitution on the aid and advice to the Council of Ministers, where governor is required by or under Constitution to exercises his functions. The discretion concept is only under Article 103 of the Constitution. Otherwise, he shall and he is bound by the advise, tendered by the Council of Ministers. He is only a formal head of the State. Therefore, what that has been the new government under the dispensation of Sri KumaraSwamy, the Chief Minister, Cabinet has made, they prepared the address of the Governor. ಅದನ್ನು ಅವರು ರಾಜ್ಯಪಾಲರಿಗೆ ಕೊಟ್ಟು ವಂದನಾ ನಿರ್ಣಯವನ್ನು ಜಂಟಿ ಅಧಿವೇಶನದಲ್ಲಿ ನಮ್ಮ ನೂತನ ಸರ್ಕಾರ ಒಂದು ಉದ್ದೇಶಗಳ ಮೂಲಕ ನಮ್ಮ ಮುಂದಿನ ದಿನಮಾನಗಳಲ್ಲಿ ಸರ್ಕಾರವನ್ನು ನಡೆಸಿಕೊಂಡು ಹೋಗಬೇಕಾಗಿದೆ ಎಂದು ತಿಳಿಸಿರುವುದರಿಂದ ರಾಜ್ಯಪಾಲರಿಗೆ ಆ ಮಾತನ್ನು ಅವರು ಕೊಟ್ಟಿರುವುದರಿಂದ ಅದನ್ನು ಮೀರಿ ನಡೆಯುವುದಕ್ಕೆ ಅದಕ್ಕೆ ಅವಕಾಶವೇ ಇಲ್ಲ. ಆ ಕಾರಣಕ್ಕಾಗಿ ರಾಜ್ಯಪಾಲರು ಓದಲೇಬೇಕಾಗಿರತಕ್ಕ ಅನಿವಾರ್ಯತೆ ಅವರಿಗೆ ಇದೆ. ಅದಕ್ಕಿಂತಲೂ ಹೆಚ್ಚಾಗಿ, What is the spirit of the Constitution? ಅದನ್ನೂ ಕೂಡ ನಾವು ನೋಡಬೇಕಲ್ಲವೇ? ಹಾಗಾಗಿ ಅದನ್ನು ರಾಜ್ಯಸರ್ಕಾರ ರಾಜ್ಯಪಾಲರ ಮೂಲಕ ಅದನ್ನು ಮಾಡುತ್ತದೆ. ಕೇಂದ್ರಸರ್ಕಾರ ಅದನ್ನು ರಾಷ್ಟ್ರಪತಿಗಳ ಮೂಲಕ ಮಾಡುತ್ತಾರೆ. ಆ ಹಿನ್ನೆಲೆಯಲ್ಲಿ ತಾವೇನು ಹೇಳಿದ್ದೀರಿ, 175ರ ಕೆಳಗಡೆ ಚರ್ಚೆಯನ್ನು ಮಾಡಬಹುದೇ ವಿನಹಾ ವಂದನಾ ನಿರ್ಣಯವನ್ನು ಮಾಡುವುದಕ್ಕೆ ಅವಕಾಶ ಇಲ್ಲ ಎನ್ನುವ ಮಾತನ್ನು ತಾವು ಹೇಳುತ್ತೀರಿ. ಆದರೆ ರಾಜ್ಯಾಂಗದಲ್ಲೂ ವಂದನಾ ನಿರ್ಣಯವನ್ನು ಮಂಡಿಸಬಾರದೆಂದು ಹೇಳಿಲ್ಲ. You are entitled. ನಾನು ಒಪ್ಪಿಕೊಳ್ಳುತ್ತೇನೆ. ಅದಕ್ಕಾಗಿ ನಾನು ಮಾಡುವ ವಾದವನ್ನು ತಾವು ವಿತ್ತಂಡವಾದ ಎಂದು ಭಾವಿಸಿಕೊಳ್ಳಬಹುದು. ಇಲ್ಲವೆಂದು ನಾನು ಹೇಳುವುದಿಲ್ಲ. ಏಕೆಂದರೆ ಮಾನ್ಯ ರಮೇಶ್‌ಕುಮಾರ್‌ರವರು ನನ್ನನ್ನು ನೋಡಿ ನಗುತ್ತಿದ್ದಾರೆ.

Sri K.R. Rameshkumar: You are my dearest friend. ಅನೇಕ ವಿಷಯಗಳನ್ನು ನಿಮ್ಮ ಹತ್ತಿರ ನಾವು ತಿಳಿದುಕೊಂಡಿದ್ದೇನೆ. ನಿಮ್ಮ ಒಡನಾಟದಲ್ಲಿ ಎಲ್ಲವನ್ನೂ ಪಡೆದುಕೊಂಡಿದ್ದೇವೆ. ತಾವು ಮಾತನಾಡುತ್ತಿರುವುದನ್ನು ನೋಡಿ ನನಗೆ ಇಲ್ಲಿ ಕುಳಿತು ನಾವು ಕೇಳಬೇಕಾಗಿದೆಯಲ್ಲಾ ಎಂದು ನನಗೇ ನನ್ನನ್ನು ನೋಡಿ ನಗುತ್ತಿದ್ದೇನೆ.

ಶ್ರೀ ಎಂ.ಪಿ. ಪ್ರಕಾಶ್: ಮಾನ್ಯ ರಮೇಶ್‌ಕುಮಾರ್‌ರವರನ್ನು ನಾನು ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ. ಅವರು ನನ್ನ ಒಳ್ಳೆಯ ಸ್ನೇಹಿತರು. ಒಳ್ಳೆಯ ಸ್ನೇಹಿತರಿಂದಲೇ ಬಹಳ ಸಂದಿಗ್ಧ ಪರಿಸ್ಥಿತಿಗಳು ಉಂಟಾಗುತ್ತದೆ. ಜೀಸಸ್ ಒಂದು ಕಡೆ ಹೇಳುತ್ತಾನೆ: 'Oh, God take care of my enemies' and I will take care of your friends.'

Sri K.R. Rameshkumar: It is very un-charitable. You cannot put under that class. You are our well wisher.

ಶ್ರೀ ಎಂ.ಪಿ. ಪ್ರಕಾಶ್: ಆ ಪ್ರಶ್ನೆ ಇಲ್ಲಿ ಬರುವುದಿಲ್ಲ. ಆ ಕಾರಣಕ್ಕಾಗಿ ಇವತ್ತು ನಾನು ಇದರ ಬಗ್ಗೆ ಪ್ರಸ್ತಾಪವನ್ನು ಮಾಡುತ್ತಿದ್ದೇನೆ. ಇದನ್ನು ಅನಿವಾರ್ಯವಾಗಿ ರಾಜ್ಯಪಾಲರು ಮಾಡಲೇಬೇಕಾಗಿರತಕ್ಕಂಥದ್ದು. ಇಲ್ಲಿ ಆಗಿರುವ ಇಂಥದ್ದೇ ಒಂದು ವಿಷಯವನ್ನು ಹೇಳುತ್ತೇನೆ: Kaul and Shekdher ಪುಸ್ತಕದಲ್ಲಿ 'After the Prime Minister has replied to the debate, the amendments that had been moved are disposed on and the Motion of thanks put to the House. If during the course of his reply to the reply to the debate the Prime Minister announces the decision of the Council of Ministers to resign, the Motion of Thanks is declared infructuous and not porceeded with'. ಮತ್ತೆ ಫುಟ್‌ನೋಟ್‌ನಲ್ಲಿ ಕೂಡ ಹೇಳುತ್ತಾರೆ. 'On 6th March, 1991, while concluding his reply to Motion of Thanks on the President's Address to both the Houses of Parliament assembled together on 21 February, 1991, the Prime Minister informed that the Council of Ministers had decided to tender their resignation and that he would be meeting the President immediately to convey too him their decision. The Speaker, thereupon, observed that in view of the decision of the Council of Ministers to resign, the Motion of Thanks on the President's Address had become infructuous.' ಇದೆಲ್ಲಾ ಬರುತ್ತದೆ. ಅಲ್ಲಿ ವಂದನಾ ನಿರ್ಣಯವನ್ನು ಮಂಡಿಸಿ ಚರ್ಚೆಗೆ ಪ್ರಧಾನ ಮಂತ್ರಿಗಳು ಅದಕ್ಕೆ ಉತ್ತರವನ್ನು ಕೊಟ್ಟಿದ್ದಾರೆ. ಉತ್ತರ ಕೊಟ್ಟ ಸಂದರ್ಭದಲ್ಲಿ ಬಹುಮತ ಬಿದ್ದು ಹೋಗಿದೆ. ಅದಾದಮೇಲೆ ಸಚಿವ ಸಂಪುಟದಲ್ಲಿ ತೀರ್ಮಾನವನ್ನು ಮಾಡಿ ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಕೂಡಲೇ ರಾಷ್ಟ್ರಪತಿಗಳನ್ನು ಕಂಡು ನಮ್ಮ ಇಡೀ ಸಚಿವ ಸಂಪುಟದ ರಾಜೀನಾಮೆಯನ್ನು ನಾನು ಕೊಡುತ್ತಿದ್ದೇನೆ ಎನ್ನುವ ಮಾತನ್ನು ಆಡಿರತಕ್ಕಂಥದ್ದು 21ನೇ ಫೆಬ್ರವರಿ 91ರಲ್ಲಿ ಪ್ರಧಾನಮಂತ್ರಿಗಳು ಹೇಳಿದ ತಕ್ಷಣ ಸ್ಪೀಕರ್‌ರವರು ಇದು ಚರ್ಚೆಗೆ ಉಪಯೋಗಿಸಬಹುದು ಅಥವಾ ಇದು infructuous, ಬಿದ್ದುಹೋಯಿತು ಎನ್ನುವ ಮಾತನ್ನು ಉಪಯೋಗಿಸಿದ್ದಾರೆ. ಇಲ್ಲಿ ಬಂದಿರುವ ಸಮಸ್ಯೆ ಆ ದಿವಸ 19ನೇ ತಾರೀಖು ದಯಪಾಲಿಸಿರುವ ರಾಜ್ಯಪಾಲರ ಭಾಷಣ infructuous ಹೌದೋ ಅಲ್ಲವೋ ಎನ್ನುವುದನ್ನು ಸ್ಪೀಕರ್‌ರವರು ಹೇಳಬೇಕಾಗಿತ್ತು ಎಂದು ಹೇಳುತ್ತಾರೆ. ಇದರ ಬಗ್ಗೆ ಕೆಲವರು ವಾದವನ್ನು ಮಂಡಿಸಿದರು. ಆದದ್ದು ಇಷ್ಟೇ. ಸಂಬಂಧಪಟ್ಟ ವಿಷಯದಲ್ಲಿ ವಂದನಾ ನಿರ್ಣಯವನ್ನು ಮಂಡಿಸಲು ಯಾರೂ ಸದನದ ನಾಯಕರ ಜೊತೆ, ವಿರೋಧ ಪಕ್ಷದ ನಾಯಕರ ಜೊತೆ ಮತ್ತು ನಮ್ಮ ಬಿಎಸಿ ಕಮಿಟಿಯ ಮುಂದೆ ಇದರ ಬಗ್ಗೆ ಚರ್ಚೆ ಮಾಡಿ ಕಾಲಮಿತಿ ನಿರ್ಣಯವನ್ನು ಮಾಡಲಿಲ್ಲ. ಕಾಲಮಿತಿ ನಿರ್ಣಯ ಆಗದೇ ಇದ್ದುದರಿಂದ ವಂದನಾ ನಿರ್ಣಯ ಅದೂ ಕೂಡ ಮಂಡನೆಯಾಗಲಿಲ್ಲ. ಸತ್ಸಂಪ್ರದಾಯ ಇರುವ 176ನೇ ಕೆಳಗೆ ವಂದನಾ ನಿರ್ಣಯವನ್ನು ಮಂಡಿಸಬೇಕು. ಅದು ಮ್ಯಾಂಡೇಟರಿ. ರಾಜ್ಯಪಾಲರು ದಯಪಾಲಿಸಿರುವ ವಂದನಾ ನಿರ್ಣಯಕ್ಕೆ ಅಭಿನಂದನೆಯನ್ನು ಸಲ್ಲಿಸಬೇಕಾಗಿರುವುದು ಆದ್ಯಕರ್ತವ್ಯ.

ಶ್ರೀ ಬಸವರಾಜ ರಾಯರೆಡ್ಡಿ: ಅದು ಆಗಬಾರದು ಎನ್ನುವ ಉದ್ದೇಶಕ್ಕಾಗಿ ಇಲ್ಲಿ ಪ್ರೆಸಿಡೆಂಟ್‌ರವರು ಅಡ್ರೆಸ್ ಮಾಡಿದ್ದಾರೆ. ಸೇಮ್ ಬುಕ್‌ನಲ್ಲಿ ಶಕ್ದರ್ ಅಂಡ್ ಕೌಲ್‌ನಲ್ಲಿ 196 ರಲ್ಲಿ ಹೇಳುತ್ತಾರೆ. "President's Address, Messages and Communications to the House"-'During the year 1950 when the constitution came into force, three sessions of the Provisional Parliament were held,. It was felt that to have President's Address as many as three times in a year involved repetitions and expenditure of time on discussion of the Address'.
.....'Besides such a procedure involved some administrative difficulties. Hence, the Constitution was amended to provide for the President's Address only at the commencement of the first session after each general election to Lok Sabha and at the commencement of the first session of the year'.
ಅದಕ್ಕಾಗಿ ಸ್ಪಷ್ಟವಾಗಿ ಹೇಳಿದ್ದಾರೆ. ಸಾರ್ವತ್ರಿಕ ಚುನಾವಣೆ ಆದಂತಹ ಸಂದರ್ಭದಲ್ಲಿ ಗವರ್ನರ್ ಭಾಷಣ ಮಾಡಬಹುದು ಮತ್ತು ಹೊಸ ವರ್ಷದ ಪ್ರಾರಂಭದಲ್ಲಿ ಮಾಡಬಹುದು. ಈಗಾಗಲೇ ಹೊಸ ವರ್ಷದ ಪ್ರಾರಂಭದಲ್ಲಿ ಮಾನ್ಯ ರಾಜ್ಯಪಾಲರು ಭಾಷಣ ಮಾಡಿದ್ದಾರೆ. 19ರಂದು ಭಾಷಣ ಮಾಡಿದ್ದಾರೆ. ಆ ಭಾಷಣ ಸದನದ ಮುಂದೆ ಇರುವುದರಿಂದ ಮತ್ತೊಂದು ಸಾರಿ ವಂದನಾ ನಿರ್ಣಯವನ್ನು ಮಂಡನೆ ಮಾಡುವಂತಹ ಅವಶ್ಯಕತೆ ಇಲ್ಲ ಎಂದು ಕ್ಯಾಟಗರಿಕಲಿ ಕ್ಲಿಯರ್ ಆಗಿ ಹೇಳಿದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಒಂದೇ ಒಂದು ನಿಮಿಷ. ನೀವು ಏನು ಹೇಳಿದ್ದೀರಿ ಎಂದರೆ ವಂದನಾ ನಿರ್ಣಯವನ್ನು ಮಂಡಿಸಬಹುದು, ಅದರ ಮೇಲೆ ಚರ್ಚೆ ಮಾಡಬಹುದು ಎಂದು ಹೇಳಿದ್ದೀರಿ. ಆದರೆ ಮಾನ್ಯ ರಾಜ್ಯಪಾಲರು ಈಗಾಗಲೇ ಭಾಷಣ ಮಾಡಿದ್ದಾರೆ. ಆರ್ಟಿಕಲ್ 175(1)ರ ಅಡಿಯಲ್ಲಿ ಗೌರವಾನ್ವಿತ ಸದಸ್ಯರನ್ನು ಉದ್ದೇಶಿಸಿ ಭಾಷಣ ಮಾಡಬಹುದು ಎಂದು ಹೇಳಿದ್ದಾರೆ. ನೀವು ಏನು ಹೇಳಿದ್ದೀರಿ, ಎರಡನೇ ಸಲ ಭಾಷಣ ಮಾಡುವುದು ಸಂವಿಧಾನ ಬಾಹಿರ ಅಲ್ಲ ಎಂದು ಹೇಳಿದ್ದೀರಿ. ಆದರೆ 175(2) ಮತ್ತು 176(4)ರ ಪ್ಯಾರಾ ನೋಡಬೇಕು. ಪ್ಯಾರಾ 175(2) ಆರ್ಟಿಕಲ್‌ನಲ್ಲಿ ಏನು ಹೇಳಿದ್ದಾರೆ ಎಂದರೆ, The Governor may send messages to the House or Houses of the Legislative State, whether with respect to a Bill then pending in the Legislative or otherwise, and a House to which any message is so sent shall with all convenient despatch consider any matter required by the message to be taken into consideration. Contrary to that, in 176(2): Provisions shall be made by the rules regulating the procedure of the House or either House for the allotment of time for discussion of the matters referred in such address. This is the difference between 175(2) & 176(2). Therefore, in relation with the 175(1),

Governor is having every right to address the House and give the message and House also is having a right to discussed on it. But according to 176(2), it cannot be Motion of Thanks. This is my contention. That is why, I am telling, it is unconstitutional. It is illegal.

ಅಧ್ಯಕ್ಷರು: ನೀವು ಬಹಳ ಸಾರಿ ಹೇಳಿದ್ದೀರಿ. ಅವರು ಮುಗಿಸಲಿ.

Sri M.P. Prakash: You want to speak or you wanted me to speak. I am only telling about the provisions of Constitution. ಈ ರೀತಿಯಾಗಿ ಒಬ್ಬರು ಹೇಳಿದ್ದನೇ ಮತ್ತೊಬ್ಬರೂ ಅರ್ಥೈಸಿಕೊಳ್ಳಬೇಕು ಎಂದು ಇಲ್ಲ. ನಿಮ್ಮ ಅಭಿಪ್ರಾಯವನ್ನು ನೀವು ಹೇಳಬಹುದು. ಅದನ್ನೇ ಸರಿಯಾದುದು ಎಂದು ಎಲ್ಲರೂ ಅರ್ಥೈಸಿಕೊಳ್ಳಬೇಕು ಎಂದಿಲ್ಲವಲ್ಲಾ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಸ್ಪಷ್ಟವಾಗಿ ಹೇಳಿದೆ.

ಶ್ರೀ ಎಂ.ಪಿ. ಪ್ರಕಾಶ್: ಮಾನ್ಯ ಅಧ್ಯಕ್ಷರೆ, It is categorically clear in Article 176(2). ಆದರೆ ಭಾಷಣ ಮತ್ತೆ ಮಾಡುವುದು ಇನ್‌ಫ್ರಕ್ಚ್ಯುಯಸ್ ಅಲ್ಲ. ರಾಜ್ಯಪಾಲರ ಭಾಷಣದ ಮೇಲೆ ವಂದನಾ ನಿರ್ಣಯ ಮಾಡಬಹುದು. ತಾವು ಮತ್ತೆ ಭಾಷಣ ಮಾಡುವ ಹಾಗೆ ಇಲ್ಲ ಎಂದು ತಮ್ಮ ವಾದ ಮಂಡಿಸಿದ್ದೀರಿ. ನಾವು ನೀವು ಮಾತನಾಡಿದ್ದೆಲ್ಲವನ್ನೂ ಕೂಡ ಕೇಳಿ ಮಾನ್ಯ ಸಭಾಧ್ಯಕ್ಷರು ನಿರ್ಣಯ ಮಾಡುತ್ತಾರೆ. ಈ ಸಂದರ್ಭದಲ್ಲಿ ಅವರು ಹೇಳತಕ್ಕದ್ದನ್ನು ಅವರು ಹೇಳಲಿ. ನಾವು ಹೇಳತಕ್ಕದ್ದನ್ನು ನಾವು ಹೇಳುತ್ತೇವೆ. ಆದರೆ ವಂದನಾ ನಿರ್ಣಯವನ್ನು ಮತ್ತೆ ಮಂಡನೆ ಮಾಡಬಾರದು ಎನ್ನತಕ್ಕಂದ್ದರ ಬಗ್ಗೆ ಸ್ಪಷ್ಟವಾಗಿ ಹೇಳಿಲ್ಲ. ಯಾವಾಗ ರಾಜ್ಯಾಂಗ ಮೌನ ಆಗಿರುವುದರಿಂದ ಆಗ ನಾವು ವಂದನಾ ನಿರ್ಣಯವನ್ನು ಮಂಡಿಸುವುದರಿಂದ ಹೊಸ ಸಂಪ್ರದಾಯ ಆಗುತ್ತದೆ, ಅದನ್ನು ನಿಷೇಧ ಮಾಡಬೇಕು–ಎಂಬ ವಿಚಾರದ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಬೇರೆಯವರೂ ಕೂಡ ಪ್ರಸ್ತಾಪ ಮಾಡಿದ್ದೀರಿ. ಯಾವುದಾದರೂ ಒಂದು ಹೊಸ ಸಂಪ್ರದಾಯ ಮಾಡಿದರೂ ಅದು ಯಾವ ಸಂದರ್ಭದಲ್ಲಿ ಪ್ರಾರಂಭ ಆಗಿದೆ ಎಂದು ವಿಚಾರ ಮಾಡಬೇಕು. ನಮ್ಮ ಕರ್ನಾಟಕದಲ್ಲಿ ಮಂಡನೆ ಮಾಡುವಾಗ ಒಂದು ಸಂದಿಗ್ಧ ಪರಿಸ್ಥಿತಿಯಲ್ಲಿ ಆದರೂ ಕೂಡ ನಿರ್ಣಯವನ್ನು ಅಂಗೀಕರಿಸಿ ಮುಂದೆ ಸಂವಿಧಾನದಲ್ಲಿ ತಿದ್ದುಪಡಿ ಮಾಡುವ ಸ್ಪೀಕರ್ ಅವರು ನಿರ್ಣಯ ಮಾಡಿದ್ದು ಮುಂದೆ ತಿದ್ದುಪಡಿ ಆಗಬಹುದು. ಅವಶ್ಯಕತೆ ಇದೆ. ಸ್ಪೀಕರ್ ಅವರು ನಿರ್ಣಯ ಮಾಡಿದ್ದು ಮುಂದೆ ತಿದ್ದುಪಡಿ ಆಗಬಹುದು. ಇಂತಹ ಒಂದು ಸನ್ನಿವೇಶ ಉದ್ಭವ ಆಗುತ್ತದೆ ಎಂದು ಬಹುಶಃ ಯಾರೂ ಭಾವಿಸಿರಲಿಲ್ಲ. ಆ ಕಾರಣದಿಂದ ಮಾನ್ಯ ರಾಯರೆಡ್ಡಿಯವರು ಏನು ಪ್ರಸ್ತಾಪ ಮಾಡಿದ್ದಾರೆ, ಚುನಾವಣೆ ಆದ ನಂತರ ಗೌರವಾನ್ವಿತ ರಾಷ್ಟ್ರಪತಿಯವರು ಪಾರ್ಲಿಮೆಂಟನ್ನು ಉದ್ದೇಶಿಸಿ, ರಾಜ್ಯದಲ್ಲಿ ಮಾನ್ಯ ರಾಜ್ಯಪಾಲರು ವಿಧಾನಸಭೆಯನ್ನು ಉದ್ದೇಶಿಸಿ ಅಥವಾ ಹೊಸ ಸರ್ಕಾರ ಬಂದ ಮೇಲೆ ವರ್ಷದ ಪ್ರಾರಂಭದಲ್ಲಿ ಭಾಷಣ ಮಾಡಬಹುದು ಎಂದು ಹೇಳಿ ತಮ್ಮ ವಾದವನ್ನು ಮಂಡಿಸಿ, ಈಗ ಚರ್ಚೆ ಮಾಡುವುದರಿಂದ ಅಸಿಂಧು ಆಗುತ್ತದೆ ಎನ್ನುವ ಪ್ರಶ್ನೆ ಏನು ಹೇಳಿದರು ಅದು ಉದ್ಭವ ಆಗುವುದಿಲ್ಲ. ಅದು ಇನ್‌ಫ್ರಕ್ಚ್ಯುಯಸ್ ಸಹ ಆಗುವುದಿಲ್ಲ. ಹಿಂದಿನ

ಸಂದರ್ಭದಲ್ಲಿ ಅಂದರೆ ಕಾಂಗ್ರೆಸ್–ಜೆಡಿಎಸ್ ಸಮ್ಮಿಶ್ರ ಸರ್ಕಾರ ಇದ್ದಾಗ ರಾಜ್ಯಪಾಲರ ಭಾಷಣ ಆಗಿದ್ದರೂ ಆಗ ವಂದನಾ ನಿರ್ಣಯ ಮಂಡಿಸಿರಲಿಲ್ಲ. ರಾಜ್ಯಪಾಲರ ಭಾಷಣದ ಮೇಲೆ ವಂದನಾ ನಿರ್ಣಯ ಆಗಿದ್ದರೆ ಅದು ಸದನದ ಸ್ವತ್ತು ಆಗಿರುತ್ತಿತ್ತು. ಆಗ ಮಂಡನೆ ಆಗಿಲ್ಲದಿರುವುದನ್ನು ಪರಿಗಣಿಸಿ ಈಗ ಹೊಸ ಬಿಜೆಪಿ–ಜೆಡಿಎಸ್ ಸಮ್ಮಿಶ್ರ ಸರ್ಕಾರ ಅಸ್ತಿತ್ವಕ್ಕೆ ಬಂದಿದೆ. ಅವರು ವಂದನಾ ನಿರ್ಣಯ ಮಂಡಿಸಿದ್ದಾರೆ.

ಶ್ರೀ ಬಸವರಾಜ ರಾಯರೆಡ್ಡಿ: ನಾನು ಹೇಳುತ್ತಿರುವುದು ಏನು ಅಂದರೆ ಜನವರಿ 19ರಂದು ಮಾನ್ಯ ರಾಜ್ಯಪಾಲರು ಭಾಷಣ ಮಾಡಿದ್ದಾರೆ. ಭಾಷಣವನ್ನು ಮಂಡಿಸಿಯಾದ ಮೇಲೆ ಅದು ಸದನದ ಪ್ರಾಪರ್ಟಿ ಆಗುತ್ತದೆ. ಕ್ಯಾಟಗರಿಕಲಿ ಆರ್ಟಿಕಲ್ 176 ಸೆಕ್ಷನ್ 2ರಲ್ಲಿ ಕ್ಲಿಯರ್ ಆಗಿ ಇದೆ. ಅವರು ಭಾಷಣವನ್ನು ಮಂಡಿಸಿದಾದ ಮೇಲೆ ಅದರ ಬಗ್ಗೆ ಗೌರವಾನ್ವಿತ ಸದಸ್ಯರುಗಳು ಮಾತನಾಡಲು ಅಧ್ಯಕ್ಷರು ಕಾಲವನ್ನು ನಿಗದಿ ಮಾಡಬೇಕು. ಅದು ಮ್ಯಾಂಡೆಟರಿ. ಗವರ್ನರ್ ಅಡ್ರೆಸ್ ಆದಮೇಲೆ ಅದರ ಬಗ್ಗೆ ಕಾಲವನ್ನು ನಿಗದಿ ಮಾಡಿ ಅದರ ಬಗ್ಗೆ ಚರ್ಚೆ ಆಗಬೇಕು, ಇಲ್ಲದೇ ಹೋದರೆ ಅದು ಪ್ರಿವಿಲೇಜ್ ಆಗುತ್ತದೆ.

ಶ್ರೀ ಎಂ.ಪಿ. ಪ್ರಕಾಶ್: ಯಾರ ಮೇಲೆ ಪ್ರಿವಿಲೇಜ್ ಆಗುತ್ತದೆ? ಮಾನ್ಯ ರಮೇಶ್ ಕುಮಾರ್ ಗೈಡ್ ಮಾಡಬಹುದು. ಯಾರ ವಿರುದ್ಧ ಪ್ರಿವಿಲೇಜ್ ಬರುತ್ತದೆ? ಹಕ್ಕುಚ್ಯುತಿ ಪ್ರಶ್ನೆ ಇಲ್ಲಿ ಬರುವುದಿಲ್ಲ. ಇಲ್ಲಿ ಒಂದು ಸನ್ನಿವೇಶ ಸೃಷ್ಟಿ ಆಯಿತು? ಯಾವ ಕಾರಣದಿಂದ ಮಾನ್ಯ ರಾಜ್ಯಪಾಲರು ವಿಶ್ವಾಸಮತವನ್ನು ಸಾಬೀತು ಮಾಡಿ ಕಳಿಸಿಕೊಡಿ ಎಂದು ಆದೇಶ ಮಾಡಿದ್ದರು? ವಿಶ್ವಾಸ ಮತವನ್ನು ಸಾಬೀತುಪಡಿಸುವ ಸಂದರ್ಭದಲ್ಲಿ ಗೊಂದಲದ ಪರಿಸ್ಥಿತಿ ನಿರ್ಮಾಣ ಆಗಿ ಆ ಸಂದರ್ಭದಲ್ಲಿ ಸಂದಿಗ್ಧ ವಾತಾವರಣ ಏನು ನಿರ್ಮಾಣ ಆಯಿತು ಅದರ ವರದಿಯನ್ನು ಮಾನ್ಯ ರಾಜ್ಯಪಾಲರಿಗೆ ಕಳಿಸಿ ಕೊಡಬೇಕು. ಬಿಜೆಪಿ–ಜೆಡಿಎಸ್ ಮೈತ್ರಿಕೂಟ ಬಹುಮತವನ್ನು ಸಾಬೀತು ಪಡಿಸುವಾಗ ಸಹಜ ಪರಿಸ್ಥಿತಿ ಇತ್ತು. ಸರಳವಾದ ರೀತಿಯಲ್ಲಿ ಕಾರ್ಯಕಲಾಪ ನಡೆಯಿತು. ಆದರೆ ಅಸಹಜವಾದ ಪರಿಸ್ಥಿತಿ ಸೃಷ್ಟಿ ನಿರ್ಮಾಣ ಆದಂತಹ ಸಂದರ್ಭದಲ್ಲಿ ಸದನವನ್ನು ಅನಿರ್ದಿಷ್ಟ ಕಾಲದವರೆಗೆ ಮುಂದೂಡಿದಾಗ ಚರ್ಚೆ ಮಾಡತಕ್ಕ ಪ್ರಶ್ನೆ ಉದ್ಭವ ಆಗುವುದಿಲ್ಲ. ಈಗ ರಾಜ್ಯಪಾಲರ ಭಾಷಣದ ಮೇಲೆ ವಂದನಾ ನಿರ್ಣಯ ಮಾಡಬಹುದು ಎಂಬ ಪ್ರಸ್ತಾಪವನ್ನು ಮಾನ್ಯ ಹೆಚ್.ಎಸ್. ಮಹದೇವಪ್ರಸಾದ್‌ರವರು ಮಂಡಿಸಿದ್ದಾರೆ. ನಿಯಮಾವಳಿಗಳ ಪ್ರಕಾರ ಚರ್ಚೆ ಮಾಡಬೇಕು. ಆದರೆ ನೀವು ವಂದನಾ ನಿರ್ಣಯವನ್ನು ಮಂಡಿಸಬಾರದು ಎಂದು ಹೇಳತಕ್ಕ ಮಾತು, ನಿಮ್ಮ ವಾದ ಸಾಧುವಲ್ಲ. ಆರ್ಟಿಕಲ್ 175 ಹಾಗೂ 176ರ ಪ್ಯಾರಾ 2ರಲ್ಲಿ ವಂದನಾ ನಿರ್ಣಯವನ್ನು ಮಾಡಬಾರದು ಎಂಬ ಬಗ್ಗೆ ಸ್ಪಷ್ಟವಾದ ಮಾತುಗಳಲ್ಲಿ ನಿಷೇಧವನ್ನು ಹೇರಿಲ್ಲ. It has not been barred at all. ಆ ಕಾರಣಕ್ಕಾಗಿ ನಾವು ಈ ವಿಚಾರಗಳಲ್ಲಿ ವಂದನಾ ನಿರ್ಣಯವನ್ನು ಮಾಡುವುದಕ್ಕೆ ಸಾಧ್ಯತೆ ಇದೆ. ಮತ್ತು ಈಗ ಏನು ಒರಿಸ್ಸಾ ಮತ್ತು ಪಶ್ಚಿಮ ಬಂಗಾಳ ರಾಜ್ಯಗಳ ತೀರ್ಮಾನಗಳನ್ನು ಹೇಳಿದರು, ಆ ತೀರ್ಮಾನಗಳು ನೇರವಾಗಿ ಈ ವಿಚಾರಗಳಿಗೆ ಇವೊತ್ತು ಏನು ಇಲ್ಲಿ ಚರ್ಚೆಯಾಗುತ್ತಿದೆ, ಈ ವಿಚಾರಕ್ಕೆ ಸಂಬಂಧಪಟ್ಟಿರತಕ್ಕ ವಿಚಾರಗಳಲ್ಲ. ನಮ್ಮ ಹತ್ತಿರ ಅದು ಇದೆ. ಅದನ್ನು ತಮಗೆ ಕಳುಹಿಸಿಕೊಡುತ್ತೇನೆ ಮತ್ತು ಅದೇ ರೀತಿಯಾಗಿ ನಮಗೆ ಅವೊತ್ತಿನ ದಿವಸ ಆಗಿರತಕ್ಕಂಥಾದ್ದಲ್ಲ. ಕಾರಣವನ್ನು ತಾವು ನೋಡಬಹುದು. ಯಾವುದೇ ಒಂದು ವಿಚಾರವನ್ನು ಚರ್ಚೆ ಮಾಡಬೇಕಾದ ಸಂದರ್ಭ ಬಂದಾಗ ಸಹಜ ಸ್ಥಿತಿ

ಇರಬೇಕಾಗಿತ್ತು. ಆದರೆ, ಸಹಜ ಸ್ಥಿತಿ ಇರಲಿಲ್ಲ. ಈಗ ಸಹಜ ಸ್ಥಿತಿ ಇಲ್ಲದಿರುವ ಕಾರಣಕ್ಕಾಗಿ 175(1)ರ ಕೆಳಗೆ ನಾವು ಹೊಸ ಸರ್ಕಾರದ ಕಾರ್ಯಕ್ರಮಗಳನ್ನು ಜನತೆಗೆ ಪಾರದರ್ಶಕವಾಗಿ ಮಂಡಿಸಬೇಕೆಂಬ ಕಾರಣಕ್ಕಾಗಿ 175(1)ರ ಕೆಳಗೆ ಈ ಭಾಷಣವನ್ನು ನಾನು ಉಭಯ ಸದನಗಳಿಗೆ ದಯಪಾಲಿಸುತ್ತಿದ್ದೇನೆ ಎನ್ನುವ ಮಾತನ್ನು ಸಾಧಾರಣವಾಗಿ ರಾಜ್ಯಪಾಲರು ಭಾಷಣದಲ್ಲಿ ವ್ಯಕ್ತ ಮಾಡಬೇಕು. ಅದಕ್ಕೆ ಏನು ಕಾರ್ಯಕ್ರಮಗಳು ಇರುತ್ತದೋ, ಅಷ್ಟೇ ಇರುತ್ತದೆ. ಆದರೆ, ಇಲ್ಲಿ ಅಸ್ಪಷ್ಟತೆ, ಲೀಗಲ್ ಎನ್ನುವ ಕಾರಣಕ್ಕಾಗಿ ರಾಜ್ಯಪಾಲರು ಆ ವಿಷಯವನ್ನು ಸ್ಪಷ್ಟವಾಗಿ ತಮ್ಮಲ್ಲಿ ಪ್ರಸ್ತಾಪ ಮಾಡಿದ್ದಾರೆ. ಕೌಲ್ ಅಂಡ್ ಶಕ್ದರ್‌ರವರು ಪ್ರಸ್ತಾಪ ಮಾಡಿರುವ ವಿಷಯ 1991ನೇ ಇಸವಿಯಲ್ಲಿ ನಮ್ಮಲ್ಲಾಗಿರುವ ಒಂದು ನಿರ್ಣಯದ ಹಿನ್ನೆಲೆಯಲ್ಲಿ Governor's address stands infructuous. ಆ ಕಾರಣಕ್ಕಾಗಿ ಈಗ ಏನು ನಮ್ಮ ಮುಂದಿದೆ, ಇದರ ಬಗ್ಗೆ ವಂದನಾ ನಿರ್ಣಯ ಮಾಡುವುದಕ್ಕೆ , ಆ ಕುರಿತಾದ ಪ್ರಸ್ತಾವ ಮಂಡಿಸುವುದಕ್ಕೆ ತಾವು ಅವಕಾಶ ಕಲ್ಪಿಸಿಕೊಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸಿದ್ದರಾಮಯ್ಯ(ಚಾಮುಂಡೇಶ್ವರಿ): ಮಾನ್ಯ ಅಧ್ಯಕ್ಷರೆ, ಮಾನ್ಯ ಪ್ರಕಾಶ್‌ರವರು ಮಾತನಾಡುತ್ತಾ, ವಂದನಾ ನಿರ್ಣಯವನ್ನು ಇವೊತ್ತು ಏನು ಸರ್ಕಾರ ಮಂಡಿಸುತ್ತಿದೆ, ಮಾನ್ಯ ಸದಸ್ಯರಾದ ಮಹದೇವಪ್ರಸಾದ್‌ರವರು ಮಂಡಿಸುತ್ತಿರುವ ಪ್ರಸ್ತಾವದ ಸೂಚನೆ ಇವೊತ್ತು ಏನು ಅಜೆಂಡಾದಲ್ಲಿದೆ, ಅದು ಸಿಂಧುವಾಗುತ್ತದೆ, ರಾಜ್ಯಾಂಗಬದ್ಧವಾಗಿದೆ ಎಂದು ಅವರು ತಮ್ಮ ವಾದವನ್ನು ಮಂಡಿಸಿದ್ದಾರೆ. ಇಲ್ಲಿ ಬಹಳ ಸೀಮಿತವಾಗಿ ವಿಚಾರ ತಮ್ಮ ಮುಂದಿದೆ. ನಾವೆಲ್ಲರೂ ಪ್ರಸ್ತಾಪ ಮಾಡಿರುವಂಥಾದ್ದು ಬಹಳ ಸೀಮಿತವಾಗಿದೆ. ರಾಜ್ಯಪಾಲರಿಗೆ ಆರ್ಟಿಕಲ್ 176ರ ಕೆಳಗೆ ಭಾಷಣ ಮಾಡುವುದಕ್ಕೆ ಅವಕಾಶ ಇದೆ. ಆ ಭಾಷಣ ಮಾಡುವಾಗ ಸರ್ಕಾರದ ನೀತಿ, ಕಾರ್ಯಕ್ರಮಗಳನ್ನು ಸದನಕ್ಕೆ ಮತ್ತು ರಾಜ್ಯಕ್ಕೆ ತಿಳಿಸುವುದನ್ನು ಮಾಡುತ್ತಾರೆ. ಮತ್ತು ನೀವು ಕಾಲ ನಿಗದಿ ಮಾಡಿ ಚರ್ಚೆಗೆ ಅವಕಾಶ ಮಾಡಿಕೊಡಬೇಕಾಗುತ್ತದೆ. ಆ ಚರ್ಚೆ ಹೇಗೆ ನಡೆಯಬೇಕೆಂಬುದಕ್ಕೋಸ್ಕರ ಒಂದು ಪ್ರಾವಿಷನ್ ಮಾಡಿ ನಿಯಮಾವಳಿ ಮಾಡಬೇಕೆಂಬುದನ್ನು ಬಹಳ ಸ್ಪಷ್ಟವಾಗಿ ಅವರು ಹೇಳಿದ್ದಾರೆ. ಈಗ ಆರ್ಟಿಕಲ್ 176 ಕ್ಲಾಸ್ 1ರಲ್ಲಿ ಹೇಳಿದ್ದಾರೆ. ಅದಕ್ಕೋಸ್ಕರ, 19ರಿಂದ 27ರವರೆಗೆ ಈ ಸದನದ ನಿಯಾಮಾವಳಿ ಮಾಡಿರುವುದೇ ಆ ಕಾರಣಕ್ಕೋಸ್ಕರ. ಈಗ ಇವರು 19ನೇ ತಾರೀಖು ಜನವರಿಯಲ್ಲಿ ರಾಜ್ಯಪಾಲರು 176 ಕ್ಲಾಸ್ 1ರ ಕೆಳಗೆ ಜಂಟಿ ಸದನವನ್ನು ಉದ್ದೇಶಿಸಿ ಭಾಷಣ ಮಾಡಿದ್ದಾರೆ. ಅದು infructuous ಆಗಿಲ್ಲ. Infructuous ಆಗಿದೆಯೆಂದು ನೀವು ಹೇಳಿಲ್ಲ, ಯಾರೂ ಹೇಳಿಲ್ಲ. ಅದು ಈ ಸದನದ Property ಆಗಿದೆ. ಅದರ ಬಗ್ಗೆ Motion of Thanks ಮೂವ್ ಮಾಡುವುದೂ ಆಗಿಲ್ಲ. ಏಕೆ ಮಾಡುವುದಕ್ಕೆ ಆಗಲಿಲ್ಲವೆಂದರೆ, ಈಗಾಗಲೇ 1991ನೇ ಇಸವಿಯಲ್ಲಿ ಏನು ಪಾರ್ಲಿಮೆಂಟ್‌ನಲ್ಲಿ ಆಗಿತ್ತು, ಅದನ್ನು ಪ್ರಕಾಶ್‌ರವರು ಉಲ್ಲೇಖ ಮಾಡಿದ್ದಾರೆ. 175ರ ಕೆಳಗೆ ಇವೊತ್ತು ಗವರ್ನರ್‌ರವರು ಭಾಷಣ ಮಾಡಿದ್ದಾರಲ್ಲಾ, ಅದಕ್ಕೆ ಸಂಬಂಧಪಟ್ಟಿದ್ದಲ್ಲ. ಅದು 176 ಕ್ಲಾಸ್ 1 ಏನಿದೆ, ಅದಕ್ಕೆ ಸಂಬಂಧಪಟ್ಟಿದ್ದು. ಪ್ರಧಾನಮಂತ್ರಿಗಳು ರಾಜೀನಾಮೆ ಕೊಡುತ್ತಾರೆ, ಅವೊತ್ತು ಕೊನೆಯವರೆಗೆ ಏನು ಮಾಡಿದರು, ಅದು ಅಸಿಂಧುವಾಗುತ್ತದೆ ಎಂದು ಹೇಳುವುದು ಒಂದು ಭಾಗ. ಇಲ್ಲಿ ಆ ತರಹದ ಪರಿಸ್ಥಿತಿ ನಿರ್ಮಾಣವಾಗಿಲ್ಲ. ಅದರ ಬಗ್ಗೆ Motion of Thanks ಮೂವ್ ಆಗಿಲ್ಲ, ಚರ್ಚೆಯಾಗಲಿಲ್ಲ ಅದು ಹಾಗೇ ಉಳಿದುಕೊಂಡಿದೆ. ಅನಂತರ, ಇದು ನೀವು ಅದನ್ನು infructuous

ಮಾಡಿ 176 ಕ್ಲಾಸ್ 1ರಲ್ಲಿ ಮಾಡುವುದಕ್ಕೆ ಅವಕಾಶ ಇದ್ದಿದ್ದರೆ, ಮಾಡಬಹುದಾಗಿತ್ತು. ಅದು ಮಾಡುವುದಕ್ಕೆ ಅವಕಾಶವಿಲ್ಲ. ಅದು ದೊಡ್ಡ ಗೊಂದಲವಾಗಿದೆ ಎನ್ನುವ ಕಾರಣಕ್ಕೋಸ್ಕರ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಅದನ್ನು ನೀವು ಓದಿದ್ದೀರಿ. 175ರಲ್ಲಿ ಅದಕ್ಕೆ ಅವರು ಏನು ಹೇಳುತ್ತಾರೆಂದರೆ, "ನಾನು ಭಾರತ ಸಂವಿಧಾನದ ಅನುಚ್ಛೇದ 175(1)ರ ಅಡಿ ಮಾತ್ರ ಈ ಗೌರವಾನ್ವಿತ ಸದನವನ್ನು ಉದ್ದೇಶಿಸಿ ಮಾತನಾಡುತ್ತಿದ್ದೇನೆಂದು ಪುನರುಚ್ಚರಿಸುತ್ತಿದ್ದೇನೆ". ಈ ತರಹ ಹೇಳಿದ ನಂತರ 175ರ ಪಾರ್ಟ್ 2ರ ಕ್ಲಾಸ್ 1 ಮತ್ತು 2ರಲ್ಲಿ ಹೇಳುತ್ತಾರೆಂದರೆ;

"175: Right of Governor to address and send messages to the House or Houses:

(1) The Governor may address the Legislative Assembly or, in the case a State having a Legislative Council, either House of the Legislature of the State or both Houses assembled together and may for that purpose require the attendance of members.

2. The Governor may send messages to the House or Houses of the Legislature of the State, whether with respect to a Bill then pendng in the Legislature or otherwise, and a House to which any message is so sent shall with all convenient dispatch consider any matter required by the message to be taken into consideration" ಎಂದು ಇದೆ. ಇಷ್ಟೊಂದು ಬಹಳ ಸ್ಪಷ್ಟವಾಗಿ ಇರುವಾಗ ಇಲ್ಲಿ Motion of Thanks ಹೇಗೆ ಮೂವ್ ಮಾಡುವುದಕ್ಕೆ ಬರುತ್ತದೆ? ಇಲ್ಲಿ ಬರುವುದಕ್ಕೆ ಸಾಧ್ಯತೆಯೇ ಇಲ್ಲ. ಒಂದು ವೇಳೆ allow ಆದರೆ, it violates the provisions of the Constitution, ಕಾನೂನುಬಾಹಿರವಾಗುತ್ತದೆ. ಕಾನೂನುಬಾಹಿರ ಈ ಸದನದಲ್ಲಿ ಆಗಬಾರದೆಂಬ ಕಾರಣಕ್ಕೋಸ್ಕರ ನಾವೆಲ್ಲಾ ಅತ್ಯಂತ ಕಳಕಳಿಯಿಂದ ಈ ಮನವಿಯನ್ನು, ವಾದವನ್ನು ನಿಮ್ಮ ಮುಂದೆ ಮಂಡಿಸುತ್ತಿರುವುದು. ಒಂದು ವೇಳೆ ಈ Motion of Thanks ಚರ್ಚೆಗೆ ಅವಕಾಶ ಮಾಡಿಕೊಟ್ಟರೆ wrong convention ಆಗುತ್ತದೆ, wrong precedent ಆಗುತ್ತದೆ. It goes aganist the Constitution ಆಗುತ್ತದೆ. ನಿಮ್ಮ ಅಧಿಕಾರಾವಧಿಯಲ್ಲಿ ಅದು ಆಗಬಾರದೆಂದು ನಮ್ಮ ಕಳಕಳಿ ಮತ್ತು ಮುಂದೆ ಬರುವ ಅನೇಕ ವರ್ಷಗಳವರೆಗೆ ಇದು ಸಂಪ್ರದಾಯವಾಗಬಾರದು. ಅನೇಕ ಸಂದರ್ಭಗಳಲ್ಲಿ ಇಂತಹ ಸನ್ನಿವೇಶಗಳು ಬರುತ್ತದೆಂದು ಗೊತ್ತಿರುವುದಿಲ್ಲವೆಂದು ಮಾನ್ಯ ಪ್ರಕಾಶ್‌ರವರು ಹೇಳಿದರು. ಆ ತರಹ ಎಲ್ಲಾ ಸನ್ನಿವೇಶಗಳೂ ಇಲ್ಲಿ ಬರುವುದಿಲ್ಲ. ಅವರು ಏನು ಹೇಳಬೇಕೋ ಹೇಳುತ್ತಾರೆ 176ರಲ್ಲಿ ಏನು ಹೇಳಬೇಕೋ ಅದನ್ನು ಹೇಳಿದ್ದಾರೆ. Both are very clear. ಇಲ್ಲಿ confusionಗೆ ಅವಕಾಶವಿಲ್ಲ. Contingencies ಬರಬಹುದು ಎನ್ನುವ ಕಾರಣಕ್ಕೋಸ್ಕರ Constitution is silent. ಅದಕ್ಕೋಸ್ಕರ, ನಾವು ಈ ತರಹ ಮಾಡಿಕೊಳ್ಳಬಹುದೆಂದು ಹೇಳುತ್ತಾರೆ. Governor himself is very clear. ಆರ್ಟಿಕಲ್ 175 ಕ್ಲಾಸ್ 1ರಲ್ಲಿ ನಾನು ಭಾಷಣ ಮಾಡಿದ್ದೇನೆಂದು ಹೇಳಿದ ನಂತರ ನಿಮಗೆ Motion

of Thanks ಮೂವ್ ಮಾಡುವುದಕ್ಕೆ ಎಲ್ಲಿ ಅವಕಾಶ ಬರುತ್ತದೆ? There is no provision. ಆ ತರಹ ಮಾಡುವುದಕ್ಕೆ ಬರುವುದಿಲ್ಲ. ಇದರ ಬಗ್ಗೆ ಚರ್ಚೆ ಮಾಡಬಹುದೇ ಹೊರತು Motion of Thanksಗೆ ಅವಕಾಶವಿಲ್ಲ. ಇದು ನನ್ನ ಸ್ಪಷ್ಟವಾದ ಅಭಿಪ್ರಾಯ. ಇದರ ಮೇಲೆ ತಾವು ನಿರ್ಣಯ ಕೊಡಬೇಕು. ನಿಮ್ಮ ನಿರ್ಣಯ ರಾಜ್ಯಾಂಗಬದ್ಧವಾಗಿ ಇರಲೆಂದು ಆಶಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಜಯಪ್ರಕಾಶ್‌ಹೆಗ್ಡೆ(ಬಹ್ಮಾವರ): ಮಾನ್ಯ ಅಧ್ಯಕ್ಷರೆ, ಮಾನ್ಯ ಪ್ರಕಾಶ್‌ರವರು ಮಾತನಾಡುತ್ತಾ ಹೇಳಿದರು ಹೊಸ ಸಂಪ್ರದಾಯವಾಗುತ್ತದೆಂದು. ಇದು ಸಂಪ್ರದಾಯವಲ್ಲ, ಸಂವಿಧಾನದ ಪ್ರಕಾರ ಆಗಬೇಕಾಗುತ್ತದೆ. It is not Convention. ಸಂವಿಧಾನ ಮಾತ್ರ ಅನ್ವಯವಾಗಬೇಕಾಗುತ್ತದೆ. ಇದನ್ನು ಬದಲಾವಣೆ ಮಾಡುವುದಕ್ಕೆ ಸದನಕ್ಕೆ ಅಧಿಕಾರವೇ ಇಲ್ಲವೆಂದು ನಮಗೆಲ್ಲರಿಗೂ ಗೊತ್ತಿದೆ. ತಾವು infructuous ಎಂದು ಹೇಳಿದ್ದೀರಿ, ಆದರೆ ರಾಜ್ಯಪಾಲರು ಹೇಳಿದ್ದಾರೆ. I reiterate that I am addressing these august Houses only under Article 175(1) of the Constitution." 176ರಲ್ಲಿ ಮಂಡಿಸಬೇಕಾಗಿತ್ತು. 176(1)ರಲ್ಲಿ ರಾಜ್ಯಪಾಲರು ಹೇಳಿದಮೇಲೆ ಅದಕ್ಕೆ ನಿಮಗೆ ಚರ್ಚೆ ಮಾಡುವುದಕ್ಕೆ ಬರುವುದಿಲ್ಲ. ಅದರಲ್ಲಿ ಕ್ಲಿಯರಾಗಿ ಹೇಳಿರತಕ್ಕದ್ದು, 175 ಮತ್ತು 176 ಎರಡರಲ್ಲೂ ವ್ಯತ್ಯಾಸವೇನಿದೆ ಎಂದರೆ Article 175ರಲ್ಲಿ,

> "The Governor may address the Legislative Assembly or, in the case of a State having a Legislative Council, either House of the Legislature of the State, or both Houses assembled together, and may for that purpose require the attendance of members." ಎಂದು ಇದೆ.

Article 176 ರಲ್ಲಿ,

> "At the commencement of the first session after each general election to the Legislative Assembly and at the commencement of the first session of each year, the Governor shall address the Legislative Assembly or, in the case of a state having a Legislative Council, both Houses assembled together and inform the Legislature of the causes of its summons." ಎಂದು ಇದೆ.

Article 175 ರಲ್ಲಿ 'may' ಅಂತ ಇದೆ. Article 176 ರಲ್ಲಿ 'Shall' ಅಂತ ಇದೆ. Article 163 Council of Ministers to aid and advise Governor ಇದಕ್ಕೆ apply ಆಗುವುದಿಲ್ಲ. When there is no Council of Ministers, Constitution ಬರುತ್ತೆ.

Article 176(2)ರಲ್ಲಿ,

> "Provision shall be made by the rules regulating the procedure of the House or either House for the allotment of time for discussion of the matters referred to in such address." ಎಂದು ಇದೆ.

Rule 19 and 20 ಈ ವಿಷಯಕ್ಕೆ ಸಂಬಂಧ ಪಟ್ಟಿವೆ. As per Rule 19(2) of Rules of Procedure and Conduct of Business 'On the day of Governor's Address, after the Address, the House shall sit again for a short while to transact some formal business." ಎಂದು ಇದೆ. ಅದನ್ನು before the Governor's speech, during the Governor's speech, after the Governor's speech short periodನ discussionಗೆ ಸಂಬಂಧಪಟ್ಟಂತೆ ಕುಳಿತುಕೊಳ್ಳುತ್ತೇವಲ್ಲಾ ಅದು next ಚರ್ಚೆ, ಅದು ನಿಯಾಮಾವಳಿ 27ಕ್ಕೆ apply ಆಗುವುದಿಲ್ಲ.

ಶ್ರೀ ಎಂ.ಪಿ. ಪ್ರಕಾಶ್: ನಮ್ಮಲ್ಲಿ ಎರಡು ಸದನಗಳು ಇದೆ. ವಿಧಾನಪರಿಷತ್ತು ಮತ್ತು ವಿಧಾನಸಭೆ 175ನೇ ಅನುಚ್ಛೇದದ ಮೇರೆಗೆ ವಿಧಾನಸಭಾ ಸದಸ್ಯರು ಮಾತ್ರ ಸಭೆ ಸೇರಿರುವಾಗ, ಆದರೆ ಇಲ್ಲಿ ನಾವು ಕಲೆತಿರತಕ್ಕದ್ದು 175ನೇ ಅನುಚ್ಛೇದದ ಮೇರೆಗೆ ವಿಧಾನಸಭಾ ಸದಸ್ಯರು ಮಾತ್ರ ಸಭೆ ಸೇರಿದಾಗ, ವಿಧಾನಸಭೆಯ ಸದಸ್ಯರು ಮತ್ತೆ ಸಭೆ ಸೇರಿರತಕ್ಕದ್ದು ಈಗ ತಾನೆ?

ಶ್ರೀ ಕೆ. ಜಯಪ್ರಕಾಶ್‌ಹೆಗ್ಡೆ: ಸಂವಿಧಾನದ ಅನುಚ್ಛೇದ 175 ಮತ್ತು 176ರಲ್ಲಿ ಸೇರಿದಾಗ ಮಾತ್ರ ಅನ್ವಯವಾಗುತ್ತದೆ. ಇವತ್ತು ಆ ಅನುಚ್ಛೇದದಲ್ಲಿ ನಾವು ಸೇರುತ್ತಿಲ್ಲ. ಇವತ್ತು the cause of summons has not been described.

Sri M.P. Prakash: The cause of summons has been described.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: 176 (2) ಪ್ರಕಾರ ಇದು ನಿಯಾಮಾವಳಿ 20ರಲ್ಲಿ ಬರತಕ್ಕದ್ದು.

"**Scope of discussion:** On such day or days or part of any day, the House shall be at liberty to discuss the matters referred to in such Address on a Motion of Thanks moved by a member and seconded by another member."

ಜೆ.ಸಿ. ಮಾಧುಸ್ವಾಮಿ: ಮಾನ್ಯ ಎಂ.ಪಿ. ಪ್ರಕಾಶ್‌ರವರು ಪ್ರಾವಿಜನ್ ಇಲ್ಲವೆಂದು ಒಪ್ಪಿಕೊಂಡಿದ್ದಾರೆ. The gist of his speech was there is no provision. ಆದ್ದರಿಂದ ಒಂದು ಸಂಪ್ರದಾಯ ಸೃಷ್ಟಿ ಮಾಡತಕ್ಕ ಅಗತ್ಯವಿತ್ತು ಎಂದು ಅವರು ಸ್ಪಷ್ಟವಾಗಿ ಹೇಳಿದ್ದಾರೆ. ಪ್ರಾವಿಜನ್ ಇಲ್ಲವೆಂದು ಅವರು ಸ್ಪಷ್ಟವಾಗಿ ಹೇಳಿದ್ದಾರೆ.

Sri M.P. Prakash: The Constitution is silent on that particular issue. There is absolutely no bar ಎಂದು ಹೇಳಿದ್ದೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಇವತ್ತು ಹೊಸ ಸಂಪ್ರದಾಯ ಮಾಡತಕ್ಕದ್ದು ತಪ್ಪೇ ಎಂದು ಅವರು ಸ್ಪಷ್ಟವಾಗಿ ಹೇಳಿದ್ದಾರೆ.

ಶ್ರೀ ಎಂ.ಪಿ. ಪ್ರಕಾಶ್: ಸದನದಲ್ಲಿ ಸರಿಯಾಗಿ ದಾಖಲೆಯಾಗಬೇಕಾಗುತ್ತದೆ. ಮಾನ್ಯ ಮಾಧುಸ್ವಾಮಿಯವರು ಏನು ಹೇಳಿದ್ದಾರೆಂದರೆ, ಯಾವುದೇ Provision ನಿಯಾಮವಳಿಯಲ್ಲಿ ಇಲ್ಲ ಎನ್ನತಕ್ಕ ಮಾತನ್ನು ಎಂ.ಪಿ. ಪ್ರಕಾಶ್ ಹೇಳಿದ್ದಾರೆಂದು ಹೇಳಿದ್ದಾರೆ. ಆದರೆ ನಾನು ನಿಯಮಾವಳಿಯಲ್ಲಿ ಇಲ್ಲವೆಂದು ಹೇಳಲಿಲ್ಲ. ನಿಯಮಾವಳಿಯಲ್ಲಿ ನಿಷೇಧ ಎನ್ನತಕ್ಕದ್ದು ಇಲ್ಲ ಮತ್ತು There is no bar ಎನ್ನತಕ್ಕದ್ದು. . .

ಶ್ರೀ ಜೆ.ಸಿ. ಮಾಧುಸ್ವಾಮಿ: ಸಂಪ್ರದಾಯ ಮಾಡತಕ್ಕದ್ದು ತಪ್ಪೇ ಇಂಥ ಪರಿಸ್ಥಿತಿಯಲ್ಲಿ ಎಂದು ಹೇಳಿದ್ದಾರೆ. ಇಂಥ ಸನ್ನಿವೇಶ ಸೃಷ್ಟಿಯಾದಾಗ ಹೊಸ ಸಂಪ್ರದಾಯ ಸೃಷ್ಟಿ ಮಾಡುವುದು ಬೇಡವೆ? ಸಂವಿಧಾನಕ್ಕೆ ನಾಂದಿ ಹಾಕತಕ್ಕದ್ದು ಬೇಡವೆ ಎಂದು ಈ ಪ್ರಶ್ನೆಯನ್ನು ತಾವು ಹೇಳಿದ್ದೀರಿ. ನಾವು ಹೇಳುತ್ತಿರುವುದು ಸಂವಿಧಾನದ ಕೆಳಗಡೆ ನಡೆಯತಕ್ಕ ಶಾಸನಸಭೆಯದ್ದು, ಸಂಪ್ರದಾಯ ಸೃಷ್ಟಿ ಮಾಡುವುದಕ್ಕೆ ನಾವಿಲ್ಲ, ಸಂವಿಧಾನದಲ್ಲಿ ಕ್ಲಿಯರ್ ಆಗಿದೆ, ರಾಜ್ಯಪಾಲರು 175ರಲ್ಲಿ ಸರ್ಕಾರದ ಭಾಷಣ ಮಾಡಬೇಕೆಂದು ಇಲ್ಲ. Anything he wishes, he desires including Government speech. ನಾವು ಸರ್ಕಾರದ ಭಾಷಣಕ್ಕೆ ತಕರಾರು ಮಾಡಲಿಲ್ಲ. ರಾಜ್ಯಪಾಲರ ಭಾಷಣದಲ್ಲಿ ಏನೇ ಹೇಳಿದರೂ ಕೇಳುತ್ತೇವೆ. He can give any speech. ಆದರೆ ಅದಕ್ಕೆ ವಂದನಾನಿರ್ಣಯ ಆಗಬೇಕೋ ಬೇಡವೋ? ಸಂವಿಧಾನದಲ್ಲಿ ಪ್ರಾವಿಜನ್ ಇದೆಯೋ ಇಲ್ಲವೋ, ಎಂಬುದು ಈಗಿರುವ ಪ್ರಶ್ನೆ ನಮ್ಮ ವಾದದ ಪ್ರಕಾರ ಪ್ರಾವಿಜನ್ ಇಲ್ಲ. ಮಾನ್ಯ ಪ್ರಕಾಶ್‌ರವರು ಅದನ್ನು ಒಪ್ಪಿಕೊಂಡಿದ್ದಾರೆ. ಅದಕ್ಕೆ ಹೊಸ ಸಂಪ್ರದಾಯ ಮಾಡತಕ್ಕವರು ನಾವೇ? ಪಾರ್ಲಿಮೆಂಟ್ ಮಾಡಬೇಕಾಗುತ್ತದೆ. It is a Constitutional obligation where you cannot have conventions.

ಶ್ರೀ ಎಂ.ಪಿ. ಪ್ರಕಾಶ್: ನಾನು ಹೇಳುವುದೇನೆಂದರೆ, ಪ್ರಾವಿಜನ್ ಇಲ್ಲವೆನ್ನತಕ್ಕ ಮಾತನ್ನು ನಾನು ಹೇಳಲಿಲ್ಲ. ಆದರೆ ಇಲ್ಲಿರತಕ್ಕ ನಿಯಮಾವಳಿ ಏನಿದೆ ಅದು ನಿಷೇಧಿಸಿಲ್ಲ. There is absolutely no bar whatsoever to move the Motion of Thanks. ಆ ಕಾರಣಕ್ಕಾಗಿ ಇದರ ಬಗ್ಗೆ ಕೊಡತಕ್ಕ ತೀರ್ಮಾನವೇನಿದೆ ಮುಂದೆ ಬರತಕ್ಕ ದಿನಮಾನಗಳಲ್ಲಿ ಸ್ಪಷ್ಟೀಕರಣವಾಗಿ ರಾಜ್ಯಾಂಗದಲ್ಲಿ ಸಂವಿಧಾನ ತಿದ್ದುಪಡಿಗೆ ನಾಂದಿಯಾಗಲಿ ಎಂದು ಮಾತ್ರ ಹೇಳಿದ್ದೇನೆ.

Sri G.V. SriRamareddy: It is barred.

ಶ್ರೀ ಜೆ.ಸಿ.ಮಾಧುಸ್ವಾಮಿ: ತಮ್ಮನ್ನು ವಿರೋಧ ಮಾಡಬೇಕೆಂದು ನಾವು ಮಾತನಾಡುತ್ತಿಲ್ಲ.

ಅಧ್ಯಕ್ಷರು: ಯಾರಾದರೂ ಒಬ್ಬರು ಮಾತನಾಡಿ.

Sri M.P. Prakash: There is absolutely no bar.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ನಾವು ಯಾವ ರೀತಿಯಾಗಿ ನಿಯಮಾವಳಿಯನ್ನು ಮಾಡಿಕೊಂಡಿದ್ದೇವೆ ನೋಡಬೇಕು, ನಾವು ಸಂವಿಧಾನಕ್ಕೆ ಅನ್ವಯವಾಗಿ ನಿಯಮಾವಳಿಯನ್ನು ಮಾಡಿಕೊಂಡಿದ್ದೇವೆ. ನಿಯಮ 176ರಲ್ಲಿ ಮಾತ್ರ ತಿದ್ದುಪಡಿಗೆ ಅವಕಾಶ ಇದೆ. ಆದರೆ ಅವರಿಗೆ ತಿದ್ದುಪಡಿಗೆ ಅವಕಾಶ ಇತ್ತೇ? ಈಗ 176ರಲ್ಲಿ ಯಾವ ಭಾಷಣವನ್ನು ರಾಜ್ಯಪಾಲರು ಮಾಡಿದ್ದಾರೆ, ಅದಕ್ಕೆ ತಿದ್ದುಪಡಿ ಮಾಡುವುದಕ್ಕೆ ಸರ್ಕಾರಕ್ಕೆ ಅವಕಾಶ ಇತ್ತು. ಆದರೆ 175(1)ರಲ್ಲೇನು ಗೌರವಾನ್ವಿತ ರಾಜ್ಯಪಾಲರು ಭಾಷಣ ಮಾಡಿದ್ದಾರೆ, Governor's Address under Article 175(1) of the Constitution. ನಿಯಮ 25 ಏನು ಹೇಳುತ್ತದೆಂದರೆ:

> "The Speaker may allot time for the discussion of the matters referred to in the Governor's Address under Article 175(1) of the Constitution."

"**Sri J.C. Madhuswamy:** In addition, Governor has taken legal advice. 176ರ ಅಡಿಯಲ್ಲಿ ನಾನು ಭಾಷಣ ಮಾಡಲಿಕ್ಕೆ ಆಗುವುದಿಲ್ಲ ಎಂಬುದು ಅವರಿಗೆ ಮನವರಿಕೆಯಾಗಿದೆ. That is the legal address rendered by the Governor.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: 176ರ ಅಡಿಯಲ್ಲಿ ಭಾಷಣ ಮಾಡಲಿಕ್ಕೆ ಅವಕಾಶ ಇದ್ದಿದ್ದರೆ ಅವರು ಅದರ ಅಡಿಯಲ್ಲೇ ಭಾಷಣ ಮಾಡುತ್ತಿದ್ದರು.

ಶ್ರೀ ಜೆ.ಸಿ. ಮಾಧುಸ್ವಾಮಿ: ಒಂದು ಸೆಷನ್‌ನಲ್ಲಿ ಒಂದು ಸಲ ಮಾತ್ರ ಅವರಿಗೆ ಭಾಷಣ ಮಾಡಲಿಕ್ಕೆ ಅವಕಾಶ ಇದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: 175(1)ರ ಪ್ರಕಾರ ನಾನು ಭಾಷಣ ಮಾಡುತ್ತಿದ್ದೇನೆ ಎಂದು ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ.

ಶ್ರೀ ಎಂ.ಪಿ. ಪ್ರಕಾಶ್: ಮಾನ್ಯ ಹಿರಿಯ ಸದಸ್ಯರಾದ ಹೆಗ್ಡೆಯವರಿಗೆ ಗೊತ್ತಿದೆ . . . .

ಶ್ರೀ ಜೆ.ಸಿ. ಮಾಧುಸ್ವಾಮಿ: ಈ ಎಲ್ಲಾ ವಿಷಯಗಳು ಮಾನ್ಯ ಪ್ರಕಾಶ್‌ರವರಿಗೂ ಗೊತ್ತಿದೆ. But you are advocating a bad case. ತಮ್ಮಂತಹವರು ಇಲ್ಲಿ ಬ್ಯಾಡ್ ಕೇಸ್‌ಗೆ argument ಮಾಡುವಂತಹ ಒಂದು ಇತಿಹಾಸ ನಿರ್ಮಾಣವಾಗಬಾರದು.

ಶ್ರೀ ಎಂ.ಪಿ. ಪ್ರಕಾಶ್: ಮಾನ್ಯ ರಾಜ್ಯಪಾಲರು ತಮ್ಮ ಭಾಷಣವನ್ನು ದಯಪಾಲಿಸಿದ ನಂತರ ಅದಕ್ಕೆ ವಂದನಾ ನಿರ್ಣಯವನ್ನು ಅಂಗೀಕರಿಸದೆ ಇರುವಂಥದ್ದು ಯಾವುದೇ ಕಾಲದಲ್ಲಿಯೂ ನಡೆದಿಲ್ಲ. ನಮ್ಮ ಮಾತೃ ಸಂಸ್ಥೆ ಎಂದು ನಾವೇನು ಅಂದುಕೊಂಡಿದ್ದೇವೋ ಅಂತಹ ಬ್ರಿಟನ್‌ನಲ್ಲೂ ಕೂಡ ವಂದನಾ ನಿರ್ಣಯಗಳನ್ನು ಭಾಷಣ ಮಾಡಿದ ನಂತರ ಅಂಗೀಕರಿಸದಿರುವುದು ನಡೆದಿಲ್ಲ. ಇಲ್ಲಿಯೂ ಕೂಡ ನಮ್ಮ ರಾಜ್ಯಾಂಗ ರಚನೆಯಾದ 58 ವರ್ಷಗಳಲ್ಲಿ ಎಲ್ಲಿಯೂ ಕೂಡ ಇತಿಹಾಸದಲ್ಲಿ ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯ ಅಂಗೀಕರಿಸದಿರುವುದು ನಡೆದಿಲ್ಲ. ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯವನ್ನು ನಾವು ಅಂಗೀಕರಿಸಲೇಬೇಕಾಗುತ್ತದೆ. ಕಾನೂನು ಸಲಹೆಯನ್ನು ತೆಗೆದುಕೊಂಡೇ ಮಾನ್ಯ ರಾಜ್ಯಪಾಲರು 175(1)ರ ಅಡಿಯಲ್ಲಿ ಭಾಷಣವನ್ನು ಇಲ್ಲಿ ದಯಪಾಲಿಸಿದ್ದಾರೆ. ಇದಕ್ಕೆ ನಂತರ ವಂದನಾ ನಿರ್ಣಯ ಆಗುತ್ತದೆ, ಇದರ ಬಗ್ಗೆ ಚರ್ಚೆ ಆಗುತ್ತದೆ ಎಂದು ಪರಿಭಾವಿಸಿಕೊಂಡೇ ಅವರು ಇಲ್ಲಿ ಭಾಷಣವನ್ನು ಮಾಡಿದ್ದಾರೆ. ಆದ್ದರಿಂದ ಅದರ ಬಗ್ಗೆ ಇಲ್ಲಿ ಚರ್ಚೆಯಾಗಬೇಕು ಎಂದು ನಾನು ಭಾವಿಸಿಕೊಂಡಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಎಂ.ಪಿ. ಪ್ರಕಾಶ್ ಸಾಹೇಬರು ಏಕೋ ಇವತ್ತು ತಮ್ಮ ವಾದವನ್ನು ಬಹಳ ಗಟ್ಟಿಯಾಗಿ ಹಿಡಿದುಕೊಂಡಿದ್ದಾರೆ. Constitutional provisions ಏನಿದೆ, ಅದನ್ನು ತಾವೂ ಓದಿದ್ದೀರಿ, ಎಲ್ಲರೂ ಓದಿದ್ದಾರೆ. 175 ಮತ್ತು 176 ಆರ್ಟಿಕಲ್ಸ್ ಏನಿವೆಯೋ, ಅವೆರಡಕ್ಕೂ clear ಆಗಿ distinction ಇದೆ. ಆ ರೀತಿಯ distinction ಇದ್ದರೂ ಕೂಡ ತಾವು ಹೊಸ ಸಂಪ್ರದಾಯ ಹಾಕಬೇಕೆಂದಿದ್ದೀರಿ. ಇಲ್ಲಿ ಹೊಸದಾಗಿ ಸ್ಪಷ್ಟೀಕರಣ ಕೊಡತಕ್ಕದ್ದು ಏನೂ ಇಲ್ಲ ಅಥವಾ ಹೊಸದಾಗಿ precedent create ಮಾಡತಕ್ಕ ಅವಶ್ಯಕತೆ ಇಲ್ಲ. Precedent ಯಾವಾಗ creat ಆಗುತ್ತದೆ ಎಂದರೆ, in the absence of the rules. ರೂಲ್ಸ್ ಇಲ್ಲದಿದ್ದಾಗ ಅದಕ್ಕೆ ಪ್ರಿಸಿಡೆಂಟ್ ಕ್ರಿಯೇಟ್ ಆಗಬೇಕಾಗುತ್ತದೆ. ಆದರೆ ಇಲ್ಲಿ ರೂಲ್ಸ್ ಕ್ಲಿಯರ್ ಆಗಿ ಇದೆ. ಆರ್ಟಿಕಲ್ 175 ಮತ್ತು 176ರಲ್ಲಿ ಸ್ಪಷ್ಟವಾಗಿ ಇದ್ದರೂ ಕೂಡ ನಾವು ಪದೇ ಪದೇ ಅದರ ಬಗ್ಗೆ ಮಾತನಾಡುವುದು

ಸರಿಯಲ್ಲ. ಮಾನ್ಯ ರಾಜ್ಯಪಾಲರು ಇದರ ಬಗ್ಗೆ ವಂದನಾ ನಿರ್ಣಯವಾಗುತ್ತದೆ ಎಂದು ಪರಿಭಾವಿಸಿಕೊಂಡು ಭಾಷಣ ಮಾಡಿದ್ದಾರೆಂದು ಮಾನ್ಯ ಪ್ರಕಾಶ್‌ರವರು ಮಾತನಾಡತಕ್ಕದ್ದು ನಿಜವಾಗಿಯೂ ಕೂಡ ಅವರ conscious ಗೆ ವಿರುದ್ಧವಾಗಿ ಇದೆ. You are a good advocate. But you are taking a bad case. You are arguing a wrong case. ಕೇಸ್ ಇಲ್ಲದಿದ್ದರೂ ನೀವು argue ಮಾಡತಕ್ಕದ್ದು ಸರಿಯಾದುದಲ್ಲ. ನೀವು ಎಷ್ಟೇ argument ಮಾಡಿದರೂ ಕೂಡ ಸ್ಪಷ್ಟವಾದಂತಹ ಕಾನೂನು ಇದ್ದಾಗ ನಾವು ಅದರ ಬಗ್ಗೆ interpretation ಮಾಡತಕ್ಕ ಅವಶ್ಯಕತೆ ಇಲ್ಲವೆಂದು ನಾವು ಪದೇ ಪದೇ ಹೇಳಬೇಕಾದಂತಹ ಅವಶ್ಯಕತೆ ಇಲ್ಲ. ನಾವು ಹತ್ತು ಸಲವಾದರೂ ಆರ್ಟಿಕಲ್ 175 ಮತ್ತು 176ನ್ನು ಇಲ್ಲಿ ಓದಿ ಹೇಳಿದ್ದೇನೆ. ಯಾವಾಗ ಅವರು ಮೆಸೇಜ್ ಕೊಡುತ್ತಾರೆ, ಯಾವಾಗ ಭಾಷಣ ಮಾಡುತ್ತಾರೆ, ಯಾವುದು ಮ್ಯಾಂಡೇಟರಿ, ಯಾವಾಗ ವಂದನಾ ನಿರ್ಣಯ ಅಂಗೀಕರಿಸಬೇಕು ಎಂಬುದನ್ನು ಸ್ಪಷ್ಟವಾಗಿ ಹೇಳಿದ್ದೇವೆ. ನಾವು ಇದರ ಬಗ್ಗೆ ಚರ್ಚೆ ಮಾಡಬಹುದು, ಆದರೆ Motion of Thanks ಅನ್ನು adopt ಮಾಡಲಿಕ್ಕಾಗುವುದಿಲ್ಲ. ಹೀಗಿದ್ದರೂ ಕೂಡ ಮಾನ್ಯ ಎಂ.ಪಿ. ಪ್ರಕಾಶ್ ಸಾಹೇಬರು ಇದಕ್ಕೆ ಏಕೆ ಒತ್ತು ಕೊಡುತ್ತಿದ್ದಾರೋ ಗೊತ್ತಿಲ್ಲ. ದಯವಿಟ್ಟು ಈಗಲಾದರೂ ತಾವು ನಮ್ಮ ವಾದವನ್ನು ಒಪ್ಪಿಕೊಳ್ಳುತ್ತೀರಿ ಎಂದು ನಾನು ತಿಳಿದುಕೊಂಡಿದ್ದೇನೆ. ಇದನ್ನು ಮುಂದುವರೆಸುವುದಕ್ಕಿಂತ ಇದನ್ನು ಇಲ್ಲಿಗೆ ನಿಲ್ಲಿಸುವುದು ಬೆಟರ್ ಎಂದು ನಾನು ಹೇಳಬಯಸುತ್ತೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಮಾನ್ಯ ಅಧ್ಯಕ್ಷರೆ, 175(1)ರ ಅಡಿಯಲ್ಲಿ ಮಾನ್ಯ ರಾಜ್ಯಪಾಲರು ಮಾಡಿದ ಭಾಷಣದ ಬಗ್ಗೆ ತಾವು ಚರ್ಚೆಗೆ ಅವಕಾಶ ಮಾಡಿಕೊಡಬಹುದು. That is not mandatory. ಚರ್ಚೆಗೆ ಅವಕಾಶ ಕೊಡಲೇಬೇಕು ಎಂದೇನೂ ಇಲ್ಲ. ತಾವು ಚರ್ಚೆಗೆ ಅವಕಾಶ ಮಾಡಿಕೊಡಬಹುದು ಎಂದು ಮಾತ್ರ ಇದೆ. ಇಲ್ಲಿ 'may' ಎಂಥು ಇದೆ. ಹಾಗಿದ್ದಾಗ ತಾವು ಚರ್ಚೆಗೆ ಅವಕಾಶ ಮಾಡಿಕೊಡಲೇಬೇಕು ಎಂದೇನೂ ಇಲ್ಲ. ಇಲ್ಲಿ ಈಗ ಸಂಪ್ರದಾಯಗಳು ಬರುವುದಿಲ್ಲ. ನಾವು ಇಲ್ಲಿ ಬಿಲ್ ಅನ್ನು ಏನಾದರೂ ಇಂಟ್ರಡ್ಯೂಸ್ ಮಾಡುವಾಗ, basic structure of the Constitution ಅನ್ನು alter ಮಾಡಲಿಕ್ಕಾಗುವುದಿಲ್ಲ. ತಾವು ಈಗ ಸಂಪ್ರದಾಯ ಎನ್ನುವ ಇನ್ನೊಂದು ಮಾತನ್ನು ಇಲ್ಲಿ ಹೇಳಿದಿರಿ. ಸಂಪ್ರದಾಯಕ್ಕೋಸ್ಕರ ನಮ್ಮ basic structure alter ಮಾಡಲಿಕ್ಕೆ Constitutionನಲ್ಲಿ ಏನಿದೆಯೋ ಅದರ ತಿದ್ದುಪಡಿಯನ್ನು ಮಾಡಲಿಕ್ಕೆ ಬರುವುದಿಲ್ಲ, ಅದರ ಬದಲಾವಣೆಯನ್ನು ಮಾಡಲಿಕ್ಕೆ ಬರುವುದಿಲ್ಲ. ಆದರೆ ಮಾನ್ಯ ಮುಖ್ಯಮಂತ್ರಿಗಳು ಇಲ್ಲಿರುವುದರಿಂದ ನಾನು ಅವರಿಗೊಂದು ಪ್ರಶ್ನೆಯನ್ನು ಕೇಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಪ್ರಕಾಶ್‌ರವರು ಹೇಳಿದರು, ಆದ್ದರಿಂದ ತಾವು ಅವರಿಗೆ ಏಕೆ ಕೇಳುತ್ತಿಲ್ಲ, ತಾವು ಅವರಿಗೆ ಕೇಳುವುದನ್ನು ಬಿಟ್ಟು ಮಾನ್ಯ ಮುಖ್ಯಮಂತ್ರಿಗಳಿಗೆ ಏಕೆ ಕೇಳುತ್ತಿದ್ದೀರಿ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಅವರು ಮಂತ್ರಿಗಳಾಗಿದ್ದರೆ ನಾನು ಅವರಿಗೇ ಕೇಳುತ್ತಿದ್ದೆ. ಮಾನ್ಯ ಗೌರವಾನ್ವಿತ ರಾಜ್ಯಪಾಲರು 175(1)ರ ಅಡಿಯಲ್ಲಿ ಏನೊಂದು ಭಾಷಣವನ್ನು ಇಲ್ಲಿ ಮಾಡಿದರೋ, ಅದು ಸರ್ಕಾರದ ಭಾಷಣವೇ ಎಂಬುದನ್ನು ದಯವಿಟ್ಟು ಮಾನ್ಯ ಮುಖ್ಯಮಂತ್ರಿಗಳು

ಇಲ್ಲಿ ಕ್ಲಾರಿಫೈ ಮಾಡಬೇಕು. ಏಕೆಂದರೆ 175(1)ರ ಅಡಿಯಲ್ಲಾದರೆ ಮಾನ್ಯ ರಾಜ್ಯಪಾಲರು ಅವರ ಭಾಷಣವನ್ನು ಮಾಡಬೇಕಾಗಿತ್ತು, ಸರ್ಕಾರದ ಭಾಷಣವನ್ನು ಅದರ ಅಡಿಯಲ್ಲಿ ಮಾಡಲಿಕ್ಕೆ ಅವಕಾಶ ಇಲ್ಲ. ಅದು ಎಲ್ಲಿದೆ ಎಂದು ನಾನು ಇಲ್ಲಿ ಎಲ್ಲರಿಗೂ ತೋರಿಸಿಕೊಂಡು ಕುಳಿತುಕೊಳ್ಳುವುದಕ್ಕಾಗುವುದಿಲ್ಲ. ಅದು Constitutionನಲ್ಲಿ ಇದೆ. Constitutional ನಲ್ಲಿ ಇರುವಂಥಾದ್ದು, . . .

ಶ್ರೀ ಆರಗ ಜ್ಞಾನೇಂದ್ರ: 175(1)ರ ಅಡಿಯಲ್ಲಿ ಮಾನ್ಯ ರಾಜ್ಯಪಾಲರು ಭಾಷಣ ಮಾಡಿದ್ದಾರೆ. ಮಾನ್ಯ ರಾಜ್ಯಪಾಲರ ಭಾಷಣವು ಸರ್ಕಾರದ ಭಾಷಣವೇ. ಅದೂ ಸರ್ಕಾರದ ಕಾರ್ಯಕಲಾಪವೇ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಮಾನ್ಯ ರಾಜ್ಯಪಾಲರು ನಾನು ಭಾಷಣವನ್ನು ಮಾಡುತ್ತೇನೆ ಎಂದು ಹೇಳಿ ಕಳುಹಿಸಬೇಕು. On his own ಅವರು message ಅನ್ನು ಕಳುಹಿಸಬೇಕು. ಸರ್ಕಾರವೇ ಹೋಗಿ ಅವರ ಹತ್ತಿರ 175(1)ರ ಅಡಿಯಲ್ಲಿ ಭಾಷಣವನ್ನು ಮಾಡಿಸಲಿಕ್ಕಾಗುವುದಿಲ್ಲ.

ಶ್ರೀ ಆರಗ ಜ್ಞಾನೇಂದ್ರ: ಮಾನ್ಯ ಅಧ್ಯಕ್ಷರೆ, ಇಲ್ಲಿ ಅವರವರ ಮೂಗಿನ ನೇರಕ್ಕೇ interpretations ಆಗುತ್ತಿವೆ. ಇದು ಸರಿಯಾದ ರೀತಿಯಲ್ಲ. ಇದಕ್ಕೆ ಎಲ್ಲಾದರೂ ಒಂದು ಕಡೆ ಅಂತ್ಯ ಹಾಡಬೇಕಾಗುತ್ತದೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಒಂದು ವೇಳೆ . . . .

ಅಧ್ಯಕ್ಷರು: ಮಾನ್ಯ ಹೆಗ್ಡೆಯವರೇ, ತಮ್ಮ ಭಾಷಣವಾಯಿತೇ?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ನಾನು ನನ್ನ ಭಾಷಣವನ್ನು ಮುಗಿಸಲಿಕ್ಕೇ ಬಿಡುತ್ತಿಲ್ಲ.

ಅಧ್ಯಕ್ಷರು: ನೀವು ಈಲ್ಡ್ ಆಗುತ್ತಲೇ ಇದ್ದರೆ, ಅವರು ತಮಗೆ ಭಾಷಣ ಮುಗಿಸಲು ಬಿಡುವುದೇ ಇಲ್ಲ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಕೇಳುವುದೇನೆಂದರೆ, ಒಂದು ವೇಳೆ ಇದು ಸರ್ಕಾರದ ಭಾಷಣವಾಗಿದ್ದರೆ, ಮಾನ್ಯ ರಾಜ್ಯಪಾಲರು ಇಲ್ಲಿಗೆ ಬಂದು ಭಾಷಣ ಮಾಡಿದ್ದು ತಪ್ಪು. ಅವರು ಸರ್ಕಾರದ ಭಾಷಣವನ್ನು 175(1)ರ ಅಡಿಯಲ್ಲಿ ಇಲ್ಲಿಗೆ ಬಂದು ಭಾಷಣವನ್ನು ಮಾಡಿದ್ದೇ ತಪ್ಪು ಎಂಬ ಅಭಿಪ್ರಾಯವನ್ನು ನಾನು ಪಡುತ್ತೇನೆ. ಮಾನ್ಯ ಮಾಧುಸ್ವಾಮಿಯವರು, ಅವತ್ತು 19ನೇ ತಾರೀಖಿನಂದು ನಡೆದ ಭಾಷಣಕ್ಕೆ ವಿರೋಧವನ್ನೇನೂ ಮಾಡಿದರೋ, ಆಗ ನಾವು ಅದಕ್ಕೆ ಅವರು ಏಕೆ ವಿರೋಧ ಮಾಡುತ್ತಿದ್ದಾರೋ ಎಂದುಕೊಂಡಿದ್ದೆವು. But, ಅವತ್ತು ಅವರು ಬರಬೇ ಇದ್ದಿದ್ದರೆ, ಅವರಿಗೆ ಒಂದು ವೇಳೆ ಸರ್ಕಾರದಲ್ಲಿ ಬಹುಮತ ಇಲ್ಲವೆಂದು ಗೊತ್ತಿದಿದ್ದರೆ, ಅದನ್ನೇ ಮುಂದುವರೆಸಬೇಕಾಗಿತ್ತು. ಇವತ್ತು ಇಷ್ಟೊಂದು ಗೊಂದಲವನ್ನು ಉಂಟು ಮಾಡುವುದಕ್ಕಿಂತ, 19ನೇ ತಾರೀಖಿನಂದು ಏನೊಂದು ಭಾಷಣವನ್ನು ಸದನಕ್ಕೆ ಮಾಡಲಿಕ್ಕೆ ಬಂದರೋ, ಅವತ್ತೇ ಅವರು ಮುಂದಕ್ಕೆ ಹಾಕಬೇಕಾಗಿತ್ತು. ಅದಕ್ಕೆ ಇಲ್ಲಿ ವಿರೋಧವನ್ನು ಮಾಡಿದರು. ಇವತ್ತು ಪುನಃ ನಾವು ಗೊಂದಲಕ್ಕೆ ಈಡಾಗಿದ್ದೇವೆ. ಅದಕ್ಕಾಗಿ ಮಾನ್ಯ ಅಧ್ಯಕ್ಷರೆ, ಈ ಒಂದು ಭಾಷಣವನ್ನೇನು ಮಾನ್ಯ ರಾಜ್ಯಪಾಲರು ಇಲ್ಲಿ ಓದಿದ್ದಾರೋ, ಅದಕ್ಕೆ ಇಲ್ಲಿ Motion of Thanks ಮುಖೇನ ತರಲಿಕ್ಕೆ ಸಾಧ್ಯ ಆಗುವುದಿಲ್ಲ. ಮಾನ್ಯ ಜ್ಞಾನೇಂದ್ರರವರು ಅದು ಸತ್ತು ಹೋಗಿದೆ ಎಂದು ಹೇಳಿದರು. ಅದು ಸತ್ತು ಹೋಗಿದ್ದರೆ, ಅದು ಬದುಕಿದೆಯೋ, ಸತ್ತು ಹೋಗಿದೆಯೋ ಎಂದು ಸ್ಪೀಕರ್‌ರವರು ಹೇಳಬೇಕಾಗುತ್ತದೆ.

ಶ್ರೀ ಬಸವರಾಜ ರಾಯರೆಡ್ಡಿ: ಮಾನ್ಯ ರಾಜ್ಯಪಾಲರು ಒಮ್ಮೆ ಆರ್ಟಿಕಲ್ 176ರ ಅಡಿಯಲ್ಲಿ ಭಾಷಣ ಮಾಡಿದರೆ ಅದು ಎಂದಿಗೂ ಭಾಷಣವೇ. It cannot be dead.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಒಂದು ಬಿಲ್ ಅನ್ನು ಇಲ್ಲಿ ಇಂಟ್ರಡ್ಯೂಸ್ ಮಾಡಿದ ಮೇಲೆ ಅದು on its own lapse ಆಗುವುದಿಲ್ಲ. ಒಂದು ಬಿಲ್ ಇಲ್ಲಿ ಇಂಟ್ರಡ್ಯೂಸ್ ಮಾಡಿದ್ದು on its own lapse ಆಗುತ್ತದೆಯೇ? ಅದು ಲ್ಯಾಪ್ಸ್ ಆಗುವುದಿಲ್ಲ. ಚರ್ಚೆ ಮಾಡಲು ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸುತ್ತಾ, ನಾನು ಇದನ್ನು ವಿರೋಧ ಮಾಡುತ್ತೇನೆ ಎಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್: 19ನೇ ತಾರೀಖು ಮಾನ್ಯ ರಾಜ್ಯಪಾಲರು ಮಾಡಿದ ಭಾಷಣ ಏನಾಯಿತು ಎಂದು ಕೇಳಿ?

ಅಧ್ಯಕ್ಷರು: ಮಾನ್ಯ ವಾಟಾಳ್ ನಾಗರಾಜ್‌ರವರೆ, ಕುಳಿತುಕೊಳ್ಳಿ. ಪದೇ ಪದೇ ನೀವೇ ನಿಂತುಕೊಂಡರೆ, ಬೇರೆಯವರು ಮಾತನಾಡಬಾರದೇನು?

ಶ್ರೀ ವಾಟಾಳ್ ನಾಗರಾಜ್: ತಮ್ಮಲ್ಲಿ ನನ್ನದೊಂದು ಕಳಕಳಿಯ ಮನವಿ . . . . . .

ಅಧ್ಯಕ್ಷರು: ನೋಡಿ No, ಕುಳಿತುಕೊಳ್ಳಿ. ನೀವು ಈಗಾಗಲೇ 3–4 ಸಾರಿ ಎದ್ದು ಹೇಳಿದ್ದೀರಿ.

ಶ್ರೀ ವಾಟಾಳ್ ನಾಗರಾಜ್: ಸಾರ್, 19ನೇ ತಾರೀಖು ಭಾಷಣ ಏನಾಯಿತು ಎಂಬುದನ್ನು ತಾವು ಹೇಳಿ ಸ್ವಾಮಿ.

ಅಧ್ಯಕ್ಷರು: ಆಯಿತು ಸ್ವಾಮಿ ಈಗಾಲೇ ನೀವು ಹಲವಾರು ಸಾರಿ ಈ ಬಗ್ಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತ ಮಾಡಿದ್ದೀರಿ. ಮತ್ತೆ ಮತ್ತೆ ಎದ್ದು ಮಾತನಾಡಲು ನಿಂತುಕೊಂಡರೆ, ಬೇರೆಯವರಿಗೆ ಮಾತನಾಡಲು ಅವಕಾಶ ಕೊಡುವುದು ಬೇಡವೇ? ಈಗ ಮಾನ್ಯ ಜಗದೀಶ್ ಶೆಟ್ಟರ್‌ರವರು ತಮ್ಮ ಅಭಿಪ್ರಾಯವನ್ನು ಹೇಳುತ್ತಾರೆ. ಅದೇನೆಂದು ಕೇಳೋಣ.

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಜಯಪ್ರಕಾಶ್ ಹೆಗ್ಡೆಯವರು ರೂಲ್ಸ್ ಅನ್ನು ಕೋಟ್ ಮಾಡುತ್ತಾ Governor's Address and Message to the House ಯಾವುದು ಎಂಬ ಬಗ್ಗೆ ಇಲ್ಲಿ ಹೇಳಿದರು. ರೂಲ್ಸ್ ಆಫ್ ಪ್ರೊಸೀಜರ್ ಅನ್ನು ರೆಫರ್ ಮಾಡಿ ಅವರು ಇಲ್ಲಿ ಹೇಳಿದರು. ರೂಲ್ 25ರಲ್ಲಿ ಈ ರೀತಿ ಇದೆ.

> "Governor's Address under Article 175(1) of the Constitution:
> 25. The Speaker may allot time for the discussion of the matters referred to in the Governor's Address under Article 175(1) of the Constitution."

ಅದೇ ರೀತಿಯಾಗಿ 176ರ ಪ್ರಕಾರ Governors Address ಇಲ್ಲಿ ಮಾಡಿದಂತಹ ಸಂದರ್ಭದಲ್ಲಿ, ಅದಕ್ಕೂ ಸಹ ಇಲ್ಲಿ ಒಂದು ರೂಲ್ ಇದೆ.

> "Governor's Address and Message to the House" ಇದರ ಅಡಿಯಲ್ಲಿ Rule 19(2) ಏನು ಹೇಳುತ್ತದೆ ಎಂದರೆ,
>
> "19(2) On the day of Governor's Address, after the Address the House shall sit again for a short while to transact some formal business."

"19(3) The Speaker shall, in consultation with the Leader of the House, alongwith the Leader of Opposition, allot time for the discussion of the matters, referred to in Governor's Address to the Houses under article 176 of the Constitution."

ಅಂದರೆ 176 ಪ್ರಕಾರವೂ ಗೌರ್ನರ್ಸ್ ಅಡ್ರಸ್ ಮೇಲೆ ಡಿಸ್ಕಷನ್‌ಗೆ ಅಲೋ ಮಾಡಲಿಕ್ಕೆ ಸ್ಪೀಕರ್‌ರವರಿಗೆ ಅಧಿಕಾರ ಇದೆ. ಅದೇ ರೀತಿಯಾಗಿ 175(1)ರ ಪ್ರಕಾರವೂ ಸಹಿತ ಮಾನ್ಯ ರಾಜ್ಯಪಾಲರು ಈ ಸದನವನ್ನು ಉದ್ದೇಶಿಸಿ ಅಡ್ರೆಸ್ ಮಾಡಿದಂತಹ ಸಂದರ್ಭದಲ್ಲಿ ಅದರ ಬಗ್ಗೆಯೂ ಇವತ್ತು ಡಿಸ್ಕಷನ್ ಮಾಡಲಿಕ್ಕೆ ಅಧಿಕಾರ ಇದೆ. ಅದಕ್ಕಾಗಿ ಇದರ ಬಗ್ಗೆ differentiate ಮಾಡುವಂಥಾದ್ದು ಸರಿಯಲ್ಲ. ಈ ಎರಡೂ ರೂಲ್‌ಗಳ intention, ಆ ಉದ್ದೇಶವನ್ನು ನಾವು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಮಾನ್ಯ ರಾಜ್ಯಪಾಲರು 19ನೇ ತಾರೀಖಿನಂದು ಏನೊಂದು ಭಾಷಣವನ್ನು ಮಾಡಿದರೋ, ಆ ಭಾಷಣವನ್ನು ಅವರು ಮಾಡಿದ ಮೇಲೆ, ಅವತ್ತು ಯಾರೂ ಅದನ್ನು ಮಂಡನೆ ಮಾಡಲಿಲ್ಲ, ಅದರ ಅನುಮೋದನೆ ಮಾಡಲಿಲ್ಲ, ಹೀಗಾಗಿ ಆ 19ರ ಭಾಷಣ non-existence ಆಗಿದೆ. ಆ ಸರ್ಕಾರವೂ ಹೋಯಿತು.

19ನೇ ತಾರೀಖು ರಾಜ್ಯಪಾಲರು ಭಾಷಣ ಮಾಡಲಿಕ್ಕೆ ನಿಗದಿ ಮಾಡಿದಂತಹ ಸಂದರ್ಭದಲ್ಲಿ 18ನೇ ತಾರೀಖಿಗೆ ಈ ಸರ್ಕಾರಕ್ಕೆ ಬಹುಮತ ಇಲ್ಲ. ಅವತ್ತಿನ ಕಾಂಗ್ರೆಸ್ ಮತ್ತು ಜೆಡಿಎಸ್ ಸಮ್ಮಿಶ್ರ ಸರ್ಕಾರಕ್ಕೆ ಬಹುಮತ ಇರಲಿಲ್ಲ. ಅವತ್ತು ನಿಜವಾಗಿ ಅವರಿಗೆ ಏನಾದರೂ ಸಂವಿಧಾನ ಎತ್ತಿ ಹಿಡಿಯುವ ಮನಸ್ಸು ಇದ್ದಿದ್ದರೆ ಅವತ್ತಿನ ಕಾಂಗ್ರೆಸ್ ಮತ್ತು ಜೆಡಿಎಸ್ ಸರ್ಕಾರ ಅವತ್ತಿನ ಮುಖ್ಯಮಂತ್ರಿಗಳು ತಕ್ಷಣವೇ ರಾಜ್ಯಪಾಲರಿಗೆ ಹೇಳಿ ಕಳುಹಿಸಬಹುದಾಗಿತ್ತು. 19ನೇ ತಾರೀಖಿನ ದಿನ ನೀವು ಸದನವನ್ನು ಅಡ್ರೆಸ್ ಮಾಡಬೇಡಿ, ನಾವು ಬಹುಮತ ಸಾಬೀತು ಮಾಡುತ್ತೇವೆ, ಸಾಬೀತು ಮಾಡಿದ ಮೇಲೆ ಮತ್ತೊಮ್ಮೆ ಭಾಷಣ ಮಾಡಿ ಎಂದು ಹೇಳಬಹುದಾಗಿತ್ತು. 19ನೇ ತಾರೀಖು ಇದ್ದ ಭಾಷಣವನ್ನು ಮುಂದೆ ಹಾಕಬಹುದಾಗಿತ್ತು. ಅದು ಅವತ್ತು ಮಾಡಲಿಲ್ಲ. ಅದು ಏಕೆ ಮಾಡಲಿಲ್ಲ? 19ನೇ ತಾರೀಖು ಬಹುಮತ ಕಳೆದುಕೊಂಡ ಸರ್ಕಾರದ ಭಾಷಣವನ್ನು ರಾಜ್ಯಪಾಲರು ಮಾಡಿದರು. ಅನುಮೋದನೆ ಆಗಲಿಲ್ಲ, ಮಂಡನೆ ಆಗಲಿಲ್ಲ, ಹೀಗಾಗಿ ಅದಕ್ಕೆ ಏನೂ ಅರ್ಥ ಉಳಿಯಲಿಲ್ಲ. ಈ ರೂಲ್ಸ್ ಆಫ್ ಪ್ರೊಸೀಜರ್ ಪ್ರಕಾರ ಸಂವಿಧಾನದ ಇಂಟೆನ್‌ಷನ್ ಇದೆ. ಇಂತಹ ಪರಿಸ್ಥಿತಿಯಲ್ಲಿ ಹೊಸದಾಗಿ ಚುನಾವಣೆ ಆಗಿ ಸರ್ಕಾರ ಬಂದಂತಹ ಸಂದರ್ಭದಲ್ಲಿ ಗೌವರ್ನರ್ ಅಡ್ರೆಸ್ ಮಾಡುವ ಸಂದರ್ಭದಲ್ಲಿ ರೂಲ್ 176 ಇರುವುದು. ಬೇರೆ ಪರಿಸ್ಥಿತಿ ನಿರ್ಮಾಣ ಆದ ಸಂದರ್ಭದಲ್ಲಿ ಬಹುಶಃ ಇವತ್ತು ಎಲ್ಲಾ ರಾಜ್ಯಗಳಲ್ಲಿ ಇದೇ ಪರಿಸ್ಥಿತಿ ನಿರ್ಮಾಣ ಆಗಿರಕ್ಕಿಲ್ಲ. ಒಂದೊಂದು ರಾಜ್ಯದಲ್ಲಿ ಇಂತಹ ಪರಿಸ್ಥಿತಿ ಹಲವಾರು ಸಂದರ್ಭಗಳಲ್ಲಿ ನಿರ್ಮಾಣ ಆಗಬಹುದು. ಅಂತಹ ವಿಶೇಷ ಸಂದರ್ಭದಲ್ಲಿ ಆರ್ಟಿಕಲ್ 175(1) ಏನಿದೆ ಅದನ್ನು ನಾವು ಇಂಟ್ರಪ್ರಿಟೇಷನ್ ಮಾಡಬೇಕಾಗುತ್ತದೆ. ಅದರ ಪ್ರಕಾರ ರಾಜ್ಯಪಾಲರು ಇಲ್ಲಿ ಭಾಷಣ ಮಾಡಿದ್ದಾರೆ. ಇದು ಸಂವಿಧಾನಬದ್ಧ ಎಂದು ನಾನು ಈ ಸಂದರ್ಭದಲ್ಲಿ ಹೇಳ ಬಯಸುತ್ತೇನೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್(ಶ್ರೀನಿವಾಸಪುರ): ಸನ್ಮಾನ್ಯ ಅಧ್ಯಕ್ಷರೆ, ವಿರೋಧ ಪಕ್ಷದ ನಾಯಕರಾದಿಯಾಗಿ ಹಲವಾರು ಜನ ಸವಿಸ್ತಾರವಾಗಿ ಹೇಳಿದ್ದಾರೆ. ನಾನು ಅದನ್ನೇ ರಿಪೀಟ್ ಮಾಡಿ ತಮ್ಮ ಪೇಶೆನ್ಸ್ ಅನ್ನು ಟೆಸ್ಟ್ ಮಾಡುವುದಕ್ಕೆ ಹೋಗುವುದಿಲ್ಲ. ನಾವು ಇವತ್ತಿಗೆ ಈ ವಿಧಾನ ಸಭೆಯ 12ನೇ ಅಧಿವೇಶನದಲ್ಲಿ ಇದ್ದೇವೆ. 11ನೇ ಅಧಿವೇಶನ ಮುಕ್ತಾಯ ಆದಾಗ ಸದನವನ್ನು ಪುನಃ ಕರೆಯತಕ್ಕಂಥ ಅಧಿಕಾರವನ್ನು ತಾವು ಕಳೆದುಕೊಂಡಿರಿ. ಆಗ ಅಸ್ತಿತ್ವದಲ್ಲಿ ಇದ್ದಂತಹ ಸರ್ಕಾರ ಜನವರಿ 12ನೇ ತಾರೀಖು ಸಚಿವ ಸಂಪುಟದ ಸಭೆ ಒಳಗೆ ರಾಜ್ಯಪಾಲರ ಭಾಷಣಕ್ಕೆ ಏನು ಮಾತನಾಡಬೇಕು ಎನ್ನತಕ್ಕಂತಹ ವಿಚಾರಗಳನ್ನು ತೀರ್ಮಾಣ ಮಾಡಿ ಸ್ಪೀಚ್ ಫೈನಲೈಸ್ ಮಾಡಿ ಅವರು ತಮ್ಮ ನಿರ್ಣಯವನ್ನು ಬಹಿರಂಗಪಡಿಸಿದರು. 16ನೇ ತಾರೀಖು ಜನವರಿ ತಿಂಗಳಲ್ಲಿ ವಿಧಾನಸಭೆಯ ಅಧ್ಯಕ್ಷರು, ವಿಧಾನ ಪರಿಷತ್ತಿನ ಸಭಾಪತಿಗಳು ಪಾರ್ಲಿಮೆಂಟರಿ ಅಫೇರ್ಸ್ ಮಂತ್ರಿಗಳು, ತಾವು ನಿಯೋಗದಲ್ಲಿ ಹೋಗಿ ಸನ್ಮಾನ್ಯ ರಾಜ್ಯಪಾಲರಿಗೆ ಸಂಪುಟ ಈ ರೀತಿ ತೀರ್ಮಾನ ಮಾಡಿದೆ, ಜಂಟಿ ಸದನವನ್ನು ಉದ್ದೇಶಿಸಿ ಭಾಷಣ ಮಾಡಲಿಕ್ಕೆ ತಾವು ಬರಬೇಕೆಂದು ಆಹ್ವಾನ ಕೊಟ್ಟಿರಿ. 19ನೇ ತಾರೀಖಿಗೆ ಅವರು ಬರುವುದಕ್ಕೆ ಒಪ್ಪಿಕೊಂಡರು. ನೋಟೀಸ್ ಬಂದು ತಲುಪಿದೆ. That is a very ordinary notice. ಅದರಲ್ಲಿ ಇಷ್ಟೇ ಹೇಳುತ್ತಾರೆ. "ವಿಧಾನ ಮಂಡಲದ ಉಭಯ ಸದನಗಳ ಸದಸ್ಯರುಗಳನ್ನು ಉದ್ದೇಶಿಸಿ ಘನತೆವೆತ್ತ ರಾಜ್ಯಪಾಲರಿಂದ ಭಾಷಣ". ಇಲ್ಲಿ ಆರ್ಟಿಕಲ್ 176 ಎಂದು ಹೇಳಬೇಕಾಗಿಲ್ಲ. ಪ್ರತಿ ವರ್ಷ ರಾಜ್ಯಪಾಲರು ಜಂಟಿ ಸದನಗಳನ್ನು ಉದ್ದೇಶಿಸಿ ಭಾಷಣ ಮಾಡಬೇಕಾದರೆ 176ರ ಕೆಳಗೆ ಹೊರತು, ಮತ್ತೆ ಯಾವುದೂ ಅಲ್ಲ. ಆದ್ದರಿಂದ ನೀವು ಇದರಲ್ಲಿ 176 ಎಂದು ನಮೂದು ಮಾಡಲಿಲ್ಲ. ಅವರು ಬಂದರು, ನಿಮ್ಮ ಆಹ್ವಾನ ಇತ್ತು, ಸಚಿವಸಂಪುಟದ ತಮ್ಮ ಸ್ಪೀಚ್ ತಯಾರು ಮಾಡಿ ಇಟ್ಟಿದ್ದರು, ಅವರು ಓದಿ ಹೋದರು. 18ನೇ ತಾರೀಖು ಇವರ ನಿಯೋಗ ಹೋಗಿತ್ತು, ಇಲ್ಲಿ ಆ ಸರ್ಕಾರ ಬೆಂಬಲ ಕಳೆದುಕೊಂಡಿದೆ, ನೀವು ಬರತಕ್ಕಂಥದ್ದು ಸಾಧು ಅಲ್ಲ ಎಂದು ಅವರಿಗೆ ಮನವರಿಕೆ ಮಾಡಿ ಕೊಟ್ಟಿದ್ದು, ರಾಜ್ಯಪಾಲರಿಗೆ ಅವರದೇ ಆದ ಕರ್ತವ್ಯ ಇದೆ. ಇಲ್ಲಿ ಮಾನ್ಯ ಪ್ರಕಾಶ್‌ರವರಿಗೆ ಕೌಲ್ ಅಂಡ್ ಶಕ್ದರ್ ಪುಟ 180 ರಲ್ಲಿ there are two or three instances. President of India in 1953, summons both the Houses. ನಂತರ ಹಲವಾರು ಕಾರಣಗಳಿಗೆ he adjourns. ಬೇರೆ ಡೇಟ್‌ಗೆ ಮುಂದಕ್ಕೆ ಹಾಕುತ್ತಾರೆ. ಆ ಅಧಿಕಾರ ರಾಜ್ಯಪಾಲರಿಗೆ ಇದೆ. ರಾಜ್ಯಪಾಲರೇ ಒಂದು ವೇಳೆ ಇವರ ನಿಯೋಗ ಹೇಳಿದಂತಹ ವಿಚಾರದಲ್ಲಿ ವಿಶ್ವಾಸ ಬಂದು, ಬೆಂಬಲವನ್ನು ಕಳೆದುಕೊಂಡಿರತಕ್ಕಂತಹ ಸರ್ಕಾರ ತಯಾರು ಮಾಡಿದ ಸ್ಪೀಚ್ ನಾನು ಹೋಗಿ ಓದಬೇಕು, **ಇದು ನಾಳೆ ಇಕ್ಕಟ್ಟಿಗೆ ಅವಕಾಶ ಮಾಡಿಕೊಡುತ್ತದೆ, ಸಂವಿಧಾನಕ್ಕೆ ಅಪಚಾರ ಆದ ಹಾಗಾಗುತ್ತದೆ ಎನ್ನತಕ್ಕಂತಹ ತಿಳುವಳಿಕೆ ಅವರಿಗೆ** ಇದ್ದಿದ್ದರೆ ಅವರು ತಾವೇ ತಾವಾಗಿ ಸೋ ಮೋಟೋ 19ನೇ ತಾರೀಖಿನ ರಾಜ್ಯಪಾಲರ ಭಾಷಣವನ್ನು ಅವಾಯ್ಡ್ ಮಾಡಬಹುದಾಗಿತ್ತು. ಇನ್ನು ಒಂದು ಡೇಟ್‌ಗೆ ಅವರೇ ಹಾಕಿಕೊಂಡಿದ್ದರೆ ನಾವು ಯಾರೂ ಕೇಳುವ ಪರಿಸ್ಥಿತಿಯಲ್ಲಿ ಇಲ್ಲಿ ಇರಲಿಲ್ಲ. Alright. ಅವರೇ ಬಂದು 19ನೇ ತಾರೀಖು, he addressed the House, joint session and went. ಇಂಥದ್ದೇ ಒಂದು ಸನ್ನಿವೇಶ ಪಂಜಾಬಿನಲ್ಲಿ ನಡೆದಿದೆ. ಅಲ್ಲಿ ಏನು ಮಾಡುತ್ತಾರೆ, 176 ನಿಯಮದ ಕೆಳಗೆ ಗವರ್ನರ್ ಅಡ್ರೆಸ್ ಮಾಡಿಹೋದ ಮೇಲೆ ಇಲ್ಲಿ ಆದ ಹಾಗೆ ಸರ್ಕಾರ ಅಧಿಕಾರವನ್ನು ಕಳೆದುಕೊಂಡಿತ್ತು. ಮತ್ತೊಂದು ಸರ್ಕಾರ ಆ ಸ್ಥಾನದಲ್ಲಿ

ಬಂತು. ಆ ಸರ್ಕಾರದವರು ಆ ವಿಧಿ ಏನು ಪ್ರಾರಂಭವಾಗಿತ್ತು ಅನುಚ್ಛೇದ 176 ಕೆಳಗೆ ಆ ಪ್ರಕ್ರಿಯೆ ಪೂರ್ಣಗೊಳಿಸಬೇಕು. ಅದಕ್ಕಾಗಿ ಯಾವ ಸ್ಪೀಚ್‌ನ್ನು ಹಿಂದಿನ ಸರ್ಕಾರ ಮಂಡಿಸಿತ್ತು ಗವರ್ನರ್ ಮುಖಾಂತರ ಓದಿಸಿತ್ತು, ಅದಕ್ಕೆ ಸಂಪೂರ್ಣ ಅಮೆಂಡ್‌ಮೆಂಟ್ ಇಂಟ್ರಡ್ಯೂಸ್ ಮಾಡಿದರು. ತಿದ್ದುಪಡಿಗಳನ್ನು ಸೂಚಿಸಿ ತಮ್ಮದೇ ವಿಚಾರಗಳನ್ನು ಅದರ ಬದಲಾಗಿ ತಂದು ಆ ಅಮೆಂಡ್‌ಮೆಂಟನ್ನು ಕ್ಯಾರಿ ಮಾಡಿ ತನ್ಮೂಲಕ ಗವರ್ನರ್‌ಗೆ ವಂದನಾ ನಿರ್ಣಯ ಸಲ್ಲಿಸಿದರು. ತಮ್ಮ ಮೂಗಿಗೆ ನೇರವಾಗಿ ಮಾತನಾಡುತ್ತಾರೆ, ಅವತ್ತು ಮೆಜಾರಿಟಿ ಹೋಗಿತ್ತು, ಅವತ್ತು ಮೆಜಾರಿಟಿ ಇತ್ತೋ ಇರಲಿಲ್ಲವೋ ಎಂಬುದು ಇತ್ಯರ್ಥ ಆಗುತ್ತಿಮ ಎಂಟನೇ ತಾರೀಖು. ನಮಗೆ ನಾಚಿಕೆ ಇದೆಯೋ ಇಲ್ಲವೋ ಅದು ಬೇರೆ ಪ್ರಶ್ನೆ. ನಿಧಾನಕ್ಕೆ ನಿರ್ಣಯವಾಗುತ್ತದೆ. ಸಂವಿಧಾನ ಒಂದು ಇದೆ. ನಾವುಗಳೆಲ್ಲರೂ ಅದರ ಪ್ರಕಾರ ಕೆಲಸ ಮಾಡಬೇಕು. ಮಾನ್ಯ ಮಾಧುಸ್ವಾಮಿಯವರು ಹೇಳಿದ್ದು, ನಮ್ಮ ಹಿರಿಯರಾದ ಮಾನ್ಯ ಪ್ರಕಾಶ್‌ರವರು ಹೇಳಿದ ಮಾತುಗಳನ್ನು ಕೇಳಿದೆ, ಅವರು ಒಂದು ಕನ್‌ವೆನ್‌ಷನ್ ಹಾಕಬಹುದಲ್ಲಾ ಎಂದು ಅಭಿಪ್ರಾಯಪಟ್ಟರು. ಇಂತಹ ಸ್ಥಿತಿ ಉದ್ಭವವಾದಾಗ ಒಂದು ಎಸ್ಕೇಪ್ ರೂಟ್ ನಮಗೆ ಇರಬೇಕು ಎನ್ನುತಕ್ಕಂತಹ ಮಾತನ್ನು ಹೇಳಿದರು. ಆ ಉದ್ದೇಶವನ್ನು ನಾನು ಸಮರ್ಥಿಸುತ್ತೇನೆ. ಆದರೆ ಇಲ್ಲಿ ಬಳಕೆ ಮಾಡಿಕೊಂಡಿರತಕ್ಕಂತಹ ಮಾರ್ಗ ಏನಿದೆ, ಇದು this is not just right. ಆರ್ಟಿಕಲ್ 176ರ ಕೆಳಗೆ ಅದು ಸರಿಯಲ್ಲ. ನೀವು 1974ರ ಸುಪ್ರೀಂ ಕೋರ್ಟ್ ತೀರ್ಮಾಣ ಹೇಳಿದಿರಿ, ತದ ನಂತರ 1991–92ರಲ್ಲಿ ಏನು ತೀರ್ಮಾನಗಳು ಬಂದಿವೆ, ಆರ್ಟಿಕಲ್ 176ರ ಅನುಚ್ಛೇದ ಒಂದರ ಕೆಳಗೆ ಗವರ್ನರ್ ಮಾಡಬಹುದಾದ ಕೆಲಸ ಅದು ಆತನ ಕರ್ತವ್ಯ. That is his duty. He has to do it. ಬೇರೆ ಇನ್ನು ಯರೋ ಗೌವರ್ನರ್ ಪರವಾಗಿ ಬಂದು ಮಾಡುವುದಕ್ಕಾಗುವುದಿಲ್ಲ. ಆರ್ಟಿಕಲ್ 175ರ ಕೆಳಗೆ ಆತ ಮಾಡತಕ್ಕಂತಹ ಕೆಲಸ ಅದು ಆತನ ಹಕ್ಕು. ಖುಷಿ, ಹಕ್ಕಿಗೆ, ಕರ್ತವ್ಯಕ್ಕೆ ಅಜಗಜಾಂತರ ವ್ಯತ್ಯಾಸವಾಗುತ್ತದೆ. ಅತ್ಯಂತ ನಮ್ರತೆಯಿಂದ ಈ ವಿಚಾರವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಕಾರಣ ಹಕ್ಕಿಗೆ ಅಥವಾ ಖುಷಿಗೆ ಮಾರ್ಪಾಟು ಮಾಡಿಕೊಂಡು ಮಾಡುವುದಕ್ಕೆ ಬರುವುದಿಲ್ಲ. ಅವರ ಕರ್ತವ್ಯವನ್ನು ಅವರೇ ಚಲಾವಣೆ ಮಾಡಿದಾಗ ಈ ಸದನಕ್ಕೆ ಕೆಲವು ವಿಶೇಷ ಹಕ್ಕುಗಳು ಬರುತ್ತವೆ. ಅವರು ಆರ್ಟಿಕಲ್ 176ರ ಕೆಳಗ ಭಾಷಣ ಮಾಡಿ ಹೋದಾಗ, ಆ ಭಾಷಣದಲ್ಲಿ ಸರ್ಕಾರ ತನ್ನ ಕೆಲಸ ಕಾರ್ಯಗಳನ್ನು ತಾನು ಗಳಿಸಿರತಕ್ಕಂತಹ ಅಚೀವ್‌ಮೆಂಟ್ಸ್‌ಗಳನ್ನು, ತಾನು ಮಾಡಲು ಉದ್ದೇಶಿಸಿರತಕ್ಕಂತಹ ಒಳ್ಳೆಯ ಕೆಲಸಗಳನ್ನು ಎಲ್ಲವನ್ನೂ ಒಂದು ರೀತಿಯ ಪಾಲಿಸಿ ಡಾಕ್ಯುಮೆಂಟ್ ಆಗಿ ನಮೂದು ಮಾಡುತ್ತವೆ. ಈ ಸದನಕ್ಕೆ ಅದನ್ನು ಒಪ್ಪತಕ್ಕಂತಹ ತಿದ್ದುಪಡಿ, ಸೂಚಿಸತಕ್ಕಂತಹ, ತಿರಸ್ಕಾರ ಮಾಡತಕ್ಕಂತಹ ಎಲ್ಲಾ ಅಧಿಕಾರವೂ ಇರುತ್ತದೆ. ಆರ್ಟಿಕಲ್ 175ರ ಕೆಳಗೆ ನೀವು ಏನು ಗವರ್ನರ್ ತಾವಾಗಿ ತಾನೇ ಇಷ್ಟಪಟ್ಟು ಬರುತ್ತಾರೆ, ಅಲ್ಲಿ ಚರ್ಚೆಗೆ ಅವಕಾಶ ಇಲ್ಲ. ನೀವು ಮಾಡಿ ಎಂದು ಹೇಳಬಹುದು. ಯಾವ ಹಕ್ಕು ಸಂವಿಧಾನಬದ್ಧವಾಗಿ ನನಗೆ ಬರುತ್ತವೆ ಈ ಸದನದ ಸದಸ್ಯನಾಗಿ ಅದನ್ನು ನಾನು ಕಳೆದುಕೊಂಡು ನಿಮ್ಮ ಕೃಪೆಯಿಂದ ನೀವು ಕೊಡತಕ್ಕಂತಹ ಹಕ್ಕನ್ನು ಚಲಾಯಿಸುವುದಕ್ಕೆ ನಾನು ಈ ಸದನಕ್ಕೆ ಬಂದಿಲ್ಲ. This is my view. ಅವರು 24ನೇ ತಾರೀಖು ಏನು ಈ ಸದನಕ್ಕೆ ಬಂದು ಹೋಗಿದ್ದಾರೆ, ಅವರಿಗೆ ಯಾರು ಕರೆದರು, ತಾವು ಏನಾದರೂ ಸಭಾಧ್ಯಕ್ಷರು ಗೌವರ್ನರ್‌ಗೆ ಪತ್ರ ಬರೆದು ದಯಮಾಡಿ ಬಂದು ಹೋಗಿ ಎಂದು ಹೇಳಿದ್ದರಾ ಅಥವಾ ಅವರು ಏನಾದರೂ ನಿಮಗೆ ಪತ್ರ ಬರೆದು ನಾನು ಬರುವುದಕ್ಕೆ

ಇಷ್ಟಪಡುತ್ತೇನೆ, ನಿಮ್ಮ ಎರಡೂ ಸದನಗಳನ್ನು ಉದ್ದೇಶಿಸಿ ಮಾತನಾಡಬೇಕು ಬರುತ್ತೇನೆಂದು ಹೇಳಿದ್ದರಾ? ಆ ರೀತಿಯ ಕರೆಸ್ಪಾಂಡೆನ್ಸ್ ಏನಾದರೂ ಇದ್ದರೆ ದಯಮಾಡಿ ಅದನ್ನು ಈ ಸಭೆಯ ಮುಂದೆ ಇಡಬೇಕು. ಸರ್ಕಾರಕ್ಕೆ ಅವರನ್ನು ಬನ್ನಿ ಎಂದು ಕರೆಯತಕ್ಕಂಥ ಅಧಿಕಾರ ಇಲ್ಲ. ಸರ್ಕಾರ ಕರೆದರೆ ಆರ್ಟಿಕಲ್ 176, ಅವರಾಗೇ ಬಂದರೆ 175. ಅವರಾಗೇ ಬಂದರಾ ಅಥವಾ ತಾವು ಕರೆದರಾ? ತಾವು ಕರೆದಿದ್ದರೆ ಯಾವ ಉದ್ದೇಶಕ್ಕಾಗಿ ಕರೆದಿರಿ? ಪ್ರೋರೋಗ್ ಆದಾಗ ಸಚಿವಸಂಪುಟ ತೀರ್ಮಾನ ಮಾಡಿತು, ನೀವು ಅದರ ಶಿಫಾರಸ್ಸಿನಂತೆ ಹೋಗಿ ಕರೆದಿರಿ, ಅವರು ಬಂದರು; ಮೊನ್ನೆ ಅಡ್ಜೆರ್ನ್ ಆಗಿತ್ತು, ಸೈನಡೈ ಅಡ್ಜೆರ್ನ್ ಆಗಿತ್ತು, ಪ್ರೋರೋಗ್ ಆಗಿರಲಿಲ್ಲ. ಸೈನಡೈ ಅಡ್ಜೆರ್ನ್ ಆದಾಗ ಹೌಸ್‌ನ್ನು ಸುಮನ್ ಮಾಡತಕ್ಕಂಥ ಅಧಿಕಾರ ತಮಗೆ ಇರುತ್ತದೆ. ನಮಗೆ ಎರಡನೆಯ ನೋಟೀಸ್ ತಮ್ಮ ಕಡೆಯಿಂದ ನಮಗೆ ಏನು ಬಂತು, ಅದರಲ್ಲಿ ಸ್ಪಷ್ಟವಾಗಿ 175(1) ರಲ್ಲಿ ರಾಜ್ಯಪಾಲರು ಅಡ್ರೆಸ್ ಮಾಡುತ್ತಾರೆ ಎನ್ನತಕ್ಕಂಥ ಮಾತನ್ನು ಹೇಳಿದ್ದೀರಿ. ಏಕೆ ಆ ರೀತಿ ಹೇಳಿದಿರಿ? ಪ್ರಜ್ಞಾಪೂರ್ವಕವಾಗಿ ನೀವು 19ನೇಯ ತಾರೀಖಿನ ಮೀಟಿಂಗ್‌ಗೆ ನಮೂದು ಮಾಡದೇ ಇರತಕ್ಕಂಥ ಸಂವಿಧಾನದ ಅನುಚ್ಛೇಧವನ್ನು 24ನೇಯ ಫೆಬ್ರವರಿಗೆ ಹೇಳಬೇಕಾದ ಅಗತ್ಯ ಏನಿತ್ತು? ಇದಕ್ಕೆ ಕಾರಣ ನಾವು ಮೆಮೊರಾಂಡಮ್‌ನ್ನು ಕೊಟ್ಟಿದ್ದೆವು, ರಾಜ್ಯಪಾಲರಿಗೆ ಭಾಷಣ ಮಾಡಲು ಬರುವುದು ಸಲ್ಲದು ಎಂದು ನಾವು ಹೇಳಿದ್ದೆವು. ಆಮೇಲೆ ಅವರು ಒಂದು ತೀರ್ಮಾನಕ್ಕೆ ಬಂದರು. ಬರತಕ್ಕಂಥದ್ದು ನನ್ನ ಹಕ್ಕಿದೆಯಾದ ಕಾರಣ ನಾನು ಬರುತ್ತಿದ್ದೇನೆ ಎಂದು ಅವರು ಎಂಫಸೈಸ್ ಮಾಡಿದರು. ಅದನ್ನು ನಾವು ಪ್ರಶ್ನೆಮಾಡುವುದಿಲ್ಲ. ಇವೆಲ್ಲ ಎಲ್ಲಕ್ಕಿಂತ ಮುಖ್ಯವಾಗಿ ಮಾನ್ಯ ಅಧ್ಯಕ್ಷರೆ, 176ರ ಅನುಚ್ಛೇಧ ಏನಿದೆ ಅದರ ಅನುಗಣವಾಗಿ ರಾಜ್ಯಪಾಲರ ಭಾಷಣ ಆಗಿ ಚರ್ಚೆ ಆಗಿ ತಾರ್ಕಿಕವಾಗಿ ಆ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೆ ಸದನದ ಕಲಾಪಗಳು ಆ ವರ್ಷಕ್ಕೆ ಪ್ರಾರಂಭ ಆದ ಹಾಗೆ ಆಗುವುದಿಲ್ಲ. Any transaction of the business in this House without completion of process under 176(1) amounts to invalidity. It becomes null and void. You cannot resort to 175. 176ರ ಅನುಚ್ಛೇದದಡಿಯಲ್ಲಿ ರಾಜ್ಯಪಾಲರು ಭಾಷಣ ಮಾಡಿ ಹೋದರು. ನಿಜ. ಯಾರೂ ಅದಕ್ಕೆ ಮೋಷನ್ ಆಫ್ ಥ್ಯಾಂಕ್ಸ್ ಮೂವ್ ಮಾಡಲಿಲ್ಲ, ಮತ್ತೆ ಸೆಕೆಂಡ್ ಮಾಡಲಿಲ್ಲ. ಆದ್ದರಿಂದ ಅದು ಸತ್ತುಹೋಯಿತು ಎನ್ನತಕ್ಕಂಥ ಮಾತನ್ನು ಆರಗ ಜ್ಞಾನೇಂದ್ರರವರು, ಸ್ವಲ್ಪ ಹೆಚ್ಚು ಕಡಿಮೆ ಅದೇ ಧಾಟಿಯಲ್ಲಿ ಮಾನ್ಯ ಜಗದೀಶ್ ಶೆಟ್ಟರ್‌ರವರು ಹೇಳಿದ್ದಾರೆ. ಅದೇ ಪದವನ್ನು ಉಪಯೋಗಿಸೋಣ. ಆ ಭಾಷಣ ಸತ್ತುಹೋಯಿತು, ಭಾಷಣ ಮಾಡಿದವರು, ಭಾಷಣ ಕೇಳಿದವರು, ನಾವು ಸತ್ತುಹೋಗಿದ್ದೇವೆಯೇ? ನಾವು ಜೀವಂತ ಇದ್ದೇವೆ. Government is continuous. Government is continuous.

ಶ್ರೀ ಆರಗ ಜ್ಞಾನೇಂದ್ರ: ರಾಜ್ಯಪಾಲರ ಭಾಷಣ ಎಂದರೆ ಏನು ಎಂಬುದನ್ನು ತಾವೇ ದಯವಿಟ್ಟು ಹೇಳಬೇಕು. ತಾವು ಹಿರಿಯರಿದ್ದೀರಿ. ಏನು, ಆ ಸರ್ಕಾರ ಬರೆದುಕೊಟ್ಟಂಥದ್ದು, ಸರ್ಕಾರದ ನೀತಿ ನಿರೂಪಣೆಗಳನ್ನು ನಿರೂಪಿಸತಕ್ಕಂಥದ್ದು, ಇದರ ಬಗ್ಗೆಯೇ ರಾಜ್ಯಪಾಲರ ಬಾಯಿಂದ ಘೋಷಣೆ ಮಾಡಿಸುವುದು. ಆ ಸರ್ಕಾರವೇ ತನ್ನ ಬಹುಮತವನ್ನು ಕಳೆದುಕೊಂಡು ಅದು ಇಲ್ಲದಾಗ ಬಹುಶಃ ಮುಂದೆ ಆ ನೀತಿ ನಿರೂಪಣೆಗಳನ್ನು ಜಾರಿಗೆ ತರುವ ಸಾಮರ್ಥ್ಯ ಅದಕ್ಕೆ ಇಲ್ಲದೇ ಇರುವಾಗ ಆ ಭಾಷಣ ನಿರರ್ಥಕವಾಯಿತು ಎಂದು ನಾನು ಹೇಳಿದ್ದೇನೆ. ಅದು ಹೇಗೆ ಜೀವಂತ ಇರುತ್ತದೆ ಎಂದು ತಾವು ಹೇಳಬೇಕು.

ಶ್ರೀ ಬಸವರಾಜ ರಾಯರೆಡ್ಡಿ: ಅದಕ್ಕೆ ನೀವು ಅಮೆಂಡ್‌ಮೆಂಟ್ ತೆಗೆದುಕೊಂಡು ಬನ್ನಿ. ನೀವು ಆ ಭಾಷಣಕ್ಕೆ ನಿಮ್ಮ ವಿಚಾರಗಳನ್ನು ಅಮೆಂಡ್‌ಮೆಂಟ್‌ನಲ್ಲಿ ತೆಗೆದುಕೊಂಡು ಬನ್ನಿ. ನೀವು ಅದಕ್ಕೆ ಅಮೆಂಡ್‌ಮೆಂಟ್ ಏಕೆ ತರಬಾರದು?

ಶ್ರೀ ಕೆ.ಆರ್. ರಮೇಶ್‌ಕುಮಾರ್: ಮಾನ್ಯ ಅಧ್ಯಕ್ಷರೆ, ನನ್ನ ಎಲ್ಲಾ ಮಾತುಗಳನ್ನು ಅತ್ಯಂತ ಸರಳವಾದ ಕನ್ನಡದ ಭಾಷೆಯಲ್ಲಿಯೇ ಹೇಳಿದ್ದೇನೆ. ಕನ್ನಡ ಮಾತನಾಡುವ ವಿಚಾರದಲ್ಲೂ ಸಹ ನಾವು ಬಾರ್ಡರ್ ಜಿಲ್ಲೆಯವರು, ನಮಗೆ ಸ್ವಲ್ಪ ತೊಂದರೆ ಇದೆ; ಆದರೆ ಆರಗ ಜ್ಞಾನೇಂದ್ರರವರು ಅಚ್ಚ ಕನ್ನಡದಲ್ಲಿಯೇ ಮಾತನಾಡುವ ಮಲೆನಾಡಿನಿಂದ ಬಂದವರು. ಅವರಿಗೆ ವಾದಕ್ಕಾಗಿಯೇ ಮಾತನಾಡಬೇಕು ಎಂದರೆ ನಾನು ಪ್ರತಿವಾದ ಮಾಡುವುದಿಲ್ಲ. ಅರ್ಥ ಆಗಿದೆ ಎನ್ನುವುದಾದರೆ ನಾನು ಸಂತೋಷ ಪಡುತ್ತೇನೆ. ಆ ವಸ್ತು ಏನಿದೆ ಈ ಸದನದ ಮುಂದೆ, ಅದು ಜೀವಂತವಿದೆ. ಅದು ಸತ್ತಿಲ್ಲ. ಒಂದು ವೇಳೆ ಸತ್ತಿದೆ ಎಂದು ಆದರೂ ಕೂಡ ಅಂತ್ಯಕ್ರಿಯೆ ಆಗಬೇಕಲ್ಲಾ. ಅದನ್ನು ದಹನ ಮಾಡುವುದೋ, ಹೂಳುವುದೋ, ಏನಾದರೂ ಒಂದು ಮಾಡಬೇಕಲ್ಲಾ. ಹಣ ಹಾಗೆಯೇ ಇಟ್ಟುಕೊಂಡು ನೀವು ಮದುವೆ ಔತಣಕ್ಕೆ ಮತ್ತೆ ನಾವು ಹೊಸ ಸರ್ಕಾರ ಮಾಡಿದ್ದೇವೆ, ಇವೆಲ್ಲಾ ಮಾಡುತ್ತಿದ್ದೇವೆ, ನೀವೆಲ್ಲಾ ಬನ್ನಿ ಎಂದು ಔತಣದ ಊಟಕ್ಕೆ ಕರೆಯುತ್ತೀರಲ್ಲಾ; ಎಲ್ಲಾದರೂ ಮಾನ್ಯ ಅಧ್ಯಕ್ಷರೆ, ಹಣ ಮನೆ ಮುಂದೆ ಇಟ್ಟುಕೊಂಡು ಔತಣಕ್ಕೆ ಕರೆಯುತ್ತಾರೆಯೇ? ನಮಗೆ ಗೊತ್ತಿಲ್ಲ. ಇದು ನಿಮ್ಮ ಸಂಸ್ಕೃತಿ ಆದರೆ ನಾವು ಅಸಹಾಯಕರಾಗುತ್ತೇವೆ. ನಾವು ಅಸಹಾಯಕರಾಗುತ್ತೇವೆ. ಆಮೇಲೆ ಆರ್ಟಿಕಲ್ 175 ಯಾವುದಕ್ಕೆ ಉಪಯೋಗ ಮಾಡುತ್ತಾರೆ, ನಮಗೆ ಸ್ವಾತಂತ್ರ್ಯ ಬಂದ ದಿವಸದಿಂದ ಈ ಕ್ಷಣದವರೆಗೆ ಭಾರತ ದೇಶದ ರಾಷ್ಟ್ರಪತಿಗಳು ಅನುಚ್ಛೇಧ 86ರ ಕೆಳಗೆ ಅವರಿಗೆ ಏನು ಅವಕಾಶ ಸಿಗುತ್ತದೆ ಅದನ್ನು ಒಮ್ಮೆಯೂ ಕೂಡ ಉಪಯೋಗ ಮಾಡಿಲ್ಲ. ಒಂದು ವೇಳೆ ಈ ರಾಜ್ಯದಲ್ಲಿ ಸಂಭವಿಸಬಾರದಿರುವಂಥದ್ದು ಏನಾದರೂ ಆಗಿಹೋಗಿದಿದ್ದರೆ ಜನರಿಗೆ ಧೈರ್ಯ ಹೇಳುವುದಕ್ಕೆ ಜನಪ್ರತಿನಿಧಿಗಳ ಸದನದ ಮುಖಾಂತರ ರಾಜ್ಯಪಾಲರು ಬಂದು ಜಂಟಿ ಸದನಗಳನ್ನು ಉದ್ದೇಶಿಸಿ ಮಾತನಾಡಿ ಧೈರ್ಯ ಪ್ರೋತ್ಸಾಹ ಕೊಡತಕ್ಕಂಥದ್ದು ಒಂದು. ಅಥವಾ ನಾವೆಲ್ಲರೂ ಸೇರಿ ಹೆಮ್ಮೆ ಪಡತಕ್ಕಂಥ ಅದ್ಭುತವಾದಂಥ, ಎಂದೂ ನಡೆಯಲಾರದಂಥ ಒಂದು ಘಟನೆ, ಸಂತೋಷಕರವಾದ ಘಟನೆ ನಡೆದಿದ್ದರೆ ಅದನ್ನು ಹಂಚಿಕೊಳ್ಳುವುದಕ್ಕೆ ಆಗಬಹುದು. ನಿಮ್ಮ ಕರ್ತವ್ಯ ಲೋಪಕ್ಕೆ, ನಿಮ್ಮ ವಿವೇಚನೆಯ ಕೊರತೆಗೆ, ನಿಮ್ಮ ತಿಳುವಳಿಕೆ ಸಾಕಷ್ಟು ಪ್ರಮಾಣದಲ್ಲಿ ಇಲ್ಲದೇ ಇರುವುದಕ್ಕೆ ರಾಜ್ಯಾಂಗವನ್ನು ಮನಸ್ಸಿಗೆ ಬಂದ ಹಾಗೆ ಉಪಯೋಗ ಮಾಡಿಕೊಂಡು, ಅನುಚ್ಛೇಧಗಳನ್ನು ಬಳಕೆ ಮಾಡಿಕೊಂಡು ನಮಗೆಯೇ ಏಕೆ ಹೀಗೆ ಮಾತನಾಡುತ್ತೀರಿ, ಏಕೆ ಹೀಗೆ ಮಾತನಾಡುತ್ತೀರಿ ಎಂದು ಕೇಳುತ್ತಿದ್ದೀರಿ. ನಾವು ನಿಮಗೆ ಬಲ ಇಲ್ಲವೆಂದು ಹೇಳುತ್ತಿಲ್ಲ. ನಾವು ವಿಶ್ವಾಸವನ್ನು ಕಳೆದುಕೊಂಡಿದ್ದರಿಂದ ನಾವು ಇಲ್ಲಿ ಇದ್ದೇವೆ. ಪಡೆದುಕೊಂಡದ್ದರಿಂದ ನೀವು ಅಲ್ಲಿದ್ದೀರಿ. ಅಥವಾ ಈ ತಾಂತ್ರಿಕ ಕಾರಣಗಳನ್ನು ಹೂಡಿ ನಿಮ್ಮನ್ನು ಕೆಳಗೆ ಇಳಿಸಿಬಿಡಬೇಕು ಎಂದು ನಮಗೇನೂ ಯೋಚನೆ ಇಲ್ಲ. ನಮಗೂ ಆಸೆ ಇದೆ ಒಳಗಡೆ, ನಾವು ಕೆಟ್ಟುಹೋಗಿದ್ದೇವೆ. ನಿಮಗೆ ಅವಕಾಶ ಸಿಕ್ಕಿಲ್ಲ, ನೀವೂ ಒಂದು ಪ್ರಯೋಗ ಮಾಡುವುದಕ್ಕೆ ಹೊರಟಿದ್ದೀರಿ. ಒಳ್ಳೆಯ ಕೆಲಸವನ್ನು ಮಾಡಿ. ನಿಮ್ಮಿಂದ ಸಾಧ್ಯವಾದರೆ ಒಳ್ಳೆಯದನ್ನು ನಾವೂ ಕಲಿತುಕೊಳ್ಳುತ್ತೇವೆ. ತಿದ್ದಿಕೊಳ್ಳುವುದು ಇದ್ದರೆ ತಿದ್ದಿಕೊಳ್ಳುತ್ತೇವ. ತಪ್ಪು ಮಾಡಿದರೆ ಶಿಕ್ಷೆ ಮಾಡುವುದಕ್ಕೆ ಜನರಿದ್ದಾರೆ. ಏಕಾಏಕಿ ಏನೋ ಹಿಕ್ಮತ್‌ನ್ನು

ಮಾಡಿ ನಿಮ್ಮನ್ನು ಕಡೆಗೆ ತಳ್ಳಿಬಿಡಬೇಕು ಅಥವಾ ನಿಮ್ಮ ಮೇಲೆ ಏನೋ ಒಂದು ಗೂಬೆ ಕೂರಿಸಬೇಕುಎನ್ನತಕ್ಕಂಥದ್ದು ಅಲ್ಲ. ನಾವು ನಮ್ಮದೇ ಆದ ಕೆಲಸವನ್ನು ಮಾಡುವುದಕ್ಕೆ ಒಂದು ವಿಧಾನ ಇರುತ್ತದೆ. ಈಗ ಮದುವೆ ಬಗ್ಗೆ ಹೇಳುವುದಾದರೆ ಅಧ್ಯಕ್ಷರೆ, ಒಂದೊಂದು ಧರ್ಮದಲ್ಲಿ ಒಂದೊಂದು ರೀತಿಯಲ್ಲಿ ಮದುವೆ ಮಾಡುತ್ತಾರೆ. ಮದುವೆ ಉದ್ದೇಶ ಏನು? Sir, as Napolean puts it, 'Love is an affair between two others belonging to opposite sex with mutual consent in absolute privacy.' What is leadership? Leadership is a transaction between the people and the leader in open, in public. This is a matter relating to governance

ನೀವು ಅಧಿಕಾರಕ್ಕೆ ಬಂದಿರಿ, ಸಂವಿಧಾನಬದ್ಧವಾಗಿ ಎಲ್ಲವೂ ನಡೆಯಬೇಕು, ಪ್ರಮಾಣವಚನ ಸ್ವೀಕಾರ ಮಾಡಿದಿರಿ. ಕುಳಿತಿದ್ದೆವು ಖುಷಿಯಾಯಿತು. ಸಂತೋಷವಾಯಿತು. ನಾವು ಅದನ್ನು ಸ್ವಾಗತ ಮಾಡುತ್ತೇವೆ. ಆದರೆ ಮುಂದಿನ ಕೆಲಸಗಳೆಲ್ಲವೂ ಸಂವಿಧಾನಬದ್ಧವಾಗಿಯೇ ನಡೆಯಬೇಕು. ಮ್ಯಾರೇಜ್ ಫಾರ್ಮುಲೈಸ್ ಆಗಬೇಕು. ನಿಮ್ಮ ಸರ್ಕಾರದ ಪಾಲಿಸಿಯನ್ನು ಅವರು ಒಪ್ಪಬೇಕು, ಓದಬೇಕು ಅವರು. ಈ ಸದನ ಅದಕ್ಕೆ ಅಪ್ರೂವ್ ಮಾಡಬೇಕು. ಆದರೆ ನೀವು ನಾಮಕರಣಕ್ಕೆ ಬಂದುಬಿಟ್ಟಿದ್ದೀರಿ ಆಗಲೀ. ಮದುವೆಯೇ ಆಗದೇ ಮಗುವಿಗೆ ನಾಮಕರಣ ಮಾಡಿದರೆ ಅದಕ್ಕೇನು ತಾತ್ಪರ್ಯ? ನನಗಂತೂ ಗೊತ್ತಿಲ್ಲ. ತಮ್ಮ ಊಹೆಗೇ ಬಿಡುತ್ತೇನೆ. ಈ ಸದನವನ್ನು ಅದಕ್ಕಿಂತ ಹೆಚ್ಚು ಕೆಳಗೆ ಇಳಿಸುವುದಕ್ಕೆ ನಮ್ಮ ಮನಸ್ಸು ಒಪ್ಪುವುದಿಲ್ಲ. ಇಂಥದ್ದಕ್ಕೆ ತಾವು ಭಾಗಿಗಳು ಆಗಬಹುದಾ? ಏನು ನಾವು ಪ್ರತಿಷ್ಠೆ ಕಳೆದು ಕೊಳ್ಳುವುದು ಏನಿದೆ, ಇದನ್ನು ವಿತ್‌ಡ್ರಾ ಮಾಡಿ ಅಮೆಂಡ್‌ಮೆಂಟ್ಸ್‌ನ್ನು ಇಂಟ್ರಡ್ಯೂಸ್ ಮಾಡಿ ಕ್ಯಾರಿ ಮಾಡುವುದರಿಂದ ನಿಮಗೆ ಆಗುವುದಾದರೂ ಏನು ಅಥವಾ ಇಡೀ ಭಾರತ ದೇಶದ ಸಂವಿಧಾನವನ್ನು ತಿದ್ದುಪಡಿ ಮಾಡತಕ್ಕಂಥ ಅಧಿಕಾರ ಈ ಸದನಕ್ಕಿದೆಯೇ? ಈ ಕೌಲ್ ಅಂಡ್ ಶಕ್ದ್‌ರ್, ಮಾನ್ಯ ಪ್ರಕಾಶ್ ಸಾಹೇಬರೆ, ಪ್ರೀಫೇಸ್, ನಮ್ಮ ಮಾವಲಂಕರ್, ಮೊದಲ ಅಧ್ಯಕ್ಷರು, ಇದಕ್ಕೆ ಮುನ್ನುಡಿ ಬರೆಯುವಾಗ ಶುಭಾಶಯಗಳನ್ನು ಅವರು ಹೇಳುತ್ತಾರೆ.

> "For real democracy, one has to look not merely in the provisions of the Constitution, or the rules and regulations made for the conduct of business in the Legislature, but one has to foster a real democratic spirit in those who form the Legislature. If this fundamental is borne in mind, it will be clear that though questions would be decided by majorities, parliamentary government will not possible if it is reduced to a mere counting of heads or hands . . . . . .
>
> " . . . . If we are to go merely by majority we shall be fostering the seeds of fascism, violence and revolt. If on the other hand, it could help to foster a spirit of tolerance, a spirit of freedom of discussion and a spirit of understanding, we shall be fostering the spirit of democracy."

These are the words uttered by Mr. Mavlankar the first Speaker of Indian Lok Sabha. ನಿಮಗೆ ಸಂಖ್ಯಾಬಲ ಇದೆ. If you want to decide otherwise ನಮ್ಮದೇನೂ ದೊಡ್ಡ ತಕರಾರು ಇಲ್ಲ. ಆಮೇಲೆ ನಾವು ಏನು ಮಾಡಬೇಕೆಂದು ಯೋಚನೆ ಮಾಡಬೇಕಾಗುತ್ತದೆ. We will see to it. ತಮ್ಮಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ ಮಾನ್ಯ ಪ್ರಕಾಶ್‌ರವರೆ, ನೀವು ಇಂಪೀರಿಯಲ್ ಗೌವರ್ನ್‌ಮೆಂಟ್ ಪ್ರಶ್ನೆ ಬಗ್ಗೆ ಕೂಡ ಹೇಳಿದಿರಿ. ಇಂಪೀರಿಯಲ್ ಗೌವರ್ನ್‌ಮೆಂಟ್‌ನಲ್ಲಿ Crown's ಅಡ್ರೆಸ್ ಆಗುತ್ತಿತ್ತು. ಅದನ್ನೇ ಅನುಸರಿಸಿಕೊಂಡು ನಾವು ಇಲ್ಲಿ ಪ್ರಾರಂಭ ಮಾಡಿದೆವು. ಎವ್ವೆರಿ ಸೆಷನ್ ಅಡ್ರೆಸ್ ಮಾಡುತ್ತಿದ್ದರು. ಆರ್ಥಿಕವಾಗಿ ದುಬಾರಿಯಾಗುತ್ತದೆ, ಸಮಯ ಹಾಳಾಗುತ್ತದೆ, ಅದು ಬೇಡವೆಂದು 87(1)(ಬಿ) ಅದನ್ನು ತಿದ್ದುಪಡಿ ಮಾಡಿ ಪ್ರತಿ ಕ್ಯಾಲೆಂಡರ್ ಇಯರ್‌ನಲ್ಲಿ ನಾವು ಮೊದಲನೇ ಕಲಾಪ ಗೌರರ್ನ್‌ರ್ಸ್ ಅಡ್ರೆಸ್ ಅಥವಾ ಪ್ರೆಸಿಡೆಂಟ್ ಅಡ್ರೆಸ್ ಇಟ್ಟುಕೊಳ್ಳಬೇಕು. ಅಲ್ಲೆ ಸರ್ಕಾರ ಹೊಸದಾಗಿ ಹೊಸ ವರ್ಷದ ಶುಭಾಶಯಗಳನ್ನು ಜನರಿಗೆ ತಿಳಿಸಿ, ಹೊಸ ಕಾರ್ಯಕ್ರಮಗಳನ್ನು ಹಾಗೂ ಹಿಂದೆ ಮಾಡಿರತಕ್ಕಂಥ ಸಾಧನೆಗಳನ್ನು ತಿಳಿಸಿ, ಮತ್ತೆ ತಮ್ಮ ಕೆಲಸಕ್ಕೆ ಮುಂದೆ ಹೆಜ್ಜೆ ಇಡಬೇಕು. ಅನಂತರ it is presumed that the functioning of the Legislature commences. Otherwise, the legislator has not woken up at all; legislature has not woken up. It is under deep sleep after the prorogation. ಮುಕ್ತಾಯಗೊಂಡಂತಹ ಅಧಿವೇಶನ ಪುನಃ ಪ್ರಾರಂಭವಾಗಿದೆ, ಚಾಲೂ ಆಗಿದೆ, ಅದು ಸಕ್ರಿಯವಾಗಿದೆ ಎನ್ನಬೇಕಾದರೆ ಈ ಪ್ರಕ್ರಿಯೆ ಏನಿದೆ ಅದು ಪೂರ್ಣಗೊಳ್ಳಲೇಬೇಕು. ನಾನು ಅದನ್ನು ಪುನಃ ಪುನಃ ಒತ್ತಿ ಹೇಳುವುದಕ್ಕೆ ಹೋಗುವುದಿಲ್ಲ. ಆಲ್‌ರೈಟ್ ಇವತ್ತು ಥ್ಯಾಂಕ್ಸ್ ಹೇಳಬೇಕೆಂದು ಹೇಳುತ್ತಾರೆ. ಮಾನ್ಯ ಮಹದೇವಪ್ರಸಾದ್‌ರವರ ರೆಸಲೂಷನ್ ಅನ್ನು ನಾವು ಈಗ ಗಣನೆಗೆ ತೆಗೆದುಕೊಳ್ಳುತ್ತೇವೆಂದೂ ಕೂಡ ಇಟ್ಟುಕೊಳ್ಳೋಣ. ಈಗ ಯಾವ ಸ್ಪೀಚ್‌ಗೆ ಥ್ಯಾಂಕ್ಸ್ ಹೇಳಬೇಕು? ಎರಡು ಸ್ಪೀಚ್ ಇವೆ. 24ರಂದು ಮಾಡಿದಂತಹ ಸ್ಪೀಚ್, ಅವರಿಗೆ ಖುಷಿ ಬಂದು ಮಾಡಿದಂತಹ ಸ್ಪೀಚ್. ಅದಕ್ಕೆ ಮೊದಲು 19ನೇ ತಾರೀಖಿನಂದು ಮಾಡಿರತಕ್ಕ ಸ್ಪೀಚ್ ಸಂವಿಧಾನಬದ್ಧವಾಗಿ ಅವರು ನಿಭಾಯಿಸಲೇ ಬೇಕಾದಂತಹ ಕರ್ತವ್ಯವನ್ನು ನಿಭಾಯಿಸಿ ಮಾಡಿರತಕ್ಕಂಥಾದ್ದು. ನಿಮ್ಮದೇ ಬಹಳ ಕಷ್ಟ ಪಾಪ. ನೀವು ದಿನಾಂಕ 12ರಂದು ಜನವರಿ ತಿಂಗಳಲ್ಲಿ ಅವರ ಸಂಪುಟದಲ್ಲಿದ್ದಿರಿ. ಆ ಸ್ಪೀಚ್‌ಗೂ ಸೈ. ಮತ್ತೆ 24ನೇ ತಾರೀಖು ಸಂಪುಟ ಸಚಿವರ ಸಭೆಗೂ ಹಾಜರಿದ್ದಿರಿ, ಅದಕ್ಕೂ ಸೈ, ನೀವ್ಯಾರಿಗೆ ಥ್ಯಾಂಕ್ಸ್ ಹೇಳುತ್ತೀರಿ?

ಶ್ರೀ ಎನ್. ಚಲುವರಾಯಸ್ವಾಮಿ(ಸಾರಿಗೆ ಸಚಿವರು): ಮಾನ್ಯ ರಮೇಶ್ ಕುಮಾರ್‌ರವರೇ ಬಹಳ ಸೊಗಸಾಗಿ ಮಾತನಾಡುತ್ತಿದ್ದೀರಿ. ನಾವು ಕೇಳಬೇಕೆಂದು ಆಸೆ, ನೀವು ಮಾತನಾಡುವಾಗ ಯಾರೂ ತೊಂದರೆ ಮಾಡುತ್ತಿಲ್ಲ. ದಿನಾಂಕ 18ರಂದು ನಾವು 6 ಗಂಟೆಗೆ ರೆಸಿಗ್ನೇಷನ್ ಕೊಟ್ಟು ನಾವು ರಾಜಭವನಕ್ಕೆ ಹೋಗಿ, 45 ಜನ ನಾವು ವಿಶ್ವಾಸವನ್ನು ವಾಪಸ್ಸು ತೆಗೆದುಕೊಂಡಿದ್ದೇವೆ. ನಾವು ನೈತಿಕವಾಗಿ ರಾಜೀನಾಮೆ ಕೊಟ್ಟಿದ್ದೇವೆ, ಅವರು ಅಕ್ಸೆಪ್ಟ್ ಮಾಡಲಿಲ್ಲವೆಂದರೆ ಅದಕ್ಕೆ ನಾವು ಜವಾಬ್ದಾರನಲ್ಲ. ನಾನು ಒಂದು ನಿಮಿಷ ಸಮಯ ಕೊಡಿ ಎಂದು ಕೇಳಿ ಮಾತನಾಡಿದ್ದೇನೆ, ಈಗ ತಾವು ಮುಂದುವರೆಸಿ.

ಶ್ರೀ ಕೆ.ಆರ್. ರಮೇಶ್‌ಕುಮಾರ್: ನಾನು ನಿಮ್ಮ ಪ್ರಾಮಾಣಿಕತೆಯನ್ನು ಮೆಚ್ಚುತ್ತೇನೆ. ಇವರು ರಾಜೀನಾಮೆಯನ್ನು 18ನೇ ತಾರೀಖಿನಂದು ಕೊಟ್ಟಿದ್ದು, ಕ್ಯಾಬಿನೆಟ್‌ನಲ್ಲಿ ತೀರ್ಮಾನವಾಗಿದ್ದು 12ನೇ ತಾರೀಖು. 12ನೇ ತಾರೀಖು ಸಚಿವ ಸಂಪುಟದಲ್ಲಿ ಈಶ್ವರಪ್ಪನವರೇ, ನಿಮ್ಮ ಸಹದ್ಯೋಗಿಗಳು ಮಾನ್ಯ ಧರ್ಮ್‌ಸಿಂಗ್‌ರವರ ಸಚಿವ ಸಂಪುಟದಲ್ಲಿ ಹಾಜರಿದ್ದು, ಆ ಗೌವರ್ನ್‌ರ್ ಅಡ್ರೆಸ್‌ಗೆ ಇವರು ಒಪ್ಪಿಗೆ ಕೊಟ್ಟಿದ್ದಾರೆ' ಆದರೆ ಇವರು ರಾಜೀನಾಮೆ ಕೊಟ್ಟಿದ್ದು ಯಾವತ್ತೆಂದರೆ 18ನೇ ತಾರೀಖು. ಆ ದಿವಸದ ಪ್ರೊಸೀಡಿಂಗ್ಸ್‌ಗೆ ಇವರು ಪಾರ್ಟಿ ಹೌದೋ? ಅಲ್ಲವೋ?

ಶ್ರೀ ಜೆ.ಸಿ. ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೆ, 18ನೇ ತಾರೀಖು ರಾತ್ರಿ ನಿಮ್ಮ ನಾಯಕರು ಸನ್ಮಾನ್ಯ ಎಂ.ಪಿ. ಪ್ರಕಾಶ್‌ರವರು ಟಿ.ವಿ. ಯಲ್ಲಿ ಯಾನಾನಿಮಸ್ ಡಿಸೀಷನ್ ಆಗಿದೆ ಗೌವರ್ನ್‌ರ್ಸ್ ಅಡ್ರೆಸ್ 19ನೇ ತಾರೀಖು ಆಗುವುದು ಎಂದು ಹೇಳಿದರು. ಅದಕ್ಕೆ ತಾವೇನು ಹೇಳುತ್ತೀರಿ? 18ನೇ ತಾರೀಖೂ ಕೂಡ ಅವರು ಟಿ.ವಿ ನಲ್ಲಿ ಹೇಳಿದರು. ಗೌವರ್ನ್‌ರ್ಸ್ ಅಡ್ರೆಸ್ ಮಾಡುತ್ತಾರಾ ಇಲ್ಲವೇ ಎಂದಿದ್ದಕ್ಕೆ ಕ್ಯಾಬಿನೇಟ್ is unanimous, Governor will address on 19th ಅಂತ ಹೇಳಿಕೆಯನ್ನು ಟಿ.ವಿ. ಯಲ್ಲಿ ಕೊಟ್ಟರು. You are a party for that. You cannot go away.

ಶ್ರೀ ಬಸವರಾಜ್ ರಾಯರೆಡ್ಡಿ: ಮಾನ್ಯ ಹೊರಟ್ಟಿ ಅವರು ಈ ಸದನದ ಸದಸ್ಯರಲ್ಲ. ಆದರೂ ಇಲ್ಲಿ ಬಂದು ಕೂತರು.

ಶ್ರೀ ಜೆ.ಸಿ. ಮಾಧುಸ್ವಾಮಿ: ಸದನದ ಸದಸ್ಯರಲ್ಲದಿದ್ದರೂ ಕೂಡ ಅವರು ಅಲ್ಲಿ ಬಂದು ಕುಳಿತರು. ನಾವು ನೀವು ಹೇಗೆ ಬಂದು ಕುಳಿತಿರಿ ಎಂದು ಕೇಳಿದೆವು. ನಾನೇ ರೈಸ್ ಮಾಡಿದೆ ಹೊರಟ್ಟಿ cannot sit here ಅಂತ.

ಶ್ರೀ ಎಂ.ಪಿ. ಪ್ರಕಾಶ್: ಸನ್ಮಾನ್ಯ ಅಧ್ಯಕ್ಷರೆ, ಇಲ್ಲಿ ಬಹಳ ಸೂಕ್ಷ್ಮವಾಗಿ ಇರುವಂತಹ ವಿಷಯ ಪ್ರಸ್ತಾಪಿಸಲ್ಪಟ್ಟಿದೆ. ಕ್ಯಾಬಿನೆಟ್ ಸಬ್ ಕಮಿಟಿಯನ್ನು ನಮ್ಮ ನಾಯಕರಾದಂತಹ ಧರ್ಮಸಿಂಗ್‌ರವರು ವಹಿಸಿಕೊಟ್ಟಮೇಲೆ ಮಾನ್ಯ ಹೆಚ್.ಕೆ. ಪಾಟೀಲ್‌ರವರು ಮಾನ್ಯ ಖರ್ಗೆಯವರು ಹಾಗೂ ನಮ್ಮ ಉಪಸಮಿತಿ ಅದರ ವಿಧಿವಿಧಾನಗಳನ್ನೆಲ್ಲಾ ನೋಡಿ ಯಾವ್ಯಾವ ವಿಚಾರಗಳು ರಾಜ್ಯಪಾಲರ ಭಾಷಣದಲ್ಲಿ ಇರಬೇಕು ಎನ್ನುವುದನ್ನು ಹೇಳಿ, ಆ ಉಪಸಮಿತಿಯ ವರದಿಯನ್ನು ಸಚಿವ ಸಂಪುಟದ ಮುಂದೆ ತಂದು ಅದರ ಒಪ್ಪಿಗೆಯನ್ನು ಪಡೆದು ಅದರ ಮೂಲಕವಾಗಿ 19ನೇ ತಾರೀಖು ಮಾನ್ಯ ರಾಜ್ಯಪಾಲರು ತಮ್ಮ ಭಾಷಣವನ್ನು ಸದನಕ್ಕೆ ದಯಪಾಲಿಸಿದ್ದಾರೆ. ಅದರಲ್ಲಿ ಯಾವುದೇ ಭಿನ್ನಾಭಿಪ್ರಾಯವೆನ್ನುವುದು ಇಲ್ಲ. ಆದರೆ ದಿನಾಂಕ 24ನೇ ತಾರೀಖಿನಂದು ಮಾಡಿರುವಂತಹ ರಾಜ್ಯಪಾಲರ ಭಾಷಣ ಏನಿದೆ ನಾವು ಯೋಚನೆ ಮಾಡುವಂತಾದ್ದು, 19ನೇ ತಾರೀಖು ಮಾಡಿದಂತಹ ಭಾಷಣ ಅದು ಕಡೆಗಣಿಸಲ್ಪಟ್ಟಿದೆ, ಅಥವಾ ಸತ್ತುಹೋಗಿದೆ ಎನ್ನುವಂತಹ ಶಬ್ದವನ್ನು ಏನು ಮಾನ್ಯ ಜ್ಞಾನೇಂದ್ರರವರು ಬಳಸಿದರು ಅದು ಆಗಬಹುದು. ಅಥವಾ ಇಂಗ್ಲೀಷ್‌ನ ಶಬ್ದವನ್ನೂ ಬಳಸುವುದಾಗಿದ್ದರೆ infructuous. ಅದು infructuous ಆಗಿರುವುದರಿಂದ . . . ಎಲ್ಲಿ ಆಗಿದೆ ಎನ್ನುವುದು ಬೇರೆ ವಿಷಯ.

Sri Basavaraj Raya Redday: Infructuous ಆಗುವ ಪ್ರಶ್ನೆ ಬರುವುದಿಲ್ಲ. It is eternal. Who has declared it as infructuous?

ಶ್ರೀ ಜಗದೀಶ್ ಶೆಟ್ಟರ್: ಕಾಂಗ್ರೆಸ್ ನೇತೃತ್ವದ ಸಮ್ಮಿಶ್ರ ಸರ್ಕಾರ ಬಹುಮತ ಕಳೆದುಕೊಂಡ ಮೇಲೆ ಇನ್ನೇನು ಉಳಿಯಿತು? ಅವತ್ತಿನ ಸಮ್ಮಿಶ್ರ ಸರ್ಕಾರ ಕಾಂಗ್ರೆಸ್ ನೇತೃತ್ವದ ಸರ್ಕಾರ ಬಿದ್ದುಹೋದ ಮೇಲೆ ಬಹುಮತ ಕಳೆದುಕೊಂಡ ಮೇಲೆ ಅದರ ಅಸ್ತಿತ್ವ ಏನು ಉಳಿಯಿತು?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಅದು ಇನ್‌ಫ್ರಕ್ಟ್ಯುಯಸ್ ಎಂದು ಡಿಕ್ಲೇರ್ ಮಾಡಬೇಕಾಗಿರುವುದು ಯಾರು? It is not the government. It is the Speaker.

ಶ್ರೀ ಎಂ.ಪಿ. ಪ್ರಕಾಶ್: ಈ ಸದನ ಅನ್ನುವುದು ಎಲ್ಲಾ ಅಂತರ್ಗತವಾಗಿರತಕ್ಕಂಥ ಅಧಿಕಾರವನ್ನು ಪಡೆದಿರತಕ್ಕಂಥಾದ್ದು. ಅವತ್ತು ಒಂದು ಅಸಾಮಾನ್ಯವಾಗಿರುವಂತಹ ಸ್ಥಿತಿ ನಿರ್ಮಾಣವಾಗಿದ್ದರಿಂದ, ಮಾನ್ಯ ಅಧ್ಯಕ್ಷರು ಅದು ಇನ್‌ಫ್ರಕ್ಟ್ಯುಯಸ್ ಎನ್ನುವಂತಹ ಮಾತನ್ನು ಹೇಳಲಿಲ್ಲ ಎನ್ನುವಂತಹ ಒಂದೇ ತಾಂತ್ರಿಕ ಕಾರಣಗಳಿಗೆ ಜೋತುಬಿದ್ದು, ದಿನಾಂಕ 24ರಂದು ಮಾನ್ಯ ರಾಜ್ಯಪಾಲರು . . . . . .

(ಗೊಂದಲ)

Sri R.V. Deshpande: He is the man who has to give the burial. Without giving the burial how can you say?

(ಗೊಂದಲ)

ಶ್ರೀ ಎಂ.ಪಿ. ಪ್ರಕಾಶ್: ನಾನು ಆಗಲೇ ಹೇಳಿದ್ದೇನೆ, ದಯವಿಟ್ಟು ಪ್ರತಿಯೊಬ್ಬ ಸದಸ್ಯನಿಗೂ ಅವರ ಅಭಿಪ್ರಾಯವನ್ನು ಹೇಳುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಡಿ. ಪ್ರತಿ ಹೆಜ್ಜೆಗೆ ಬಂದು ನೀವು ನಿಮ್ಮದೇ ಆದಂತಹ ಮಾತುಗಳನ್ನು ಹೇಳುವುದಾದರೆ, ಆಗ ಇಷ್ಟು ಜನ ಸದಸ್ಯರು ಇರಬೇಕಾದಂತಹ ಅಗತ್ಯ ಇರಲಿಲ್ಲ. ನೀವೊಬ್ಬರೆ ಕಲಾಪಗಳನ್ನು ನಡೆಸಿಕೊಂಡು ಹೋಗಬಹುದಾಗಿತ್ತಲ್ಲಾ. You have your say. ನಾನು ಆ ವಿಚಾರವನ್ನು ಮಾನ್ಯ ರಮೇಶ್‌ಕುಮಾರ್‌ರವರು ಪ್ರಸ್ತಾಪ ಮಾಡಿದ್ದರಿಂದ ಇಲ್ಲಿ ಎತ್ತಲೇ ಬೇಕಾಗಿದೆ. 18ನೇ ತಾರೀಖು ಸಚಿವ ಸಂಪುಟ ಒಪ್ಪಿಗೆ ಕೊಟ್ಟಿರುವುದನ್ನು ದಿನಾಂಕ 19ನೇ ತಾರೀಖಿನಂದು ಮಾನ್ಯ ರಾಜ್ಯಪಾಲರು ಭಾಷಣ ಮಾಡಿದ್ದಾರೆ. ಅದರಲ್ಲಿ ಯಾವುದೇ ಭಿನ್ನಾಭಿಪ್ರಾಯವಿಲ್ಲ. ಆದರೆ 24ನೇ ತಾರೀಖು ಮಾಡಿರುವಂತಹ ರಾಜ್ಯಪಾಲರ ಭಾಷಣ ಕೂಡ ಸಚಿವ ಸಂಪುಟ ಸಭೆ ಒಪ್ಪಿಗೆ ಕೊಟ್ಟಿರುವಂಥಾದ್ದನ್ನು ಮಾನ್ಯ ರಾಜ್ಯಪಾಲರಿಗೆ ಕಳುಹಿಸಿಕೊಟ್ಟಮೇಲೆ, ಅವರು ಇಲ್ಲಿ ಅದನ್ನು ದಯಪಾಲಿಸಿದ್ದಾರೆ. ನಮ್ಮ ದೃಷ್ಟಿಯಲ್ಲಿ ಬಹುಮತ ಕಳೆದುಕೊಂಡಂತಹ ಸಂದರ್ಭದಲ್ಲಿ ನೀವು ಯಾವುದೇ ವಿಚಾರವನ್ನು ಹೇಳುವುದಕ್ಕೆ ಸಾಧ್ಯವಾಗಲಿಲ್ಲ. ನೀವು ಹೇಳಬಹುದಾಗಿತ್ತು ಅದು ಇನ್‌ಫ್ರಕ್ಟ್ಯುಯಸ್ ಎಂದು. 1991ನೇ ಮೇ 21ನೇ ದಿನಾಂಕದಂದು ಅಲ್ಲಿ ಲೋಕಸಭಾ ಸ್ಪೀಕರ್ ಹೇಳಿದಂತಹ ಮಾತನ್ನೇ ತಾವು ಹೇಳಬಹುದಾಗಿತ್ತು. ಆದರೆ ತಾವು ಹೇಳಿಲ್ಲ. ಆ ಕಾರಣಕ್ಕಾಗಿ ಅದು ಸದನದ ಸ್ವತ್ತಾಗಿ ಉಳಿದಿದೆ ಎನ್ನುವಂತಹ ಮಾತನ್ನು ನೀವು ಹೇಳುತ್ತೀರಿ. ಆದರೆ ಅದು ಸದನದ ಸ್ವತ್ತು ಆಗಿದ್ದರೂ ಕೂಡ ಅದು infructuous. ನೀವು ಹೇಳದೇ ಇದ್ದರೂ ಕೂಡ ಆ ರೀತಿಯಾಗುತ್ತದೆ. ಏಕೆಂದರೆ ಮುಂದೆ ನಡೆದಿರತಕ್ಕಂಥ ಘಟನೆಗಳು, ಅವತ್ತು ಯಾವುದನ್ನೂ ಕೂಡ ನಿರ್ಣಯ ಮಾಡುವುದಕ್ಕೆ ಆಗಲಿಲ್ಲ. ಇಡೀ ಸಭೆ ಅದು ಗೊಂದಲಮಯವಾಗಿತ್ತು. ಅಶಿಸ್ತಿಗೆ

ಒಳಪಟ್ಟಿತ್ತು. It was not in order ಎನ್ನುವ ಮಾತನ್ನೂ ಕೂಡ ತಾವು ತಿಳಿಸಿ ತಾವು ವರದಿಯನ್ನು ನಿಮ್ಮ ಅಸಹಾಯಕತೆಯನ್ನು ಮಾನ್ಯ ರಾಜ್ಯಪಾಲರಿಗೆ ತಿಳಿಸಿದಿರಿ. ಆ ಕಾರಣಕ್ಕಾಗಿಯೇ ಆಗಿರತಕ್ಕಂಥ ಈಗ ಮಾನ್ಯ ಮಹದೇವಪ್ರಸಾದ್‌ರವರು ಮಂಡಿಸಬೇಕಾಗಿರುವಂಥಾದ್ದು 24ನೇ ತಾರೀಖಿನಂದು ನಡೆದಿರುವಂತಹ ಮಾನ್ಯ ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯವನ್ನು ಅವರು ಮಂಡಿಸುತ್ತಾರೆ. ಆ ವಂದನಾ ನಿರ್ಣಯಕ್ಕೆ ತಾವು ಒಪ್ಪಿಗೆಯನ್ನು ಕೊಡಬೇಕು. ಅದನ್ನು ಮೂವ್ ಮಾಡುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಡಬೇಕು.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಮಾನ್ಯ ಅಧ್ಯಕ್ಷರೆ, ತೀರಾ ಆತ್ಮೀಯತೆ ಇದ್ದಾಗ, ಬಹಳ ಹೈ ಎಸ್ಟಿಮೇಷನ್ಸ್ ಇದ್ದಾಗ ಮಾತನಾಡುವುದಕ್ಕೆ ಸ್ವಲ್ಪ ಮುಜುಗರ ಆಗುತ್ತದೆ. ಇವತ್ತು ನಮ್ಮ ಮಾನ್ಯ ಪ್ರಕಾಶ್‌ರವರು ಏಕೆ ಹೀಗೆ ಮಾತನಾಡುತ್ತಿದ್ದಾರೆಂಬುದು ನನಗೆ ಅರ್ಥವಾಗುತ್ತಿಲ್ಲ. ನೀವು ಇನ್‌ಫ್ರಕ್ಚುಯಸ್ ಎಂದು ಹೇಳತಕ್ಕಂಥ ಅಧಿಕಾರ ವ್ಯಾಪ್ತಿ ಕೂಡ ಈ ಹಂತದಲ್ಲಿ ಬರುವುದಿಲ್ಲ. ತಮ್ಮಲ್ಲಿ ಅತ್ಯಂತ ನಮ್ರತೆಯಿಂದ ವಿನಂತಿಸಿಕೊಳ್ಳುತ್ತೇನೆ. ಅಲ್ಲಿ ಪಾರ್ಲಿಮೆಂಟ್‌ನಲ್ಲಿ ಆದಂತಹ ಪ್ರಸಂಗ ಬೇರೆ; ಅಲ್ಲಿ ಪ್ರೆಸಿಡೆಂಟ್‌ರವರು ಬಂದು ಅಡ್ರೆಸ್ ಮಾಡಿ ಹೋದರು, ಮೋಷನ್ ಆಫ್ ಥ್ಯಾಂಕ್ಸ್ ಮೂವ್ ಆಗಿತ್ತು. ಅಲ್ಲಿ ಡಿಬೇಟ್ ಎಲ್ಲಾ ಕಂಪ್ಲೀಟ್ ಆಗಿತ್ತು, ಅದನ್ನು ವೋಟಿಗೆ ಹಾಕುವಂತಹ ಸಂದರ್ಭದಲ್ಲಿ, ಅವರು ನಾನು ರಾಷ್ಟ್ರಪತಿ ಭವನಕ್ಕೆ ಹೋಗುತ್ತಿದ್ದೇನೆ. ನನ್ನ ಸರ್ಕಾರ ಬಹುಮತವನ್ನು ಕಳೆದುಕೊಂಡಿದೆ, ನಾನು ರಾಜೀನಾಮೆಯನ್ನು ಕೊಡುತ್ತಿದ್ದೇನೆಂದು ಹೇಳಿದರು. It did not come before the House for consideration. ಆಗ ಸ್ಪೀಕರ್‌ರವರು ತಮ್ಮ ವಿವೇಚನೆಯನ್ನು ಉಪಯೋಗ ಮಾಡಿ, ಆ ಸರ್ಕಾರವೇ ಹೋಯಿತು. ಅವರು ಪ್ರಿಪೇರ್ ಮಾಡಿದಂತಹ ಡಾಕ್ಯುಮೆಂಟ್ ಹೋಯಿತು. ಆದುದರಿಂದ I treat this as infructuous ಎಂದು ಹೇಳಿದರು. ಇಲ್ಲಿ ತಾವು ಹಾಗೆ ಹೇಳುವುದಕ್ಕೆ ಬರುತ್ತಾ ಇರಲಿಲ್ಲ. ಇಲ್ಲಿ ತಾವು ರೂಲ್ಸ್ ಪುಸ್ತಕವನ್ನು ತೆಗೆದು ನೋಡಿ. Lapse of pending notices; lapse of any correspondence that is before the House . . . .

ಶ್ರೀ ಕ್ಯಾತಸಂದ್ರ ಎನ್. ರಾಜಣ್ಣ: ಇಲ್ಲಿ ಎಲ್ಲರೂ ಹೇಳಿದ ವಿಚಾರವನ್ನೇ ರಿಪೀಟ್ ಮಾಡಿ ಹೇಳುತ್ತಿದ್ದಾರೆ; ಸಭೆಯ ಸಮಯವನ್ನು ಏಕೆ ಹಾಳು ಮಾಡುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು: ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು: ಮಾನ್ಯ ರಮೇಶ್‌ಕುಮಾರ್‌ರವರು ಮಾತನಾಡುತ್ತಿದ್ದಾರೆ, ಅವರು ಮುಗಿಸಲಿ, ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಹೆಚ್.ಡಿ. ಬಸವರಾಜು: ಮಾನ್ಯ ಅಧ್ಯಕ್ಷರೆ, ಅವರು ಚರ್ಚೆ ಮಾಡಲಿ, ಬೇಡ ಎಂದು ಅಲ್ಲ, ಬೆಳಗ್ಗೆಯಿಂದ ಸಂಜೆಯವರೆಗೂ ಒಂದೇ ವಿಷಯದ ಮೇಲೆ ಚರ್ಚೆ ಮಾಡಬೇಕೆಂದರೆ ಪ್ರೊಸೀಜರ್ ಲ್ಯಾಪ್ಸ್ ಆಗುತ್ತದೆ.

ಶ್ರೀ ಮಹದೇವ್: ಮಾನ್ಯ ಅಧ್ಯಕ್ಷರೇ, Is it importent or not ಎಂದು ತಾವು ಹೇಳಬೇಕು. ಇವರು ಟೈಮ್ ವೇಸ್ಟ್ ಮಾಡುತ್ತಾರೆಂದು ಒಂದು ಕಡೆ ಮಾತನಾಡುತ್ತಾರೆ, ಒಂದು ಕಡೆ ಪ್ರೊಸೀಜರ್ ಲ್ಯಾಪ್ಸ್ ಎಂದು ನಾವು ಹೇಳುತ್ತೇವೆ.

ಅಧ್ಯಕ್ಷರು: ಮಾನ್ಯ ಮಹದೇವರವರೇ, ತಾವು ಕುಳಿತುಕೊಳ್ಳಿ, ಇದು ಏನು ಇದು? ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಮಹದೇವ್: ಮಾನ್ಯ ಅಧ್ಯಕ್ಷರೆ, Is it an important matter to be debated or not, ಎಂಬುದನ್ನು ದಯವಿಟ್ಟು ಆಡಳಿತ ಪಕ್ಷದವರಿಗೆ ಹೇಳಬೇಕು. ಅವರು ಇದು ಸಂತೆಕಟ್ಟೆ ಎಂದುಕೊಂಡು ಬಿಟ್ಟಿದ್ದಾರೆ. ಇದು ಪ್ರೊಸಿಜರ್ ಲ್ಯಾಪ್ಸ್ ಅನ್ನುವುದನ್ನು ಅವರು ಅರ್ಥ ಮಾಡಿಕೊಳ್ಳುತ್ತಾ ಇಲ್ಲ.

ಶ್ರೀ ಕ್ಯಾತಸಂದ್ರ ಎನ್. ರಾಜಣ್ಣ: ನಾವು ಅಡ್ವೋಕೇಟ್‌ಗಳೇ, ನಮಗೂ ಅರ್ಥ ಆಗುತ್ತದೆ.

(ಗೊಂದಲ)

ಅಧ್ಯಕ್ಷರು: ಮಾನ್ಯ ಸದಸ್ಯರು ಕುಳಿತುಕೊಳ್ಳಿ, ಮಾನ್ಯ ರಮೇಶ್‌ಕುಮಾರ್‌ರವರೆ, ತಾವು ಮಾತನಾಡಿ, ದಯಮಾಡಿ ಬೇಗ ಮುಗಿಸಿ.

(ಗೊಂದಲ)

ಅಧ್ಯಕ್ಷರು: ಮಾನ್ಯ ಸದಸ್ಯರು ಕುಳಿತುಕೊಳ್ಳಿ, ತಾವು ಪದೇ ಪದೇ ಈ ರೀತಿ ಹೇಳುತ್ತಿದ್ದೀರಿ. ಇದು ಏನು ಇದು?

(ಗೊಂದಲ)

ಶ್ರೀ ಎಂ.ಪಿ. ವೆಂಕಟೇಶ್: ಆರ್ಗ್ಯುಮೆಂಟ್‌ಗೆ ಒಂದು ಸಾರಿ ಚಾನ್ಸ್ ಕೊಡುತ್ತಾರೆ. ಒಂದು ಸಾರಿ ಮಾಡಿ, ಅದು ಬಿಟ್ಟು ಪದೇ ಪದೇ ನಿಂತು ನೀವೇ ಆರ್ಗ್ಯುಮೆಂಟ್ ಮಾಡುತ್ತಿರಾ?

ಅಧ್ಯಕ್ಷರು: ಎಲ್ಲರೂ ಕುಳಿತುಕೊಳ್ಳಿ.

ಡಾ: ಕೆ. ಅನ್ನದಾನಿ: ಆ ಸರ್ಕಾರ ಬಿದ್ದು ಹೋಯಿತು. ಇನ್ನೊಂದು ಸರ್ಕಾರ ಬಂತು. ರಾಜ್ಯಪಾಲರು ಭಾಷಣ ಮಾಡಿದರು, ತಪ್ಪೇನಿದೆ ಅದರಲ್ಲಿ?

ಶ್ರೀ ಮಹದೇವ್: ಇವರಿಗೆ ಹೌಸ್, ಪ್ರೊಸಿಜರ್ ಏನೂ ಇಲ್ಲ, ಇವರು ಸಂತೆಕಟ್ಟೆಯಲ್ಲಿ ಬಾಯಿಯಲ್ಲಿ ಕಿರಚಾಡಿದ ತಕ್ಷಣ ಜನ ಇವರನ್ನು ಕೇಳಿ ಬಿಡುತ್ತಾರೆ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು: ನೀವು ಪದೇ ಪದೇ ನಾಲ್ಕು ಜನರೇ ಮಾತನಾಡುತ್ತಿದ್ದರೆ, ಸಭೆ ಇನ್ನು ಒಂದು ತಿಂಗಳು ನಡೆದರೂ, ನೀವು ನಾಲ್ಕು ಜನರೇ ಮಾತನಾಡುತ್ತೀರಿ. ಇಲ್ಲಿ ಬೇರೆಯವರಿಗೆ ಏನೂ ಚಾನ್ಸ್ ಇಲ್ಲ. ನಮಗೂ ಮಾತನಾಡುವುದಕ್ಕೆ ಹಕ್ಕು ಇದೆ. ನಾವೂ ವಕೀಲರು, ನೀವು ಒಂದು ಸಲ ಆರ್ಗ್ಯುಮೆಂಟ್ ಮಾಡಿ.

ಶ್ರೀ ಮಹದೇವ್: ಈ ಪುಸ್ತಕ ಮಾಡಿದ್ದಾರೆ, ಈ ಪುಸ್ತಕದ ಪ್ರಕಾರ ಆಗಿಲ್ಲವೆಂದು ನಾವು ಹೇಳುತ್ತಿದ್ದೇವೆ.

Sri G.V. SriRamareddy: I want to know from the Chair whether rule of law is prevailing.

(ಗೊಂದಲ)

ಅಧ್ಯಕ್ಷರು: ನೀವು ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು: ದಯಮಾಡಿ ಎಲ್ಲರೂ ಕುಳಿತುಕೊಳ್ಳಿ, ಈ ರೀತಿ ವರ್ತನೆ ಮಾಡುವುದು ಸರಿಯಲ್ಲ. ನೀವು ವಾದ ಮಾಡಿ, ಏನಾದರೂ ಒಂದು ವಿಚಾರ ಇಟ್ಟರೆ, ಅದಕ್ಕೆ ಒಂದು ಪ್ರತಿವಾದ ಇಡಬೇಕೇ ಹೊರತು, ಎಲ್ಲಾ ಇಲ್ಲಿ ತೋಳ್ಬಲವನ್ನು ತೋರಿಸುವುದಕ್ಕೆ ಬಂದರೆ ಏನು? ನಿಮಗೆ ಕುಸ್ತಿ ಪಟುಗಳೆಂದು ಬಿರುದು ಕೊಟ್ಟು ಕಳುಹಿಸೋಣವೇ? ಇದು ಏನು? ಇದು ಸರಿಯಲ್ಲ. ನಾನು ಒಬ್ಬ ಸದಸ್ಯರಿಗೆ ಮಾತನಾಡಲು ಅವಕಾಶವನ್ನು ಕೊಟ್ಟಾಗ ಅವರು ಮಾತನಾಡಬೇಕು. ನೀವು ಏನಾದರೂ ಮಾತನಾಡುವುದಿದ್ದರೆ, ಅವರು ಉತ್ತರ ಕೊಡುವುದಿದ್ದರೆ ಕೇಳಿರಿ, ಅವಕಾಶವನ್ನು ಕೊಡುತ್ತೇನೆ, ಮಾತನಾಡಿ, ಈಗ ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು: ನಾನು ನೇಮ್ ಮಾಡಿ ಹೊರಗಡೆ ಕಳುಹಿಸಿಬಿಡುತ್ತೇನೆ. ಕೆಲವರದ್ದು ಬಹಳ ಅತಿಯಾಯಿತು. ಇಲ್ಲಿಗೆ ನೀವು ಬಂದಿದ್ದೀರಿ? ಜನ ನಿಮ್ಮನ್ನು ನೋಡಿ ಬಾಯಿ ಬಡಿದುಕೊಳ್ಳುತ್ತಿದ್ದಾರೆ. ಇಲ್ಲಿ ಬಹಳ ಜನರಿಗೆ ಹೇಳಬೇಕು, ನೀತಿ ಇಲ್ಲ, ನಿಯಮ ಇಲ್ಲ, ಕುಳಿತುಕೊಳ್ಳಿ, ಏನು ಇದು? ಎಲ್ಲರೂ ಕುಳಿತುಕೊಳ್ಳಿ. ಯಾರಾದರೂ ಇಲ್ಲಿ ಒಬ್ಬರು ಮಾತನಾಡಿದಾಗ, ಮಧ್ಯದಲ್ಲಿ ಏನೋ, ಒಂದು ಹೇಳಿದರೆ, ಎಲ್ಲರೂ ಮಾತನಾಡಿದರೆ, ಏನು ಅರ್ಥ ಇದೆ? ಸಾಕು ಕುಳಿತುಕೊಳ್ಳಿ, ಮಾನ್ಯ ರಮೇಶ್‌ಕುಮಾರ್‌ರವರೆ, ತಾವು ಮಾತನಾಡಿ. ನಾನು ಮಾನ್ಯ ರಮೇಶ್‌ಕುಮಾರ್‌ರವರನ್ನು ಕರೆದಿದ್ದೇನೆ. Please sit down. ಕುಳಿತುಕೊಳ್ಳಿ ನೀವು.

ಶ್ರೀ ವಾಟಾಳ್ ನಾಗರಾಜ್: ನೀವು x ನೀವು x.

ಅಧ್ಯಕ್ಷರು: ನೀವು ಕುಳಿತುಕೊಳ್ಳಿ, ನೀವು ಪ್ರತಿ ಸಾರಿಯೂ ಹದ್ದು ಮೀರಿ ವರ್ತಿಸುತ್ತಿದ್ದೀರಿ. ಏನ್ರಿ ಇದು, ಮಾನ್ಯ ರಮೇಶ್‌ಕುಮಾರ್‌ರವರೆ, ತಾವು ಮಾತನಾಡಿ.

ಶ್ರೀ ವಾಟಾಳ್ ನಾಗರಾಜ್: ನೀವು ಖಂಡಿತ ಈ ರೀತಿ ಮಾಡಬಾರದು, ಇದು ಹಕ್ಕುಚ್ಯುತಿಯಾಗುತ್ತದೆ.

ಅಧ್ಯಕ್ಷರು: ಮಾನ್ಯ ವಾಟಾಳ್ ನಾಗರಾಜ್‌ರವರೆ, ನೀವು ಬಹಳ ಸಲ ಈ ಸದನಕ್ಕೆ ಬಂದಿದ್ದೀರಿ. ನೀವು ಈ ಮನೆಗೆ ಗೌರವದಿಂದ ನಡೆದುಕೊಳ್ಳುತ್ತಿದ್ದಿರಾ, ಎಂದು ನೀವು ನಿಮ್ಮ ಆತ್ಮಸಾಕ್ಷಿಯನ್ನು ಮಾಡಿಕೊಳ್ಳಿ, ಇಲ್ಲಿ ನೀವು ಒಬ್ಬರೇ ಅಲ್ಲ ಸದಸ್ಯರು. ಇಲ್ಲಿ ಬಹಳಷ್ಟು ಜನರು ಗೆದ್ದು ಬಂದಿದ್ದಾರೆ. ನಿಮ್ಮದು ಅತಿಯಾಯಿತು.

ಶ್ರೀ ವಾಟಾಳ್ ನಾಗರಾಜ್: ಹಕ್ಕುಚ್ಯುತಿಯಾಗುತ್ತದೆ, ನೀವು ಕೈ ಹೀಗನ್ನಬಾರದು.

ಅಧ್ಯಕ್ಷರು: ತಾವು ದಯಮಾಡಿ ಕುಳಿತುಕೊಳ್ಳಿ, ಮಾನ್ಯ ರಮೇಶ್‌ಕುಮಾರ್‌ರವರೆ, ತಾವು ಮಾತನಾಡಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: x x x x x x

ಅಧ್ಯಕ್ಷರು: ನೀವು ವಾದ ಮಾಡಬೇಡಿ, ಕುಳಿತುಕೊಳ್ಳಿ.

X ಈ ಪದಗಳನ್ನು ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್(ಕಂದಾಯ ಸಚಿವರು): ಮಾನ್ಯ ವಾಟಾಳ್ ನಾಗರಾಜ್‌ರವರು, ಸಭಾಧ್ಯಕ್ಷರಿಗೆ ಈ ರೀತಿ ಬುದ್ಧಿ ಹೇಳುವುದು ಸರಿಯಲ್ಲ.

(ಗೊಂದಲ)

ಅಧ್ಯಕ್ಷರು: ನಾನು ಪ್ರತಿಯೊಬ್ಬರಿಗೂ ಅವಕಾಸವನ್ನು ಕೊಟ್ಟಾಗ ಅವರು ಮಾತನಾಡಬೇಕು. ಅದು ಬಿಟ್ಟು ಪದೇ ಪದೇ ನಿಂತುಕೊಂಡು, ಪದೇ ಪದೇ ಬಾಯಿ ಬಡಿದುಕೊಳ್ಳುವುದು ಇದು ಏನು? ಇಲ್ಲಿ ಕೆಲವರು ವಿಶೇಷವಾಗಿ ಹಿರಿಯ ಸದಸ್ಯರು ಅಡ್ಡಿ ಮಾಡುತ್ತಿದ್ದೀರಿ. ನೀವು ಮಾರ್ಗದರ್ಶನ ಮಾಡುತ್ತಿಲ್ಲ. This is too much. ಮಾನ್ಯ ರಮೇಶ್‌ಕುಮಾರ್‌ರವರೇ, ತಾವು ಮಾತನಾಡಿ.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೇ, ನೀವು ದಬಾಯಿಸುವಂಥಾದ್ದು ಸರಿಯಲ್ಲ. ನೀವು ಸ್ಪೀಕರ್ ಆಗಿ ಇದ್ದುಕೊಂಡು ದಬಾಯಿಸುವುದಕ್ಕೆ ಹೋಗುತ್ತೀರಲ್ಲಾ.

ಅಧ್ಯಕ್ಷರು: ಕುಳಿತುಕೊಳ್ಳಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನೀವು ಆ ರೀತಿ, x x ನೀವು ನಮಗೆ x x

ಶ್ರೀ ವಾಟಾಳ್ ನಾಗರಾಜ್: ನೀವು ಆ ರೀತಿ ಹೆದರಿಸಬಾರದು.

ಅಧ್ಯಕ್ಷರು: ನಿಮಗೆ ಏನು ಕಿರೀಟ ಇದೆಯಾ? ಪ್ರತಿ ಸರ್ತಿನೂ ನೀವು ಈ ಸಭೆಗೆ ಅಡ್ಡಿ ಮಾಡುತ್ತಿದ್ದೀರಿ. ನಾನು ಹೆದರಿಸುತ್ತಿಲ್ಲ, ನೀವು ಹಿರಿಯ ಸದಸ್ಯರು ಈ ಸಭೆಗೆ ಮಾರ್ಗದರ್ಶನ ಮಾಡಬೇಕು. ನೀವು ಮಾರ್ಗದರ್ಶನ ಮಾಡುತ್ತಿಲ್ಲ, ಪ್ರತಿ ಸಲ ಅಡ್ಡಿ ಮಾಡುವುದು, ನೀವು ಸಭೆಯ ಕಲಾಪಗಳು ಸರಿಯಾದ ರೀತಿಯಲ್ಲಿ ನಡೆಯದೆ ಹಾಗೆ ಮಾಡುತ್ತಿದ್ದೀರಿ, ನಾನು ಇದನ್ನು ಬಹಳ ದಿವಸ ತಡೆಯುವುದಕ್ಕೆ ಆಗುವುದಿಲ್ಲ. ನೀವು ಏನು ತಿಳಿದುಕೊಂಡಿದ್ದೀರಿ. ನಮ್ಮ ಕೋಳಿ ಕೂಗದೇ ಇದ್ದರೆ, ಬೆಳಗು ಆಗುವುದಿಲ್ಲವೆಂದು ಕೆಲವರು ತಿಳಿದುಕೊಂಡು ಬಿಟ್ಟಿದ್ದೀರಿ. This is too much. ಮಾತನಾಡಿರಿ, ರಮೇಶ್‌ಕುಮಾರ್‌ರವರೇ.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಸನ್ಮಾನ್ಯ ಅಧ್ಯಕ್ಷರೆ, ತಾವು ಉದ್ವೇಗಕ್ಕೆ ಒಳಗಾದಿರಿ. ಒಮ್ಮೊಮ್ಮೆ ಆ ರೀತಿ ಆಗುತ್ತದೆ. ನಾನು ಇದ್ದಾಗಲೂ ಆಗುತ್ತಿತ್ತು. ಒಂದೊಂದು ಸಲ ಇವರು ಆ ರೀತಿಯ ಕೆಲಸ ಕೊಡುತ್ತಾರೆ. ಆದರೆ ತಾವು ಸ್ವಲ್ಪ ಸಮಾಧಾನವಾಗಬೇಕು. ನಾನು ಒಂದು ಸಲ ಎದ್ದೇ ಹೋಗಿಬಿಟ್ಟಿದ್ದೆ.

ಅಧ್ಯಕ್ಷರು: ಮಾನ್ಯ ರಮೇಶ್‌ಕುಮಾರ್‌ರವರೆ, ದಯಮಾಡಿ ಕೇಳಿ. ಆ ಕಡೆ ಗಲಾಟೆ ಮಾಡಿದರು, ಈ ಕಡೆ ಗಲಾಟೆ ಮಾಡಿದರು ಎಂದು ನಾನು ಹೇಳುತ್ತಿಲ್ಲ. ಒಂದು ವಿಷಯವೆಂದರೆ, ನೀವು ಈ ಸ್ಥಾನದಲ್ಲಿದ್ದವರು, ವಿಚಾರ ಮಾಡಿ, ಆತ್ಮಶೋಧನೆ ಮಾಡಿಕೊಳ್ಳಿ ನೀವು. ನೀವು ಯಾವಯಾವ ರೀತಿಯಲ್ಲಿ ವರ್ತನೆ ಮಾಡುತ್ತಿದ್ದೀರಿ ಎಂದು ನೋಡಿ. ನಿಮ್ಮ ರಾಜಕೀಯ ಭಿನ್ನಾಭಿಪ್ರಾಯಗಳನ್ನು ಹೊರಗಿಡಿ. ಇಲ್ಲಿ ಒಂದು ಪರ್ಟಿಕ್ಯುಲರ್ ಪಾಯಿಂಟ್ ಇದೆ. ಅದರ ಬಗ್ಗೆ ನೀವು ಬೆಳಕು ಚೆಲ್ಲಿರಿ. ಅದು ಬಿಟ್ಟು ಇದು ಏನಿದು?

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಸಿ.ಎಸ್. ಪುಟ್ಟೇಗೌಡರು ಎದ್ದುನಿಂತು ಮಾತನಾಡಲು ಪ್ರಯತ್ನಿಸಿದರು)

ಅಧ್ಯಕ್ಷರು: ಮಾನ್ಯ ಸದಸ್ಯರು ದಯಮಾಡಿ ಕುಳಿತುಕೊಳ್ಳಿ, ಮಾತನಾಡಿ ಮಾನ್ಯ ರಮೇಶ್‌ಕುಮಾರ್‌ರವರೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಆದ್ದರಿಂದ, ...

ಶ್ರೀ ಸಿ.ಎಸ್. ಪುಟ್ಟೇಗೌಡ: ತಾವು ಈಲ್ಡ್ ಆದರೆ ನಾನು ನನ್ನ ಅಭಿಪ್ರಾಯವನ್ನು ಹೇಳುತ್ತೇವೆ.

ಅಧ್ಯಕ್ಷರು: ದಯಮಾಡಿ ಕುಳಿತುಕೊಳ್ಳಬೇಕು.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಮಾನ್ಯ ಪುಟ್ಟೇಗೌಡರು ಬಹಳ ಅಪರೂಪಕ್ಕೆ ಏಳುತ್ತಾರೆ. ನಾನು ಈಲ್ಡ್ ಆಗುತ್ತೇನೆ.

ಶ್ರೀ ಸಿ.ಎಸ್. ಪುಟ್ಟೇಗೌಡ: ಮಾನ್ಯ ಸಭಾಧ್ಯಕ್ಷರೇ, ...

ಅಧ್ಯಕ್ಷರು: ದಯಮಾಡಿ ಕುಳಿತುಕೊಳ್ಳಿ. ನಾನು ನಿಮ್ಮನ್ನು ಕರೆದಿಲ್ಲ. ನಾನು ಕರೆದಿರುವುದು ರಮೇಶ್‌ಕುಮಾರ್‌ರವರನ್ನು.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಮಾನ್ಯ ಅಧ್ಯಕ್ಷರೆ, ಮಾನ್ಯ ರಾಜ್ಯಪಾಲರು ಸಭೆಯನ್ನು ಉದ್ದೇಶಿಸಿ 19ನೇ ತಾರೀಖು ಮಾಡಿದಂಥ ಭಾಷಣ ಹೇಗೆ infructuous ಆಗುತ್ತಾ ಇರಲಿಲ್ಲ ಎನ್ನತಕ್ಕಂಥ ವಾದವನ್ನು ನಾನು ಮಂಡಿಸಿದೆ. ನಾವು ಮುಖ್ಯವಾಗಿ ನಮ್ಮ ಮನಸ್ಸಿನಲ್ಲಿ ಇಟ್ಟುಕೊಳ್ಳಬೇಕಾಗಿರತಕ್ಕಂಥಾದ್ದು ನಮ್ಮ ಸದನದ ನಿಯಮಾವಳಿಗಳು. ನಮ್ಮ ಸದನದ ಮುಂದೆ ಇರತಕ್ಕಂಥ ಯಾವುವೇ ಒಂದು ಕಲಾಪ, ನಾವು ಕೊಟ್ಟಿರತಕ್ಕಂಥ ಒಂದು ನೋಟೀಸ್, ಒಂದು ಪತ್ರ, ಇನ್ನೊಂದು ಅಥವಾ ಮತ್ತೊಂದು, ಸದನ prorogue ಆದಾಗ it automatically gets lapsed. ತಾವು ಬೇಕಾದರೆ ತರಿಸಿ ನೋಡಿ. ಆದರೆ, ಇಲ್ಲಿ ಏನಾಗಿದೆ ಎಂದರೆ, ಸದನ prorogue ಆಗಿರಲಿಲ್ಲ. ಸದನ ಕಂಟಿನ್ಯೂ ಆಗಿದೆ. ಆದ್ದರಿಂದ, we have to give due regard to the Rules and Procedure of this House also. ನಾನು ಹೆಚ್ಚು ಮಾತನಾಡಲಿಲ್ಲ. ಪ್ರಮುಖವಾಗಿ ಇರುವುದು ಇಷ್ಟೇ, x x x x ತಾವು, ತಮ್ಮ ಕಾರ್ಯಾಲಯದವರು ನೋಟೀಸನ್ನು ಕಳುಹಿಸಬೇಕಾಗಿದ್ದರೆ, ಯಾರು ಈ ನೋಟೀಸನ್ನು ಕಳುಹಿಸಿರುವುದು. ನಾವು ಅವರಿಗೆ ಬರುವುದಕ್ಕೆ ಹೇಳುತ್ತಿದ್ದೇವೆಯೇ ಅಥವಾ ಅವರು ಬರುತ್ತಿದ್ದಾರೆಯೇ? ಯಾವುದೇ ವಿಷಯ ಇಲ್ಲದೇ, ಇದ್ದಕ್ಕಿದ್ದಹಾಗೆ ಮತ್ತೆ ಹೋಗಿ ಅವರನ್ನು ಕರೆಯುತ್ತಿದ್ದೇವಲ್ಲಾ, ಇದಕ್ಕೆ ಸಂವಿಧಾನದಲ್ಲಿ ಅವಕಾಶವಿದೆಯೇ ಅಥವಾ ಇಲ್ಲವೇ ಎಂದು ತಮ್ಮಲ್ಲೂ ಕೂಡ ಆಲೋಚನೆ ಮಾಡಿಲ್ಲ. ಇವೆರಡರ ಮೇಲಾಗಿ, ಎಲ್ಲೋ ಅಚಾತುರ್ಯವಾಗಿದೆ, ಸರಿಪಡಿಸಿಕೊಳ್ಳೋಣ ಎನ್ನತಕ್ಕಂಥ ಮಾತನ್ನು ಹೇಳದೇ, ಆರ್ಟಿಕಲ್ 176ಕ್ಕೂ 175ಕ್ಕೂ ಏನು ವ್ಯತ್ಯಾಸವಾಗುತ್ತದೆ ಎನ್ನುವ ಮಾತನ್ನು ಹೇಳುತ್ತಿದ್ದಾರೆ. ಸಂವಿಧಾನವನ್ನು ತಮ್ಮ ತಮ್ಮ ಮನಸ್ಸಿಗೆ ಬಂದಂತೆ ಯಾರೂ ಹಾಗೆ ತರ್ಜುಮೆ ಮಾಡಲು ಬರುವುದಿಲ್ಲ. ಮಾಡಬಾರದು ಎಂದು ಎಲ್ಲಿದೆ, ತೋರಿಸಿ ಎಂದು ಬೆಳಗ್ಗೆ ಮಾನ್ಯ ಉಪ ಮುಖ್ಯಮಂತ್ರಿಗಳು ಹೇಳಿದರು. ಪಿಕ್‌ಪಾಕೆಟ್ ಮಾಡತಕ್ಕಂಥಾದ್ದು ಕಾನೂನು ರೀತಿ ಅಪರಾಧ. ಕ್ರಿಮಿನಲ್ ಪ್ರೊಸೀಜರ್ ಕೋಡ್‌ನಲ್ಲಿ, ಇಂಡಿಯನ್ ಪೀನಲ್ ಕೋಡ್‌ನಲ್ಲಿ ಎಲ್ಲಿಯೂ ಪಿಕ್ ಪಾಕೆಟ್ ಮಾಡಬಾರದು ಎಂದು ಬರೆದಿಲ್ಲ. ಪಿಕ್‌ಪಾಕೆಟ್ ಮಾಡಿದರೆ ಶಿಕ್ಷೆ ಏನು ಎಂದು ಅದರಲ್ಲಿ ಹೇಳಿದ್ದಾರೆ.

---

x ಈ ಪದಗಳನ್ನು ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ಶ್ರೀ ಎಂ.ಪಿ. ಪ್ರಕಾಶ್: ಇದು ವಿತಂಡವಾದ.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಆಯಿತು Allright. ವಿತಂಡವಾದ ಎಂದು ನಮ್ಮ ಹಿರಿಯರು ಹೇಳಿದರೂ ಕೂಡ, ಅಷ್ಟನ್ನಾದರೂ ಕೂಡ ನಾನು ನಿಮ್ಮಿಂದ ಕಲಿತುಕೊಂಡೆನಲ್ಲಾ, ನೀವು ನಮ್ಮ ಗುರುಗಳು.

ಶ್ರೀ ಜಗದೀಶ್ ಶೆಟ್ಟರ್(ಕಂದಾಯ ಸಚಿವರು): ಮಾನ್ಯ ರಮೇಶ್‌ಕುಮಾರ್‌ರವರೆ, ತಾವು ಆ ಪೀಠದಲ್ಲಿ ಕುಳಿತಿದ್ದಂಥವರು. ರಾಜ್ಯಪಾಲರ ಭಾಷಣಕ್ಕೆ ಪಿಕ್‌ಪಾಕೆಟ್ ಮಾಡುವಂತಹ ಉದಾಹರಣೆ ಕೊಡುವಂಥಾದ್ದು ಸಮಂಜಸವಲ್ಲ.

ಶ್ರೀ ಎಂ.ಪಿ. ಪ್ರಕಾಶ್: ಮಾನ್ಯ ಜಗದೀಶ್ ಶೆಟ್ಟರ್‌ರವರೇ, ಪಿಕ್‌ಪಾಕೆಟ್ ಮಾಡಬಾರದು ಎನ್ನುವುದು ಕಾನೂನಿನಲ್ಲಿ ಇದೆ. ಪಿಕ್‌ಪಾಕೆಟ್ ಮಾಡುವುದು ಅಫೆನ್ಸ್, ಇಂಥ ಪ್ರೊಸೀಜರ್ ಕೆಳಗೆ ಅವರನ್ನು ಅರೆಸ್ಟ್ ಮಾಡಬೇಕು, ಹೀಗೆ ಶಿಕ್ಷೆ ಕೊಡಬೇಕು ಎನ್ನತಕ್ಕಂಥಾದ್ದು ಇದೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಮಾಡಿದರೆ, ಮಾಡಿದಾಗ ಎಂದು ಇದೆ.

ಶ್ರೀ ಎಂ.ಪಿ. ಪ್ರಕಾಶ್: ಮಾಡಿದಾಗ, ಹೌದು.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಮಾಡಬಾರದು ಎಂದು ಎಲ್ಲೂ ಬರೆದಿಲ್ಲ. (ನಗು)

ಶ್ರೀ ಎಂ.ಪಿ ಪ್ರಕಾಶ್: ಅದನ್ನೇ ನಾನು ಹೇಳುತ್ತಿದ್ದೇನೆ. ಕಾನೂನಿನ ಪ್ರಕಾರ, ಇಂಥಿಂಥಾದ್ದನ್ನು ಮಾಡಬಾರದು, ಇದು ಶಿಕ್ಷಾರ್ಹವಾದಂಥ ಅಪರಾಧ ಎಂದು ಇದೆ. ಉಳಿದಿರತಕ್ಕಂಥದ್ದು ಮಾಡಿಲ್ಲ ಅಂದರೆ ಮಾಡಬಹುದು ಎಂದು ಪರಿಭಾವಿಸಬೇಕಾದುದಿಲ್ಲ. ಅದೇ ರೀತಿಯಾಗಿ, ನೀವು ಕೊಟ್ಟಿರತಕ್ಕಂಥ ಉದಾಹರಣೆ ಇದಕ್ಕೆ ಸರಿಯಾದಂಥ ಉದಾಹರಣೆಯಲ್ಲ. ಸಂವಿಧಾನದಲ್ಲಿ ಇಂಥ ಒಂದು ಅಸಾಮಾನ್ಯ ಸ್ಥಿತಿ ಉಂಟಾಗಬಹುದು ಎಂದು ಹೇಳಿ, ಅಂಥಾದ್ದನ್ನು ಊಹೆ ಮಾಡಲಿಕ್ಕೆ ಸಾಧ್ಯವಿಲ್ಲದೇ ಇದ್ದಂಥ ಸಂದರ್ಭ ಇದ್ದಾಗ, ಕಾನೂನಿನ ಪುಸ್ತಕದಲ್ಲಿ ಕೆಲವೊಂದು ಸಲ ಮೌನ ವಹಿಸುತ್ತದೆ. ಆ ರೀತಿ ಮೌನ ವಹಿಸಿದಂಥ ಸಂದರ್ಭಗಳಲ್ಲಿ, ಅದಕ್ಕೆ ನಾವು ಕಾನೂನಿನ ತಿದ್ದುಪಡಿಯನ್ನಾದರೂ ತರಬಹುದು ಅಥವಾ ಹೊಸ ಸಂಪ್ರದಾಯವನ್ನಾದರೂ ಸೃಷ್ಟಿಸಬಹುದು.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಇವೆಲ್ಲಕ್ಕಿಂತ ಪರಮ ಪ್ರಾಮುಖ್ಯತೆಯನ್ನು ಹೊಂದಿರತಕ್ಕಂಥ ವಿಷಯವೆಂದರೆ, ಆರ್ಟಿಕಲ್ 176ರ ಕೆಳಗೆ ಸಂವಿಧಾನಬದ್ಧವಾಗಿ ಚರ್ಚೆಯಲ್ಲಿ ಪಾಲ್ಗೊಳ್ಳತಕ್ಕಂಥ, ಅಭಿಪ್ರಾಯವನ್ನು ವ್ಯಕ್ತ ಮಾಡತಕ್ಕಂಥ ಹಕ್ಕು ಏನಿದೆ, ಅದನ್ನು 175ರ ಕೆಳಗೆ ನಾನು ಕಳೆದುಕೊಳ್ಳುತ್ತೇನೆ. ಈ ಸದನದ ಒಬ್ಬ ಗೌರವಾನ್ವಿತ ಸದಸ್ಯನಾಗಿ, ಸಂವಿಧಾನಬದ್ಧವಾಗಿ ಜನತೆ ನನ್ನನ್ನು ಆಯ್ಕೆ ಮಾಡುವುದರ ಮುಖಾಂತರ ನನಗೆ ಕೊಟ್ಟಿರುವ ಹಕ್ಕುಗಳನ್ನು ಕಳೆದುಕೊಳ್ಳಲಿಕ್ಕೆ ನಾನು ತಯಾರಿಲ್ಲ. ನಮ್ಮ ಹಕ್ಕಿನ ಉಲ್ಲಂಘನೆ ಆಗಬಾರದು. ಇಷ್ಟು ವಿಚಾರಗಳನ್ನು ತಮ್ಮಲ್ಲಿ ನಿವೇದಿಸಿಕೊಂಡು ತಮ್ಮನ್ನು ಮೊದಲುಗೊಂಡು ನಾವೆಲ್ಲರೂ ಕೂಡ, ಕೆಲವರನ್ನು ಬಿಟ್ಟು, ಬಹಳ ಸಾಮಾನ್ಯ ಕುಟುಂಬಗಳಿಂದ ಈ ಸದನಕ್ಕೆ ಬಂದಂಥವರು. ಈ ವಿಧಾನಸೌಧದ ಮೆಟ್ಟಿಲನ್ನು ಹತ್ತಬೇಕಾದರೆ ನಾವು ಒಂದೊಂದು ಕಲ್ಲಿಗೂ ನಮಸ್ಕಾರ ಮಾಡಿ ಹತ್ತುತ್ತೇವೆ. ನಾವು ನಮ್ಮ ತಂದೆ ತಾಯಿ ಮಾಡಿರುವ ಪುಣ್ಯ, ನಮ್ಮ ಹಣೆಬರಹ, ನಮ್ಮ ಹಿಂದಿನ ಚರಿತ್ರೆ, ನಮಗೆ ಯಾವುದೋ ಒಂದು ರೀತಿಯ ಸೌಭಾಗ್ಯ ಇದೆ. ಇದೇನೂ ಸಣ್ಣ ವಿಷಯವಲ್ಲ. ರಾಜಕಾರಣಿಗಳ ಬಗ್ಗೆ ಯಾರು ಎಷ್ಟೇ ಲಘುವಾಗಿ ಮಾತನಾಡಿದರೂ ಕೂಡ, ರಾಜಕಾರಣಿಗಳು, ಮಂತ್ರಿಗಳು, ಮುಖ್ಯಮಂತ್ರಿಗಳು

ಬಗ್ಗೆ ಮಾತನಾಡಿದರೂ ಕೂಡ, ಇದಕ್ಕೇನು ಪಾವಿತ್ರ್ಯತೆ ಇದೆ, ಏನು ಗಾಂಭೀರ್ಯತೆ ಇದೆ, ಘನತೆ ಇದೆ ಎನ್ನತಕ್ಕಂಥಾದ್ದನ್ನು ನಿಜವಾದ ಅರ್ಥದಲ್ಲಿ ಅನುಭವಿಸುವವರಿಗೆ ಮಾತ್ರ ಸಿಗುತ್ತದೆ. ಆ ಒಂದು ತೃಪ್ತಿಯನ್ನು ನಾವು ಪಡೆದುಕೊಂಡಿದ್ದೇವೆ. ನಮಗೆ, ನಮ್ಮ ಹಕ್ಕುಗಳು, ನಮ್ಮ ಗೌರವಗಳು ಇವುಗಳ್ಯಾವುವೂ ನಮಗೆ ವ್ಯಕ್ತಿಗತವಾಗಿ ಬಂದದ್ದಲ್ಲ; ಪಿತ್ರಾರ್ಜಿತವಲ್ಲ. ಸಂವಿಧಾನಬದ್ಧವಾಗಿ, ಜನತೆಯ ಪುಣ್ಯದಿಂದ ನಮಗೆ ಇವು ಬಂದಿರತಕ್ಕಂಥಾದ್ದು. ಅದಕ್ಕೆ ತಿಲಾಂಜಲಿ ಕೊಡಲಿಕ್ಕೆ ನಾನು ತಯಾರಾಗಿಲ್ಲ. ನನ್ನ ಗೆಳೆಯರಾದ ಅನ್ನದಾನಿಯವರು ಇವತ್ತು ಏಕೋ ಬಹಳ ಸಿಟ್ಟಿನಲ್ಲಿದ್ದರು. 'ಎಲ್ಲೋ ಜೋಗಪ್ಪ ನಿನ್ನರಮಾನೆ', ರಾಚಯ್ಯನವರಿಂದ ಶುರು ಮಾಡಿ, ಬಸವಲಿಂಗಪ್ಪನವರಾದಿಯಾಗಿ ಇಲ್ಲಿಗೆ ಬಂದು ನಿಂತಿದೆ ಈ ಸಭೆ. ತಮಗೆ ಸ್ವಲ್ಪ ಚರಿತ್ರೆಯ ಪರಿಚಯವಿರಲಿ, ಈ ರಾಜ್ಯದ ಸಾಮಾಜಿಕ ಜೀವನ ಪರಿಚಯ ನಿಮಗಿರಲಿ, ಸಂವಿಧಾನದ ಸವಲತ್ತುಗಳು ಯಾರ್ಯಾರಿಗೆ ಹೇಗೆ ಒದಗಿ ಬಂದಿತು, ಯಾವ ರೀತಿಯ ಶಕ್ತಿ ತುಂಬಿದೆ, ಹೇಗಿದ್ದವನು, ಹೇಗೆ ಎದ್ದು ನಿಂತಿದ್ದಾನೆ" ಎನ್ನುವುದು ತಮಗೆ ನೆನಪಿರಲಿ ಎಂದು ಮನವಿ ಮಾಡಿಕೊಂಡು, ನಾನು ನಿಮ್ಮನ್ನು ಚುಚ್ಚುತ್ತಿಲ್ಲ, ವ್ಯಂಗ್ಯ ಮಾಡುತ್ತಿಲ್ಲ, ನನ್ನ ಮಾತುಗಳನ್ನಾಡುವುದಕ್ಕೆ ನನಗೆ ತಾವು ಅವಕಾಶ ಕೊಟ್ಟಿದ್ದಕ್ಕೆ ತಮಗೆ ನನ್ನ ನಮಸ್ಕಾರಗಳನ್ನು ತಿಳಿಸಿ ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ.

ಅಧ್ಯಕ್ಷರು: ಇಡೀ ದಿನ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಕೆಲವು ಮುಖಂಡರುಗಳು. . . . .

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಜೆ.ಸಿ. ಮಾಧುಸ್ವಾಮಿಯವರು ಮಾತನಾಡಲು ಪ್ರಯತ್ನಿಸಿದರು)

ಅಧ್ಯಕ್ಷರು: ದಯಮಾಡಿ ಕುಳಿತುಕೊಳ್ಳಿ.

ಶ್ರೀ ಜೆ.ಸಿ. ಮಾಧುಸ್ವಾಮಿ: ನಾನು ಸ್ವಲ್ಪ ಮಾತನಾಡಬೇಕಾಗಿದೆ. ಈ ವಿಷಯಕ್ಕಲ್ಲ. ತಾವು ಪದೇ ಪದೇ, ಜನ ಬಾಯಿ ಬಡಿದುಕೊಂಡು ನಗುತ್ತಾರೆ, ಜನ ಹಾಗೆ ಮಾಡುತ್ತಾರೆ, ಹೀಗೆ ಮಾಡುತ್ತಾರೆಂದು ಹೇಳಿ, ತಾವು ಇಡೀ ಶಾಸನಸಭೆಯ ಸದಸ್ಯರನ್ನು ಸಾರ್ವಜನಿಕರ ದೃಷ್ಟಿಯಲ್ಲಿ ಸಣ್ಣವರನ್ನಾಗಿ ಮಾಡಲಿಕ್ಕೆ ಪ್ರಯತ್ನ ಮಾಡುತ್ತಿದ್ದೀರಿ. X X X X

ಅಧ್ಯಕ್ಷರು: ಹೌದು ಸ್ವಾಮಿ. ಮಾನ್ಯ ಮಾಧುಸ್ವಾಮಿಯವರಿಗೆ ನಾನು ಹೇಳುತ್ತೇನೆ, ಇಲ್ಲಿ ತಾವು ಏನೊಂದು ನಡವಳಿಕೆ ಮಾಡುತ್ತೀರಿ, ದಯವಿಟ್ಟು ಕೇಳಿ ಮಾಧುಸ್ವಾಮಿಯವರೇ,....

ಶ್ರೀ ಜೆ.ಸಿ. ಮಾಧುಸ್ವಾಮಿ: ದಯವಿಟ್ಟು ನೀವು ಕೈ ತೋರಿಸಬೇಡಿ.

ಅಧ್ಯಕ್ಷರು: ಕೇಳಿ, ಮಾನ್ಯ ಮಾಧುಸ್ವಾಮಿಯವರೇ. ಎಲ್ಲರಿಗೂ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡುತ್ತೇನೆ, ಆದರೆ ಎಲ್ಲರೂ ಮಧ್ಯೆಮಧ್ಯೆ ಎದ್ದುನಿಂತುಕೊಂಡು ತಾವು ಯಾವ ರೀತಿ ನಡೆದುಕೊಳ್ಳುತ್ತಿದ್ದೀರಿ, ಸಭೆಯ ನಡವಳಿಕೆ ಯಾವ ರೀತಿ ಆಗುತ್ತಿದೆ ಎನ್ನುವುದರ ಬಗ್ಗೆ ನಾನು ಹೇಳಬೇಕಾಗುತ್ತದೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಜನ ನಮ್ಮನ್ನು ನೋಡಿ ಬಾಯಿಬಡಿದುಕೊಳ್ಳುವಂಥ ಸ್ಥಿತಿ ಬಂದಿಲ್ಲ ಸಾರ್. ಈ ಸಭೆ ನಡೆಯುವುದನ್ನು ನೋಡಿ ಜನ ಬಾಯಿ ಬಡಿದುಕೊಳ್ಳುತ್ತಿದ್ದಾರೆ. ಅದಕ್ಕೆ ಯಾರು ಜವಾಬ್ದಾರರು? ನಾವಾ?

X ಈ ಪದಗಳನ್ನು ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.